

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 8 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 171 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸರ್ಕಾರಿ, ಅನುದಾನಿತ ಶಾಲೆಗಳಿಗೆ ಅ.18ರವರೆಗೆ ದಸರಾ ರಜೆ ವಿಸ್ತರಣೆ


ಜಾತಿ ಗಣತಿಗೆ ಮತ್ತಷ್ಟು ಕಾಲಾವಕಾಶ

ಬೆಂಗಳೂರು, ಅ.7– ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ನಾಳೆ (ಅ.8)ಯಿಂದ ಅಕ್ಟೋಬರ್ 18ರವರೆಗೆ ದಸರಾ ರಜೆಯನ್ನು ಸರ್ಕಾರ ವಿಸ್ತರಣೆ ಮಾಡಿದೆ.

ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯುತ್ತಿರುವ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಕಾರ್ಯ ಇಂದು ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಇನ್ನೂ ಕೆಲವು ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಪೂರ್ಣಗೊಂಡಿಲ್ಲ. ಹೀಗಾಗಿ ಸಂಪುಟ ಸಹೋದ್ಯೋಗಿಗಳೊಂದಿಗೆ ಮುಖ್ಯಮಂತ್ರಿ ಚರ್ಚಿಸಿದ ನಂತರ ಮತ್ತೆ 10 ದಿನಗಳ ಕಾಲ ವಿಸ್ತರಿಸಲು ನಿರ್ಧರಿಸಲಾಗಿದೆ. ಸಂಪುಟದ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ನಿರ್ಧಾರ ಪ್ರಕಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮೀಕ್ಷೆ ಕಾರ್ಯ ಕೆಲವು ಜಿಲ್ಲೆಗಳಲ್ಲಿ ಬಹುತೇಕ ಪೂರ್ಣಗೊಂಡಿದ್ದರೆ, ಕೆಲವು ಕಡೆಗಳಲ್ಲಿ ಇನ್ನೂ ಪೂರ್ಣಗೊಂಡಿಲ್ಲ. ಕೊಪ್ಪಳ ಜಿಲ್ಲೆಯಲ್ಲಿ ಶೇ. 97, ಉಡುಪಿಯಲ್ಲಿ ಶೇ. 63, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ.60ರಷ್ಟು ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ.

ಶಾಲಾ ಶಿಕ್ಷಕರ ಮನವಿ ಮೇರೆಗೆ ಕ್ರಮ: ಅಕ್ಟೋಬರ್ 7ರಂದು ಸಮೀಕ್ಷೆ ಪೂರ್ಣಗೊಳಿಸಲು ನಿರ್ಧರಿಸಿದ್ದೆವು. ಆದರೆ, ನಿರೀಕ್ಷೆಯಂತೆ ರಾಜ್ಯದ ಹಲವೆಡೆ ಸಮೀಕ್ಷೆ ಕಾರ್ಯ ಪೂರ್ಣಗೊಂಡಿಲ್ಲ. ರಾಜ್ಯದಲ್ಲಿ 1.20 ಲಕ್ಷ ಶಿಕ್ಷಕರು ಸಮೀಕ್ಷೆ ಕಾರ್ಯದಲ್ಲಿ ಭಾಗಿಯಾಗಿದ್ದು, ಸಮೀಕ್ಷೆ ಕಾರ್ಯ ಪೂರ್ಣಗೊಳ್ಳಲು ದಸರಾ ರಜೆ ವಿಸ್ತರಣೆ ಮಾಡುವಂತೆ ರಾಜ್ಯ ಶಿಕ್ಷಕರ ಸಂಘ ಮನವಿ ಮಾಡಿತ್ತು. ■ 6ನೇ ಪುಟಕ್ಕೆ

ಪಠ್ಯದಲ್ಲಿ ರಾಮಾಯಣ




ಬೆಂಗಳೂರು, ಅ.7– ಶಾಲಾ ಪಠ್ಯದಲ್ಲಿ ರಾಮಾಯಣ ಸೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಪ್ರಶಸ್ತಿಗಳನ್ನು ವಿತರಿಸಿ ಅವರು ಮಾತನಾಡಿದರು.

ಈ ವೇಳೆ, ವಾಲ್ಮೀಕಿ ಅವರ ರಾಮಾಯಣವನ್ನು ಪಠ್ಯದಲ್ಲಿ ಸೇರಿಸಬೇಕು ಎಂದು ಉಗ್ರಪ್ಪ ಅವರು ಮಾಡಿದ ಮನವಿಗೆ ಪ್ರತಿಕ್ರಿಯಿಸಿ, ನಿಮ್ಮ ಬೇಡಿಕೆ ಬಗ್ಗೆ ಸಕಾರಾತ್ಮಕವಾಗಿ ಪರಿಗಣಿಸಲಾಗುವುದು ಎಂದು ಭರವಸೆ ನೀಡಿ ಎಲ್ಲರ ಚಪ್ಪಾಳೆ ಸಂಪಾದಿಸಿದರು.

ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರು ಆಸ್ಪತ್ರೆಗೆ ದಾಖಲು

ಬೆಂಗಳೂರು, ಅ.7– ಜೆಡಿಎಸ್ ಮುಖ್ಯಸ್ಥ ಎಚ್.ಡಿ.ದೇವೇಗೌಡ ಅವರನ್ನು ಅನಾರೋಗ್ಯದ ಕಾರಣ ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಚಳಿ ಜ್ವರ ಮತ್ತು ಮೂತ್ರದ ಸೋಂಕಿನ ಕಾರಣದಿಂದ ಅವರ ಆರೋಗ್ಯದಲ್ಲಿ ಏರುಪೇರಾಗಿತ್ತು. ತಜ್ಞ ವೈದ್ಯರ ತಂಡವು ಚಿಕಿತ್ಸೆ ನೀಡುತ್ತಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಎಚ್.ಡಿ.ದೇವೇಗೌಡ ಅವರು ನಿನ್ನೆಯಿಂದ 'ಐಸಿಯು'ನಲ್ಲಿ ಇದ್ದಾರೆ. ಇನ್ನೂ ಎರಡು ದಿನ ಅಲ್ಲಿಯೇ ಇರುವ ಸಾಧ್ಯತೆಯಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.



ಮೈಸೂರಲ್ಲಿ ಹಾಡಹಗಲೇ ವ್ಯಕ್ತಿಯ ಕೊಚ್ಚಿ ಕೊಲೆ

ದಸರಾ ವಸ್ತುಪ್ರದರ್ಶನ ರಸ್ತೆಯಲ್ಲಿ ಆರು ಮಂದಿಯಿಂದ ಕೃತ್ಯ



ದುಷ್ಕರ್ಮಿಗಳ ಗುಂಪು ವೆಂಕಟೇಶನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲ್ಲುತ್ತಿರುವುದು.

ಮೈಸೂರು, ಅ.7(ಆರ್‌ಕೆ, ಜಿಎ)– ಗುಂಪೊಂದು ಮಾರಕಾಸ್ತ್ರಗಳಿಂದ ದಾಳಿ ನಡೆಸಿ ವ್ಯಕ್ತಿಯೋರ್ವನನ್ನು ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿರುವ ಘಟನೆ ಮೈಸೂರಿನ ದೊಡ್ಡಕೆರೆ ಮೈದಾನದ ಬಳಿಯ ದಸರಾ ವಸ್ತುಪ್ರದರ್ಶನ ರಸ್ತೆಯಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.

ಮೈಸೂರಿನ ಕ್ಯಾತಮಾರನಹಳ್ಳಿಯ ಅಶ್ವತ್ಥಕಟ್ಟೆ ಬಳಿಯ ನಿವಾಸಿ ವೆಂಕಟೇಶ್ ಅಲಿಯಾಸ್ ಗಿಲ್ಕಿ ವೆಂಕಟೇಶ್ (38) ಕೊಲೆಯಾದ ವ್ಯಕ್ತಿ. ಹಣಕಾಸು ಲೇವಾದೇವಿದಾರನಾಗಿದ್ದ ಈತ, ತಮ್ಮ ಮಾರುತಿ ಸ್ವಿಫ್ಟ್ (ಕೆಎ 05, ಎನ್.ಬಿ. 9574) ಕಾರಿನಲ್ಲಿ ಅರಮನೆ ಪೂರ್ವದ್ವಾರ (ಜಯಮಾರ್ತಾಂಡ)ದ ಮುಂದಿನ ಬಿ.ಎನ್.ರಸ್ತೆ ಕಡೆಯಿಂದ ದಸರಾ ವಸ್ತುಪ್ರದರ್ಶನ ರಸ್ತೆ ಮೂಲಕ ಇಟ್ಟಿಗೆಗೂಡು ಕಡೆಗೆ ಹೋಗುತ್ತಿದ್ದಾಗ ಇಂದು ಬೆಳಿಗ್ಗೆ 11.30ರ ವೇಳೆಗೆ ಜ್ವಾಲಾಮುಖಿ ಹೋಟೆಲ್ ಜಂಕ್ಷನ್ ಬಳಿಯ ಅರಳಿಮರದ ಹತ್ತಿರ ಹಿಂದಿನಿಂದ ಆಟೋ, ದ್ವಿಚಕ್ರ ವಾಹನದಲ್ಲಿ ಬಂದ ಆರು ಮಂದಿ ಕಾರು ಅಡ್ಡಗಟ್ಟಿ ವೆಂಕಟೇಶ್ ಕಣ್ಣಿಗೆ ಖಾರದ ಪುಡಿ ಎರಚಿ, ಮಚ್ಚು–ಲಾಂಗ್‌ನಿಂದ ಮನಸೋ ಇಚ್ಛೆ ಕೊಚ್ಚಿ ಕೊಲೆಗೈದು ಪರಾರಿಯಾಗಿದೆ.




ಗಿಲ್ಕಿ ವೆಂಕಟೇಶ್

ಕಾರ್ತಿಕ್ ಜೊತೆ ವೈಷಮ್ಯ : ಕಳೆದ ಮಾರ್ಚ್‌ನಲ್ಲಿ ವರುಣಾ ಬಳಿ ಟಿ.ನರಸೀಪುರ ರಸ್ತೆಯಲ್ಲಿರುವ ಹೋಟೆಲ್‌ವೊಂದರ ಮುಂದೆ ಇದೇ ■ 6ನೇ ಪುಟಕ್ಕೆ

ಜಾಲಿವುಡ್ ಸ್ಟುಡಿಯೋಸ್‌ಗೆ ಬೀಗ: ಬಿಗ್ ಬಾಸ್ ಸ್ಪರ್ಧಿಗಳ ಸ್ಥಳಾಂತರ

ರಾಮನಗರ, ಅ.7– ಪರಿಸರ ನಿಯಮ ಉಲ್ಲಂಘನೆ ಆರೋಪದಲ್ಲಿ ಜಾಲಿವುಡ್ ಸ್ಟುಡಿಯೋಸ್‌ಗೆ ಬೀಗ ಬಿದ್ದಿದೆ. ಬಿಗ್ ಬಾಸ್ ನಡೆಯುತ್ತಿರುವ ಜಾಗಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಬೀಗ ಜಡಿದಿದ್ದು, ಸ್ಪರ್ಧಿಗಳನ್ನು ಸ್ಥಳಾಂತರ ಮಾಡಲಾಗಿದೆ.

ನಿಯಮ ಮೀರಿ ಜಾಲಿವುಡ್ ಸ್ಟುಡಿಯೋಸ್ ನಡೆಸುತ್ತಿರುವ ಬಗ್ಗೆ ನೋಟಿಸ್ ನೀಡಲಾಗಿತ್ತು. ಆದರೆ, ಯಾವುದೇ ನಿಯಮ ಪಾಲನೆ ಆಗದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಇಂದು ಸಂಜೆ ಸ್ಟುಡಿಯೋಸ್‌ಗೆ ಭೇಟಿ ನೀಡಿದರು. ರಾಮನಗರ ತಹಶೀಲ್ದಾರ್ ತೇಜಸ್ವಿನಿ, ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ■ 6ನೇ ಪುಟಕ್ಕೆ



ಅಧಿಕಾರ ಹಂಚಿಕೆ ಗೊಂದಲದಲ್ಲಿದ್ದ ಅಧಿಕಾರಿಗಳು, ರಾಜಕಾರಣಿಗಳಿಗೆ ಸಿಎಂ ಶಾಕ್

ಮುಂದಿನ ಎರಡೂವರೆ ವರ್ಷದ ಅಭಿವೃದ್ಧಿ ನೀಲನಕ್ಷೆ ರೆಡಿ ಮಾಡಿ

ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳಿಗೆ ಸಿದ್ದರಾಮಯ್ಯ ಆದೇಶ

ಬೆಂಗಳೂರು, ಅ.7(ಕೆಎಂಶಿ)– ಮುಂದಿನ ಎರಡೂವರೆ ವರ್ಷಗಳ ಆಡಳಿತಾವಧಿಯಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿಯ ನೀಲಿ ನಕಾಶೆ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಇಂದಿಲ್ಲಿ ಖಡಕ್ ಆದೇಶ ಮಾಡಿದ್ದಾರೆ.



ಶಾಲಿನಿ ರಜನೀಶ್

ಗೃಹ ಕಚೇರಿ ಕಾವೇರಿಗೆ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಇಲಾಖಾ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿದ ಸಿದ್ದರಾಮಯ್ಯ, ಮುಂದಿನ ಎರಡೂವರೆ ವರ್ಷಗಳ ಆಡಳಿತದ ನೀಲಿ ನಕಾಶೆ ಸಿದ್ಧಪಡಿಸಿ ಎನ್ನುವ ಮೂಲಕ ನಾನೇ ಅಧಿಕಾರದಲ್ಲಿ ಮುಂದುವರೆಯುತ್ತೇನೆ. ನಿಮ್ಮಲ್ಲಿರುವ ಗೊಂದಲಕ್ಕೆ ತೆರೆ ಎಳೆಯಿರಿ ಎಂಬ ಸಂದೇಶವನ್ನು ಪರೋಕ್ಷವಾಗಿ ಅಧಿಕಾರಿಗಳಿಗೆ ನೀಡಿದ್ದಾರೆ.

ಅಧಿಕಾರ ಹಂಚಿಕೆ ಗೊಂದಲದಲ್ಲಿ ಸಿಲುಕಿದ್ದ ಅಧಿಕಾರಿಗಳು ಅಭಿವೃದ್ಧಿ ಕಾರ್ಯದ ಕಡೆ ಹೆಚ್ಚು ಗಮನಹರಿಸದೆ, ಸಚಿವರುಗಳ ಮಾತಿಗೂ ಮತ್ತು ಕಡತಗಳಿಗೂ ಮಹತ್ವ ನೀಡುತ್ತಿರಲಿಲ್ಲ. ■ 6ನೇ ಪುಟಕ್ಕೆ



ಸಮಂತಾ ಜೋಯಾಲುಕ್ಕಾಸ್‌ನ ನೂತನ ಬ್ರಾಂಡ್ ಅಂಬಾಸಿಡರ್



ಸಮಂತಾ ರುತ್‌ಪ್ರಭು

ಮೈಸೂರು: ವಿಶ್ವದ ಪ್ರತಿಷ್ಠಿತ ಜ್ಯುವೆಲ್ಲರ್‌ಗಳಾದ ಜೋಯಾಲುಕ್ಕಾಸ್ ತನ್ನ ಸಂಸ್ಥೆಯ ನೂತನ ಬ್ರಾಂಡ್ ಅಂಬಾಸಿಡರ್ ಆಗಿ ಸೂಪರ್‌ಸ್ಟಾರ್ ಸಮಂತಾ ರುತ್‌ಪ್ರಭು ಅವರನ್ನು ನಿಯೋಜಿಸಿದೆ. ಪ್ರಶಸ್ತಿ ಪುರಸ್ಕೃತ ನಟಿಯಾದ ಸಮಂತಾ ಅವರು ಜೋಯಾಲುಕ್ಕಾಸ್ ಅಭರಣಗಳ ಕಾಲಾತೀತ ವಿನ್ಯಾಸ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರಕುಶಲತೆಯ ಪರಂಪರೆಯನ್ನು ಪ್ರತಿನಿಧಿಸಲು ತಮ್ಮ ವರ್ಚಸ್ಸನ್ನು ತುಂಬಲಿದ್ದಾರೆ.

ಸಮಂತಾ ಅವರ ಪ್ರೀತಿಯ ಮೋಡಿ ಮತ್ತು ಅನುರೂಪ ಚೆಲುವು ಜೋಯಾಲುಕ್ಕಾಸ್‌ನ ಮೂರು ದಶಕಗಳ ಪಯಣವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸಲಿದೆ. ಇದು ಕಲಾತ್ಮಕತೆ, ನಂಬಿಕೆ ಮತ್ತು ವಿಶ್ವದಾದ್ಯಂತ ಲಕ್ಷಾಂತರ ಗ್ರಾಹಕರನ್ನು ಸಂತಸಪಡಿಸುವ ಅಚಲ ಬದ್ಧತೆಯ ಮೇಲೆ ನಿರ್ಮಿಸಲಾಗಿದೆ.

ಸಮಂತಾ ಆತ್ಮವಿಶ್ವಾಸ, ಸೊಗಸಾದ ಶೈಲಿ ಮತ್ತು ವಿಶಿಷ್ಟವಾದ ನೈಜ ಮತ್ತು ಆಧುನಿಕ ಮಹಿಳೆಯ ಚೈತನ್ಯವನ್ನು ಸಾಕಾರಗೊಳಿಸಲಿದ್ದಾರೆ. ಅವರ ವ್ಯಕ್ತಿತ್ವವು ಜೀವನದ ಅಮೂಲ್ಯ ಕ್ಷಣಗಳನ್ನು ಉತ್ತಮ ಆಭರಣಗಳೊಂದಿಗೆ ಆಚರಿಸುವ ನಮ್ಮ ನೀತಿಯೊಂದಿಗೆ ದೃಢವಾಗಿ ಪ್ರತಿಧ್ವನಿಸುತ್ತದೆ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಡಾ. ಜೋಯ್ ಅಲುಕ್ಕಸ್ ತಿಳಿಸಿದರು. ಜಗತ್ತಿನಾದ್ಯಂತ ಆಭರಣ ಪ್ರಿಯರನ್ನು ಆಕರ್ಷಿಸುವುದನ್ನು ನಾವು ಮುಂದುವರೆಸುತ್ತಿರುವಾಗ, ಅವರನ್ನು ಜೋಯಾಲುಕ್ಕಾಸ್ ಕುಟುಂಬಕ್ಕೆ ಸ್ವಾಗತಿಸುವುದು ಸಂಸ್ಥೆಯ ಗೌರವವಾಗಿದೆ ಎಂದಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಸಮಂತಾ, ಆಭರಣಗಳು ನಾನು ಯಾರೆಂಬುದರ ವೈಯಕ್ತಿಕ ಅಭಿವ್ಯಕ್ತಿಯಾಗಿದೆ. ಪ್ರತಿಯೊಂದು ತುಣುಕಿನ ಹಿಂದೆಯೂ ಭಾವನೆ, ಆಚರಣೆ ಮತ್ತು ಶಕ್ತಿಯ ಕಥೆಯಾಗಿದೆ. ಜೋಯಾಲುಕ್ಕಾಸ್ ಈ ಎಲ್ಲಾ ಅಂಶಗಳನ್ನು ಮತ್ತು ಇನ್ನೂ ಹೆಚ್ಚಿನದನ್ನು ಒಳಗೊಂಡಿದೆ. ಸೌಂದರ್ಯವನ್ನು ವಸ್ತುವಿನೊಂದಿಗೆ ಆಚರಿಸುವ ಮತ್ತು ಎಲ್ಲೆಡೆ ಮಹಿಳೆಯರು ಆತ್ಮವಿಶ್ವಾಸದಿಂದ ಹೊಳೆಯಲು ಪ್ರೇರೇಪಿಸುವ ಬ್ರ್ಯಾಂಡ್‌ನೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲು ನಾನು ರೋಮಾಂಚನಗೊಂಡಿದ್ದೇನೆ.

ನಾಳೆ ಮೈಸೂರಲ್ಲಿ ಡಾ.ವಿಷ್ಣುವರ್ಧನ್ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ

ಮೈಸೂರು,ಅ.7(ಜಿಎ)–ಡಾ.ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಮೈಸೂರಿನ ಸೌಂಡ್ ಎನ್ ರಿದಂ ಆರ್ಕೆಸ್ಟ್ರಾ ವತಿ ಯಿಂದ ಅ.9ರಂದು ಸಂಜೆ 5.30ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಾ.ವಿಷ್ಣುವರ್ಧನ್ ಅವರ ಚಿತ್ರಗೀತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಂಡದ ಮುಖ್ಯಸ್ಥ ಎ.ಎಸ್.ರವಿಶಂಕರ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ 16 ಮಂದಿ ಗಾಯಕರು ಒಟ್ಟು 29 ಗೀತೆಗಳನ್ನು ಹಾಡಲಿದ್ದಾರೆ. ಇದು ಸಂಪೂರ್ಣ ಉಚಿತ ಪ್ರವೇಶದ ಕಾರ್ಯಕ್ರಮವಾಗಿದ್ದು, ಎಲ್ಲರೂ ಹವ್ಯಾಸಿ ಗಾಯಕರು, ಉತ್ತಮ ತರಬೇತಿ ಪಡೆದುಕೊಂಡು ಕರೋಕೆ ಗಾಯನ ಮಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಗೇಂದ್ರ, ಮಂಜುಳಾ, ಕೆ.ಡಿ.ತಿಮ್ಮರಾಜು, ಗಂಗಾಧರ್ ಉಪಸ್ಥಿತರಿದ್ದರು.

ರಾಷ್ಟ್ರ ಮಟ್ಟದ ಯೋಗ ಸ್ಪರ್ಧೆಗೆ ಆಯ್ಕೆ



ಮೈಸೂರು, ಅ.7–ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್ ವತಿಯಿಂದ ಶಿವಮೊಗ್ಗ ಜಿಲ್ಲೆ ಸಾಗರ ಪಟ್ಟಣದಲ್ಲಿ ನಡೆದ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ 30–35 ವಯೋಮಿತಿಯ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಸಂತೋಷ್ ಸೂರ್ಯ ಭಾಗವಹಿಸಿ, ಚಿನ್ನದ ಪದಕ ಪಡೆದಿದ್ದಾರೆ. ಈ ಮೂಲಕ ಯೋಗ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಅ.8ರಿಂದ 12ರವರೆಗೆ ನಡೆಯುವ ರಾಷ್ಟ್ರ ಮಟ್ಟದ ಯೋಗ ಸ್ಪರ್ಧೆಗೆ ಆಯ್ಕೆಯಾಗಿ, ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಈತ ಯೋಗ ಸಂಸ್ಥೆಯಾದ ಜಿಎಸ್‌ಎಸ್, ವಿವೇಕಾನಂದ ಯೋಗ ಶಿಕ್ಷಣ ವಿದ್ಯಾರ್ಥಿಯಾಗಿದ್ದು, ಮೂಲತಃ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕು ಕುಂತೂರು ನಿವಾಸಿ.

ಅಭಿಯಂತರರ ದಿನಾಚರಣೆ...



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಲಯನ್ ಕ್ಲಬ್ ಆಫ್ ಮೈಸೂರು ಗಂಗೋತ್ರಿ ಸಂಸ್ಥೆ ವತಿಯಿಂದ ಶಿಕ್ಷಕರ ಹಾಗೂ ಅಭಿಯಂತರರ ದಿನಾಚರಣೆ ಪ್ರಯುಕ್ತ ಇಂಜಿನಿಯರ್ ಸಾರಂಗಪಾಣಿ, ಉಪಾಧ್ಯಾಯರಾದ ಬೋರೇಗೌಡ, ರಾಮೇಗೌಡ, ರಾಮಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕ್ಲಬ್ ಅಧ್ಯಕ್ಷೆ ಚಂದ್ರಕಲಾ ರಮೇಶ್, ಕಾರ್ಯದರ್ಶಿ ಅನುರಾಧ ನಂದೀಶ್, ಖಜಾಂಚಿ ಬೋಜಮ್ಮ ಕಾರ್ಯಪ್ಪ, ಸತೀಶ್, ಗಾಯಿತ್ರಿ ಜಗದೀಶ್ ಹಾಗೂ ಸಂಸ್ಥೆಯ ಸದಸ್ಯರು ಉಪಸ್ಥಿತರಿದ್ದರು.


ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು, ಅ. 7– ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಬಡ ವಿದ್ಯಾವಂತ ನಿರುದ್ಯೋಗಿ ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ ಮತ್ತು ಉದ್ಯೋಗ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತರಬೇತಿಯ ಅವಧಿ 3 ತಿಂಗಳು ಇರುತ್ತದೆ. ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆವರೆಗೆ ತರಗತಿ ನಡೆಯಲಿದ್ದು, ತರಗತಿಯಲ್ಲಿ ಬಿಪಿಓ, ಕಂಪ್ಯೂಟರ್ ಕೌಶಲ, ಕಮ್ಯುನಿಕೇಶನ್ ಕೌಶಲ ಉಚಿತ ತರಬೇತಿ ನೀಡಲಾಗುವುದು. ಕನಿಷ್ಠ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಆಗಿರಬೇಕು, ವಯಸ್ಸು 18ರಿಂದ 35 ವರ್ಷ ಒಳಗಿರಬೇಕು. ಆರ್ಥಿಕವಾಗಿ ಹಿಂದುಳಿದ ವಿದ್ಯಾವಂತ ಬಡ ಯುವತಿಯರು ತರಬೇತಿಗೆ ಅರ್ಹರಾಗಿರುತ್ತಾರೆ.

ಬೇಕಾಗಿರುವ ದಾಖಲಾತಿಗಳು: ಶೈಕ್ಷಣಿಕ ದಾಖಲಾತಿಗಳು, ಆಧಾರ್ ಕಾರ್ಡ್, ಆದಾಯ ಪ್ರಮಾಣ ಪತ್ರ/ ಬಿಪಿಎಲ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ ನೀಡಬೇಕಾಗುತ್ತದೆ. ಮಾಹಿತಿಗಾಗಿ ಸಮರ್ಥನಂ ಅಂಗವಿಕಲರ ಸಂಸ್ಥೆ, ನಂ.676, ನ್ಯೂ ಕೆ–21, ಲಕ್ಷ್ಮಿ ಚಿತ್ರ ಮಂದಿರ ಹತ್ತಿರ, ಚಾಮರಾಜ ಜೋಡಿ ರಸ್ತೆ ಅಗ್ರಹಾರ, ಮೈಸೂರು ಅಥವಾ 6364867818, 9035084948, 9035084949 ಸಂಪರ್ಕಿಸಬಹುದು.

ನಿಧನ

ಎಂ.ಬಿ.ಸತ್ಯನಾರಾಯಣ



ಮೈಸೂರು, ಅ. 7– ನಿವೃತ್ತ ಕೆಎಸ್‌ಆರ್‌ಟಿಸಿ ಅಸಿಸ್ಟೆಂಟ್ ಟ್ರಾಫಿಕ್ ಕಂಟ್ರೋಲರ್ ಮತ್ತು ಗೋಕುಲಂ ನಿವಾಸಿ ಎಂ.ಬಿ. ಸತ್ಯನಾರಾಯಣ (70) ಮಂಗಳವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರದೇವಮ್ಮ



ಮೈಸೂರು, ಅ.7–ಮೈಸೂರು ತಾಲೂಕು ಮೆಲ್ಲಹಳ್ಳಿ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಮರದೇವಮ್ಮ (80) ಅವರು ಇಂದು ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಮಧ್ಯಾಹ್ನ 12 ಗಂಟೆಗೆ ಮೆಲ್ಲಹಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಸರಾ ಮಹೋತ್ಸವದಲ್ಲಿ ಅಕ್ರಮ, ಅವ್ಯವಸ್ಥೆಗೆ ಆಕ್ರೋಶ

ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರ ಪ್ರತಿಭಟನೆ

ಮೈಸೂರು,ಅ.7(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಜಂಬೂಸವಾರಿ ಮೆರವಣಿಗೆಯನ್ನು ಯಶಸ್ವಿಯಾಗಿ ನೆರವೇರಿಸಿದ ಗಜಪಡೆಯ ಮಾವುತರು, ಕಾವಾಡಿಗಳಿಗೆ ಗೌರವಧನ ನೀಡದಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಗಜಪಡೆಯ ಮಾವುತರು ಮತ್ತು ಕಾವಾಡಿಗಳಿಗೆ ಗೌರವ ಧನ ನೀಡದಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆಯ ಕಾರ್ಯಕರ್ತರು ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು, ಲಕ್ಷಾಂತರ ಮಂದಿ ವೀಕ್ಷಿಸಿದ ಜಂಬೂಸವಾರಿ ಮೆರವಣಿಗೆಯಲ್ಲಿ ದಸರಾ ಗಜಪಡೆಯನ್ನು ಯಶಸ್ವಿಯಾಗಿ ಮುನ್ನಡೆಸಿದ ಮಾವುತರು, ಕಾವಾಡಿಗಳಿಗೆ ಪ್ರತಿವರ್ಷ ಗೌರವ ಧನ ನೀಡಿ, ಬೀಳ್ಕೊಡಲಾಗುತ್ತಿತ್ತು. ಆದರೆ ಈ ಬಾರಿ ಗೌರವ ಧನ ನೀಡದೆ ಬರಿಗೈಯ್ಯಲ್ಲಿ ಕಳುಹಿಸಲಾಗಿದೆ. ಇದನ್ನು ಗಮನಿಸಿದರೆ ಭ್ರಷ್ಟಾಚಾರ ನಡೆದಿರುವ ಶಂಕೆ ಇದೆ ಎಂದು ಆರೋಪಿಸಿದರು.

ಈ ಬಾರಿ ದಸರಾದಲ್ಲಿ ಅವ್ಯವಹಾರ, ಹಗರಣ, ಹಗಲು ದರೋಡೆ ಹೆಚ್ಚಾಗಿದ್ದು, ರಾಜಕಾರಣಿಗಳ ಸಂಬಂಧಿಕರ ವೈಭವೀಕರಣವಾಗಿದೆ. ದಸರಾ ವೀಕ್ಷಣೆಗೆ ಬಂದ ಸಾರ್ವಜನಿಕರು ಸರಕಾರಕ್ಕೆ ಹಿಡಿಶಾಪ ಹಾಕಿ ಹೋಗಿದ್ದಾರೆ. ಪ್ರತಿ ವರ್ಷದಂತೆ ಈ ಬಾರಿ ಕೂಡ ಗೋಲ್ಡ್ ಕಾರ್ಡ್‌ಗಳಲ್ಲಿ ಗೋಲ್‌ಮಾಲ್ ನಡೆದಿದೆ. 6500 ರೂ., ಕೊಟ್ಟು ಅವುಗಳ ಖರೀದಿ ಮಾಡಿದವರನ್ನೂ ಅರಮನೆ ಒಳಗೆ ಬಿಟ್ಟಿಲ್ಲ. ರೊಚ್ಚಿಗೆದ್ದ ಪಾಸುದಾರರು ರಾಜಕಾರಣಿಗಳು ಮತ್ತು ಅಧಿಕಾರಿಗಳ ಕುಟುಂಬಕ್ಕೆ ಛೀಮಾರಿ ಹಾಕಿದರು. ಇಷ್ಟೆಲ್ಲಾ ಛೀಮಾರಿ ಹಾಕಿದ್ದರೂ ಸರ್ಕಾರ ನಮಗೂ ಅದಕ್ಕೂ ಸಂಬಂಧವಿಲ್ಲದಂತೆ ಯಾವುದೇ ರೀತಿಯ ಉತ್ತರ ನೀಡದೆ ಮೌನಕ್ಕೆ ಶರಣಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಂಬೂಸವಾರಿ ಮೆರವಣಿಗೆಯ ರೂವಾರಿಗಳಾದ ಮಾವುತರು ಹಾಗೂ ಕಾವಾಡಿಗರಿಗೆ ಅರಮನೆ ಮಂಡಳಿಯಿಂದ ಗೌರವಧನ ನೀಡದೆ ಅವಮಾನ ಮಾಡಿದ್ದಾರೆ. ಕೋಟ್ಯಾಂತರ ರೂ. ಖರ್ಚು ಮಾಡಿ ದಸರಾ ನಡೆಸಿದ್ದರೂ, ಮಾವುತರು, ಕಾವಾಡಿಗಳಿಗೆ ಗೌರವಧನ ಕೊಡಲು ಹಣ ಇರಲಿಲ್ಲವೇ ಎಂದು ಪ್ರಶ್ನಿಸಿದರು.

ಕೆಲ ರಾಜಕಾರಣಿಗಳ ಸಂಬಂಧಿಗಳು, ಹಿಂಬಾಲಕರು, ಗೋಲ್ಡ್ ಪಾಸ್ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಪಾಸ್ ತೋರಿಸಿ, ಜಿಲ್ಲಾಡಳಿತ ವ್ಯವಸ್ಥೆ ಅಣಕಿಸಿದ್ದಾರೆ. ಇವರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳಲಿಲ್ಲ. ಈ ಪಾಸ್ ಎಲ್ಲಿಂದ ಬಂತು. ಇವರಿಗೆ ಯಾರು ಕೊಟ್ಟರು ಎಂಬುದೇ ಯಕ್ಷಪ್ರಶ್ನೆಯಾಗಿದೆ.

ದಸರಾ ಮಹೋತ್ಸವದಲ್ಲಿ ಸಂಚಾರ ಅವ್ಯವಸ್ಥೆಯಾಗಿತ್ತು. ಮೈಸೂರಿನ ಎಲ್ಲಾ ರಸ್ತೆಗಳಲ್ಲಿ ಉದ್ದೇಶಪೂರ್ವಕವಾಗಿ ಟ್ರಾಫಿಕ್ ಜಾಮ್ ಆಗುವಂತೆ ಮಾಡಿ ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡಿದ್ದಾರೆ. ಹಲವೆಡೆ ಏಕಮುಖ ಸಂಚಾರ ಮಾಡಿದ್ದರಿಂದ ವಾಹನ ಸವಾರರು ಪರದಾಡಿದ್ದಾರೆ. ದಸರಾ ವೇಳೆಯಲ್ಲಿ ಗುಂಡಿ ಬಿದ್ದಿರುವ ರಸ್ತೆಗೆ ಡಾಂಬರೀಕರಣ ಮಾಡಲಿಲ್ಲ. ಪ್ರತಿ ವರ್ಷ ದಸರಾದಲ್ಲಿ ಕೋಟ್ಯಾಂತರ ರೂ ಹಣ ಬಿಡುಗಡೆ ಮಾಡಿದರೂ ಪ್ರಾಯೋಜಕರಿಂದ ಹಣ ಪಡೆದರೂ, ಆ ಹಣದ ಬಗ್ಗೆ ಮಾಹಿತಿ ನೀಡುವುದಿಲ್ಲ. ಅಧಿಕಾರಿಗಳು ಮತ್ತು ರಾಜಕಾರಣಿಗಳು ಈ ಹಣವನ್ನು ಲೂಟಿ ಮಾಡುತ್ತಿದ್ದಾರೆ ಎಂದು ದೂರಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾ ಬೀದಿ ರವಿ, ಗುರುಬಸಪ್ಪ, ಗೋಪಿ, ಪ್ಯಾಲೇಸ್ ಬಾಬು, ಸಿದ್ದಪ್ಪ, ಹರೀಶ್, ಗೋವಿಂದರಾಜು, ಸ್ವಾಮಿ, ಚಿನ್ನಪ್ಪ, ಶಿವುಗೌಡ, ಮಾದಪ್ಪ, ಸ್ವಾಮಿ ಗೈಡ್, ಸುನಿಲ್, ಚಾಮರಾಜ ಮಂಟಗಳ್ಳಿ, ಮಹದೇವಸ್ವಾಮಿ, ಮಾದಪ್ಪ, ರಮೇಶ್, ಚೆಲುವರಾಯ ಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಮಾವುತರು, ಕಾವಾಡಿಗಳ ಬ್ಯಾಂಕ್ ಖಾತೆಗೆ ಗೌರವ ಧನ ಜಮಾ

ಅರಮನೆ ಮಂಡಳಿ ಸ್ಪಷ್ಟನೆ

ಮೈಸೂರು,ಅ.7–ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಆನೆಗಳ ಮಾವುತರು ಮತ್ತು ಕಾವಾಡಿಗಳ ಪಟ್ಟಿಯನ್ನು ಮೈಸೂರಿನ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿಗಳು ನೀಡುವುದು ವಿಳಂಬವಾದ್ದರಿಂದ ಅವರಿಗೆ ಗೌರವಧನ ಪಾವತಿಸಲು ವಿಳಂಬವಾಗಿದೆ ಎಂದು ಮೈಸೂರು ಅರಮನೆ ಮಂಡಳಿ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಮಾವುತರು ಮತ್ತು ಕಾವಾಡಿಗಳಿಗೆ ನಗದು ರೂಪದಲ್ಲಿ ಇದುವರೆಗೂ ಗೌರವಧನ ಪಾವತಿಸಲಾಗುತ್ತಿತ್ತು. ಈ ಬಾರಿ ಮಾವುತರು ಮತ್ತು ಕಾವಾಡಿಗಳ ವಿವರದ ಪಟ್ಟಿಯನ್ನು ಅ.5ರ ಭಾನುವಾರ ನೀಡಿದ್ದು, ಅಂದು ಬ್ಯಾಂಕ್ ರಜೆ ಇದ್ದ ಕಾರಣ ಹಣವನ್ನು ಡ್ರಾ ಮಾಡಲು ಸಾಧ್ಯವಾಗಿಲ್ಲ ಎಂದು ಹೇಳಿದ್ದಾರೆ.

ಇದೀಗ ಮಾವುತರು ಮತ್ತು ಕಾವಾಡಿಗರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಗೌರವ ಧನವನ್ನು ಪಾರದರ್ಶಕ ದೃಷ್ಟಿಯಿಂದ ನಿಯಮಾನುಸಾರ ಜಮೆ ಮಾಡುವಂತೆ ದಸರಾ ವಿಶೇಷಾಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿಗಳು ಸೂಚಿಸಿದ್ದು, ಅದರಂತೆ ಕ್ರಮ ವಹಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ದೊಡ್ಡಹಟ್ಟಿ ಬೋರೇಗೌಡ' ಚಿತ್ರಕ್ಕೆ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ

ಚಿತ್ರತಂಡದಿಂದ ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ 'ದೊಡ್ಡಹಟ್ಟಿ ಬೋರೇಗೌಡ' ಚಿತ್ರತಂಡ.

ಮೈಸೂರು,ಅ.7(ಜಿಎ)–ರಾಜ್ಯ ಚಲನ ಚಿತ್ರ ಪ್ರಶಸ್ತಿಯಲ್ಲಿ 'ದೊಡ್ಡಹಟ್ಟಿ ಬೋರೇಗೌಡ' ಚಿತ್ರವನ್ನು ಮೊದಲನೇ ಅತ್ಯುತ್ತಮ ಚಲನಚಿತ್ರವೆಂದು ಆಯ್ಕೆ ಮಾಡಿರುವ ರಾಜ್ಯ ಸರ್ಕಾರಕ್ಕೆ 'ದೊಡ್ಡಹಟ್ಟಿ ಬೋರೇಗೌಡ' ಕೃತಜ್ಞತೆ ಸಲ್ಲಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ದೇಶಕ ಕೆ.ಎಂ.ರಘು ಮಾತನಾಡಿ, 'ದೊಡ್ಡಹಟ್ಟಿ ಬೋರೇಗೌಡ' ಚಿತ್ರಕ್ಕೆ ಅತ್ಯುತ್ತಮ ಚಿತ್ರ, ಅತ್ಯುತ್ತಮ ಚಿತ್ರಕಥೆ, ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗಳು ಸಹ ದೊರೆತಿವೆ. 58 ಚಿತ್ರಗಳ ಪೈಕಿ ನಮ್ಮ ಚಿತ್ರ ಆಯ್ಕೆಗೊಂಡಿರುವುದು ಸಂತಸ ತಂದಿದೆ ಎಂದರು.

2006ರಲ್ಲಿ ಸಹಾಯಕ ನಿರ್ದೇಶಕನಾಗಿ ತಾವು ಚಿತ್ರರಂಗ ಪ್ರವೇಶಿಸಿದ್ದು, ತರ್ಲೆ ವಿಲೇಜ್, ಜಸ್ಟ್‌ಪಾಸ್ ಚಿತ್ರಗಳನ್ನು ನಿರ್ದೇಶಿಸಿದ್ದು, ದೊಡ್ಡಹಟ್ಟಿ ಬೋರೇಗೌಡ ಮೂರನೇ ಚಿತ್ರವಾಗಿದೆ. ಈ ಚಿತ್ರ ಕೇವಲ 50 ಲಕ್ಷ ರೂ.ಗಳಲ್ಲಿ ನಿರ್ಮಾಣವಾಗಿದೆ. ದೊಡ್ಡ ದೊಡ್ಡ ಸ್ಟಾರ್ ನಟ, ನಟಿಯರು ಇಲ್ಲದೇ ರಂಗಭೂಮಿ ಪ್ರತಿಭೆಗಳನ್ನು ಬಳಸಿಕೊಂಡು ನಗರದ ಹೊರವಲಯದ ಗದ್ದಿಗೆ ಭಾಗದಲ್ಲಿ ಸಂಪೂರ್ಣ ಚಿತ್ರೀಕರಣವಾಗಿದೆ. ಇದಕ್ಕಾಗಿ ಒಂದು ಮನೆಯನ್ನೇ ನಿರ್ಮಿಸಲಾಯಿತು. ಸರ್ಕಾರದಿಂದ ಮನೆ ಮಂಜೂರು ಮಾಡಿಸಿಕೊಳ್ಳಲು ವ್ಯಕ್ತಿಯೊಬ್ಬ ಪರದಾಡುವ ಕಥೆಯ ಚಿತ್ರ ಇದಾಗಿದೆ. ಈಗಲೂ ಚಿತ್ರ ಯೂಟ್ಯೂಬ್‌ನಲ್ಲಿ ಲಭ್ಯವಿದೆ. ಎಲ್ಲರೂ ಉಚಿತವಾಗಿ ವೀಕ್ಷಿಸಬಹುದು ಎಂದು ತಿಳಿಸಿದರು.

ಚಿತ್ರದ ನಾಯಕ ನಟ ಶಿವಣ್ಣ ಮಾತನಾಡಿ, ದೊಡ್ಡಹಟ್ಟಿ ಬೋರೇಗೌಡ ಚಿತ್ರಕ್ಕೆ ಅತ್ಯುತ್ತಮ ಚಿತ್ರ, ಅತ್ಯುತ್ತಮ ಚಿತ್ರಕಥೆ, ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗಳು ದೊರೆತಿರುವುದು ಸಂತಸದ ವಿಚಾರ. ಆದರೆ, ಎಲ್ಲಾ ಕಲಾವಿದರೂ ಅದ್ಭುತವಾಗಿ ನಟಿಸಿದ್ದಾರೆ. ಉತ್ತಮ ನಟ, ನಟಿ, ಪೋಷಕ ನಟ, ನಟಿಯ ಪ್ರಶಸ್ತಿ ನೀಡಬಹುದಾಗಿತ್ತು. ಆಯ್ಕೆ ಸಮಿತಿ ಮತ್ತೊಮ್ಮೆ ಈ ವಿಷಯವಾಗಿ ಪರಿಶೀಲಿಸಿದರೆ, ಉತ್ತಮ ಎಂದರು.

ನಿರ್ಮಾಪಕ ಶಶಿಕುಮಾರ್, ಕಲಾವಿದರಾದ ಆನಂದ್, ಕಲಾವತಿ, ಮಾದೇವ, ಮೈಸೂರು ಪ್ರೇಮಾ, ಕಾತ್ಯಾಯಿನಿ, ಗೀತಾ ರಂಗವಲ್ಲಿ ಉಪಸ್ಥಿತರಿದ್ದರು.

ಶ್ರೀ ಧರ್ಮಸ್ಥಳ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್‌ನಲ್ಲಿ ವಿಚಾರ ಸಂಕಿರಣ

ಮೈಸೂರು,ಅ.7–ಮೈಸೂರಿನ ಶ್ರೀ ಧರ್ಮಸ್ಥಳ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಎಮರ್ಜಿಂಗ್ ಟ್ರೆಂಡ್ಸ್ ಇನ್ ಕಾರ್ಪೊರೇಟ್ ಫೈನಾನ್ಸ್ ಅಂಡ್ ಫೈನಾನ್ಶಿಯಲ್ ಮಾರ್ಕೆಟಿಂಗ್ ವಿಷಯ ಕುರಿತು ಅ.17 ಮತ್ತು 18ರಂದು ಅಂತರ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಮುಂಬಯಿಯ ಎನ್‌ಎಸ್‌ಇ ಲಿ.ನ ಮುಖ್ಯ ಆರ್ಥಿಕ ತಜ್ಞ ಡಾ.ತೀರ್ಥಂಕರ್ ಪಟ್ನಾಯಕ್ ವಿಚಾರ ಸಂಕಿರಣ ಉದ್ಘಾಟಿಸಿ ಪ್ರಧಾನ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಎಸ್‌ಡಿಎಂ–ಐಎಮ್‌ಡಿ ನಿರ್ದೇಶಕ (ಲೆಫ್ಟಿನೆಂಟ್ ಕರ್ನಲ್) ಡಾ.ಪ್ರಸಾದ್ ಎಸ್.ಎನ್. ಉಪಸ್ಥಿತರಿರಲಿದ್ದಾರೆ. ಸಮಾರೋಪ ಸಮಾರಂಭ ಅ.18ರಂದು ನಡೆಯಲಿದ್ದು, ಬೆಂಗಳೂರಿನ ಪಿಡಬ್ಲ್ಯೂಸಿಯ ಮ್ಯಾನೇಜಿಂಗ್ ಡೈರೆಕ್ಟರ್ (ಡೀಲ್ಸ್) ರಾಮಕೃಷ್ಣ ಸುಬ್ರಹ್ಮಣ್ಯಮ್ ಸಮಾರೋಪ ಭಾಷಣ ಮಾಡಲಿದ್ದಾರೆ.

ಅ.16ರಂದು ಸಖಿ ದಸರಾ ಉತ್ಸವ್

ಮೈಸೂರು, ಅ.7–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಮಹಿಳೆಯರಿಗಾಗಿ ಅ.16ರಂದು ಸಖಿ ದಸರಾ ಉತ್ಸವ್ ಕಾರ್ಯಕ್ರಮವನ್ನು ಆಯೋಜಿಸಿದೆ. 20 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಮಹಿಳೆಯರಿಗಾಗಿ ಕೇಶವಿನ್ಯಾಸ ಸ್ಪರ್ಧೆ ಹಾಗೂ ಕನ್ನಡ ಚಲನಚಿತ್ರ ಗೀತ ಗಾಯನ ಸ್ಪರ್ಧೆ ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಮನೆಯಿಂದಲೇ ಕೇಶವಿನ್ಯಾಸ ಮಾಡಿಕೊಂಡು ತೀರ್ಪುಗಾರರ ಮುಂದೆ ಪ್ರದರ್ಶಿಸಬಹುದಾಗಿದೆ. ಕನ್ನಡ ಚಲನ ಚಿತ್ರಗೀತೆಯಲ್ಲಿ ಭಾಗವಹಿಸುವವರು ಚಿತ್ರ ಹಾಗೂ ವಾಣಿ ಜಯರಾಂ ಹಾಡಿರುವ ಚಿತ್ರಗೀತೆಗಳನ್ನು ಮಾತ್ರವೇ ಹಾಡಬಹುದು.

ಎಲ್ಲಾ ಸ್ಪರ್ಧೆಗಳು ಅಂದು ಅಪರಾಹ್ನ 2.30ರಿಂದ 5.30ರವರೆಗೆ ರಾಮಕೃಷ್ಣ ನಗರದ ಜಯಲಕ್ಷ್ಮೀದೇವಿ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಸಂಜೆ 4 ಗಂಟೆಗೆ ಬಹುಮಾನ ವಿತರಣೆ ಸಮಾರಂಭವಿದ್ದು, ಜಯಶಾಲಿಯಾದ ಸ್ಪರ್ಧಿಗಳು ಸೀರೆಯನ್ನು ಬಹುಮಾನವಾಗಿ ಪಡೆಯಲಿದ್ದಾರೆ. ಅ.14ರೊಳಗೆ ಆಸಕ್ತರು ನೋಂದಾಯಿಸಿಕೊಳ್ಳಬಹುದಾಗಿದೆ. ಸ್ಥಳದಲ್ಲಿ ನೋಂದಾವಣಿ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ನೋಂದಾವಣಿಗಾಗಿ 8310306882, 9964790442 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

8.10.2025 ಬುಧವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ, ಪ್ಯಾರಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪು ಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳೆಯರ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10 ರಿಂದ.
- **ಗಾನ–ನಂದನ ಶ್ರೀ ಅನಂತೇಶ್ವರ ಟ್ರಸ್ಟ್ :** ಸಂಜೆ 4.30ಕ್ಕೆ ಕರ್ನಾಟಕ ರತ್ನ ಡಾ. ವಿಷ್ಣುವರ್ಧನ್‌ರ 75ನೇ ಹುಟ್ಟುಹಬ್ಬದ ಪ್ರಯುಕ್ತ ಮರೆಯದ ಮಾಣಿಕ್ಯ ಡಾ. ವಿಷ್ಣು ನೆನಪು ಸಂಗೀತ ಸಂಜೆ ಕಾರ್ಯಕ್ರಮ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ಶ್ರೀ ಅನಂತೇಶ್ವರ ಟ್ರಸ್ಟ್‌ನ ಅಧ್ಯಕ್ಷ ಡಾ. ನಾಗರಾಜ ವಿ. ಬೈರಿ; ಸಂಜೆ 6.30ಕ್ಕೆ ವೇದಿಕೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಲೆಯನ್ಸ್ ಕ್ಲಬ್ ಆಫ್ ಮೈಸೂರು ಜಿಲ್ಲಾ ರಾಜ್ಯಪಾಲ ಡಾ. ಎಸ್.ವೆಂಕಟೇಶ್, ಸಂಸ್ಕೃತಿ ಚಿಂತಕ ಡಾ. ರಘುರಾಮ್ ವಾಜಪೇಯಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಕವಿ ಜಯಪ್ಪ ಹೊನ್ನಾಳಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ.
- **ಸಾಧನಾ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾ ಶಿವಪಾಟೀಲ್ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗ ದರ್ಶನ–ಭಾರತೀಯ ವಾಯುಸೇನಾ ದಿನಾಚರಣೆಯ ಸಂದರ್ಭದಲ್ಲಿ ಭಾರತೀಯ ಸೇನಾಪಡೆಗಳಲ್ಲಿ ಯುವಜನರಿಗೆ ಇರುವ ಅವಕಾಶಗಳು ಕುರಿತು ಭಾರತೀಯ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಗ್ರೂಪ್ ಕ್ಯಾಪ್ಟನ್ ಸಿ.ಕೆ. ಕಾರ್ತಿಕ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಮಂಡ್ಯ ಜಿಲ್ಲೆ ಎಲೆಕೊಪ್ಪಗ್ರಾಮದ ನಂಜೇಗೌಡ ಮತ್ತು ಸಂಗಡಿಗರಿಂದ ಭಾಗವಂತಿಕೆ ಪದದಲ್ಲಿ ಕೃಷ್ಣ ಕಥೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ–ವಾಲ್ಮೀಕಿ ಜಯಂತಿ ಕುರಿತು ಶೃತಿ ಮಹಿಳಾ ಸಂಘದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ– ಶಾಂತ ಕಿಣಿ, 6.50 ಕೃಷಿರಂಗ–ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿ ರಾಗಿಮುದ್ದನಹಳ್ಳಿ ಗ್ರಾಮದಲ್ಲಿ ನಡೆದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ. ಪ್ರಸ್ತುತಿ–ಆರ್. ಲೋಕೇಶ್ವರಿ, ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಆರ್.ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರೊಂದಿಗೆ ಸಂವಾದ. ಭಾಗವಹಿಸುತ್ತಾರೆ–ಉಮೇಶ್ ಎಸ್.ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಹಳ್ಳಿ ಹಾಡು, ಭಾಗವಹಿಸುತ್ತಾರೆ ಚಾಮರಾಜನಗರ ಜಿಲ್ಲೆ, ದೊಡ್ಡಮೋಳೆಯ ದೊಡ್ಡಗವಿ ಬಸಪ್ಪ ಮತ್ತು ಸಂಗಡಿಗರು. ಪ್ರಸ್ತುತಿ–ಮೈಸೂರು ಉಮೇಶ, 10.30 ಸವಿನೆನಪು

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7	ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ, ದಿನ 4 ಟ್ರಿಪ್),
ಬೆ. 10 ರಿಂದ 10 ರವರೆಗೆ	ದಸರಾ ವಸ್ತುಪ್ರದರ್ಶನ.

ಅಡ್ಡಂಡ ಸಿ.ಕಾರ್ಯಪ್ಪ ಅವರ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ಕೃತಿ ಬಿಡುಗಡೆ

ಇತಿಹಾಸದ ಸತ್ಯಾಂಶ ಜನರ ಮುಂದಿಡುವುದು ಈಗ ಅವಶ್ಯ

ಮೈಸೂರು,ಅ.7(ಪಿಎಂ)– ಅಡ್ಡಂಡ ಸಿ.ಕಾರ್ಯಪ್ಪನವರು ನೈಜ ಇತಿಹಾಸ ಹೊರತೆಗೆಯುವ ಹೋರಾಟಕ್ಕಿಳಿದಿದ್ದು, ಅವರಿಗೆ ನಾವೆಲ್ಲರೂ ಬೆಂಬಲವಾಗಿ ನಿಲ್ಲಬೇಕು. ಇತಿಹಾಸದ ಸತ್ಯಾಂಶಗಳನ್ನು ಜನರ ಮುಂದಿಡಬೇಕಿದ್ದು, ಈ ವಿಚಾರದಲ್ಲಿ ನಾವೆಲ್ಲರೂ ತೊಡಗಿಸಿಕೊಳ್ಳುವುದು ಪ್ರಸ್ತುತ ಅತ್ಯಾವಶ್ಯಕ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಹಾಗೂ ರಂಗಭೂಮಿ ಟ್ರಸ್ಟ್ ಕೊಡಗು ಜಂಟಿ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಡ್ಡಂಡ ಸಿ.ಕಾರ್ಯಪ್ಪ ಅವರ 'ನಿಜಮಹಾತ್ಮ ಬಾಬಾಸಾಹೇಬ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಇದು ಕಾರ್ಯಪ್ಪನವರ ಅತ್ಯಂತ ಒಳ್ಳೆಯ ಹೋರಾಟ. ಏಕೆಂದರೆ ಭಾರತದ ಸ್ವಾತಂತ್ರ್ಯ ನಂತರದ ಇತಿಹಾಸವನ್ನು ಒಂದೇ ಗುಂಪು ನಿಯಂತ್ರಣ ಮಾಡಿದೆ. ಅದೇ ಇತಿಹಾಸವನ್ನು ನಾವು ಓದುತ್ತಾ ಬಂದಿದ್ದೇವೆ. ಕ್ವಿಟ್ ಇಂಡಿಯಾ ಮೂವ್‌ಮೆಂಟ್ ನಂತರ ಸ್ವಾತಂತ್ರ್ಯ ನೀಡಲು ಬ್ರಿಟಿಷರು ಒಪ್ಪಿಕೊಂಡರು. ಬಳಿಕ ನಾವೆಲ್ಲ ನೆಮ್ಮದಿಯಿಂದ ಬದುಕುತ್ತಿದ್ದೇವೆ ಎಂದು ಇತಿಹಾಸ ಪುಸ್ತಕದಲ್ಲಿ ಓದುತ್ತೇವೆ. ಆದರೆ ಅಷ್ಟು ಸರಳವಾಗಿ ಸ್ವಾತಂತ್ರ್ಯ ಲಭಿಸಿಲ್ಲ. ಹಲವು ಮಹನೀಯರ ಕೊಡುಗೆಯೂ ಸ್ವಾತಂತ್ರ್ಯ ದೊರೆಯಲು ಕಾರಣವಾಯಿತು ಎಂದು ತಿಳಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪಾತ್ರ ಕೂಡ ಮಹತ್ವದ್ದು. ಆದರೆ ಅವರಿಗೆ ಸಾಕಷ್ಟು ಅನ್ಯಾಯ ಮಾಡಲಾಗಿದೆ. ಅಂಬೇಡ್ಕರ್ ಅವರ ಕೊಡುಗೆಯನ್ನು ಸಹ ಇತಿಹಾಸದಲ್ಲಿ ಸಮರ್ಪಕವಾಗಿ ದಾಖಲಿಸಿಲ್ಲ. ಅರ್ಥಶಾಸ್ತ್ರದಲ್ಲಿ ಅಂಬೇಡ್ಕರ್ ಅತ್ಯಂತ ಪ್ರತಿಭಾವಂತರು. ಅಂತಹ ಆರ್ಥಿಕ ತಜ್ಞರಿಗೆ ಆರ್ಥಿಕ ಖಾತೆಯನ್ನು ಕೊಡದೇ ಅವರಿಗೆ ಕಾಂಗ್ರೆಸ್ ಹಾಗೂ ನೆಹರು ದೊಡ್ಡ ಅನ್ಯಾಯ ಮಾಡಿದರು ಎಂದು ದೂರಿದರು.

ಮೈಸೂರು ಸಂಸ್ಥಾನದ ಮಾದರಿ ಕಾರ್ಯಗಳು ಪ್ರೇರಣೆ: ಅಂಬೇಡ್ಕರ್ ಅವರು ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿಲ್ಲ. ಆದರೂ ಸಹ ಅವರ ಒಳ್ಳೆಯ ಆಲೋಚನೆಗಳಿಗೆ ಇಲ್ಲಿಂದಲೂ ಉತ್ತೇಜನ ದೊರಕಿತು. 1918ರಲ್ಲೇ ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಪರಿಕಲ್ಪನೆ ಸೇರಿದಂತೆ ಮಾದರಿ ಕಾರ್ಯಗಳು ದೊಡ್ಡ ಮಟ್ಟದಲ್ಲಿ ಪ್ರಾರಂಭವಾಯಿತು. ಹಾಗಾಗಿ ಇಲ್ಲಿಂದಲೂ ಸಂವಿಧಾನ ರಚನೆ ವೇಳೆ ಅವರಿಗೆ ದೊಡ್ಡ ಮಟ್ಟದ ಪ್ರೇರಣೆ ದೊರೆತಿದೆ. ಜೊತೆಗೆ ಮೈಸೂರು ದರ್ಬಾರ್‌ನಲ್ಲಿ ದಲಿತರೂ ಸೇರಿದಂತೆ ಎಲ್ಲರಿಗೂ ಪ್ರವೇಶ ಕೊಡುವ ವ್ಯವಸ್ಥೆ ಜಾರಿಯಾಯಿತು. ಹೀಗೆ ಮಾದರಿ ಕಾರ್ಯಕ್ರಮಗಳ ಜಾರಿಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಅಂಬೇಡ್ಕರ್ ಕೊಂಡಾಡಿದ್ದರು ಎಂದು ಸ್ಮರಿಸಿದರು.

ಕೃತಿ ಕುರಿತು ಮಾತನಾಡಿದ ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಅಭಿವ್ಯಕ್ತಿಯ ಅತ್ಯಂತ ಪ್ರಭಾವಿ ಮಾಧ್ಯಮ ನಾಟಕ. ಈ ಮಾಧ್ಯಮಕ್ಕಾಗಿ ನಾಟಕ ರಚನೆ ಹಾಗೂ ಅದನ್ನು ಪ್ರಸ್ತುತಪಡಿಸುವುದು ಅತ್ಯಂತ ಶ್ರಮ ಬೇಡುವ ಪ್ರಕ್ರಿಯೆ. ಅಂತಹ ಕ್ಲಿಷ್ಟ ಮಾಧ್ಯಮವನ್ನು ಕಾರ್ಯಪ್ಪನವರು ಆಯ್ಕೆ ಮಾಡಿಕೊಂಡಿದ್ದಾರೆ. ಜೊತೆಗೆ ನಾಟಕ ಕುರಿತು ಪುಸ್ತಕ ಹೊರತರುವುದೂ ಅಪರೂಪ. ಕಾರ್ಯಪ್ಪ ಅದನ್ನು ಮಾಡುತ್ತಿದ್ದಾರೆ. ಆ ಮೂಲಕ ಇತಿಹಾಸದಲ್ಲಿ ಹುದುಗಿ ಹೋಗಿರುವ ಪಾತ್ರಗಳ ಗುಣವಿಶೇಷ ಹಾಗೂ ಸಂಗತಿಗಳನ್ನು ರಂಗದ ಮೇಲೆ ತರುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕೃತಿಯ ಮೂಲಕ ಕಾರ್ಯಪ್ಪನವರು ನಿಜವಾದ ಮಹಾತ್ಮ ಯಾರೆಂಬುದನ್ನು ಅರ್ಥ ಮಾಡಿಸಲು ಹೊರಟಿದ್ದಾರೆ. ಸದರಿ ನಾಟಕದಲ್ಲಿ 7 ಅಂಕಗಳಿದ್ದು, ಅಂಬೇಡ್ಕರ್ ಹಾಗೂ ಗಾಂಧೀಜಿ ಅವರ ನಡುವೆ ನಡೆಯುವ ಸಂಭಾಷಣೆಯ ಸಂಗತಿ ಈ ನಾಟಕದ ಮುಖ್ಯ ಅಂಕವಾಗಿದೆ ಇದು ಇಡೀ ನಾಟಕದ ಕೇಂದ್ರ ಬಿಂದು ಎಂದರು.

ಗಾಂಧೀಜಿ ನೇತೃತ್ವದ ಕಾಂಗ್ರೆಸ್‌ನವರು ಈ ದೇಶಕ್ಕೆ ಸ್ವಾತಂತ್ರ್ಯ ನೀಡದೆ ನಮ್ಮನ್ನು ಗುಲಾಮಗಿರಿಯಲ್ಲಿ ಇಟ್ಟಿದ್ದೀರಿ ಎಂದು ಬ್ರಿಟಿಷರ ವಿರುದ್ಧ ದೂರುತ್ತದೆ. ಭಾರತದಲ್ಲಿ ಅಸ್ಪೃಶ್ಯತೆ ಜೀವಂತವಾಗಿರುವಾಗ ಹೀಗೆ ಕೇಳಲು ಯಾವ ನೈತಿಕತೆ ಇದೆ ಎಂದು ಅಂಬೇಡ್ಕರ್ ಅವರು ಪ್ರಶ್ನಿಸಿರುತ್ತಾರೆ. ಸೈಮನ್ ಕಮಿಷನ್ ಭಾರತದ ಸ್ವಾತಂತ್ರ್ಯ ರೂಪುರೇಷೆ ಬಗ್ಗೆ ವರದಿ ಸಿದ್ಧಪಡಿಸುವ ಸಂದರ್ಭದಲ್ಲಿ ಅದರ ಮುಂದೆಯೂ ಅಂಬೇಡ್ಕರ್ ಈ ಪ್ರಶ್ನೆ ಮುಂದಿಟ್ಟಿದ್ದರು ಎಂದು ತಿಳಿಸಿದರು.

ಇದಕ್ಕೂ ಮುನ್ನ ಇತ್ತೀಚಿಗೆ ನಿಧನರಾದ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಹಾಗೂ ಸಾಹಿತಿ ಮೊಗಳ್ಳಿ ಗಣೇಶ್ ಅವರಿಗೆ ಪ್ರಾಧ್ಯಾಪಕ ಬಿ.ವಿ.ವಸಂತಕುಮಾರ್ ನುಡಿನಮನ ಸಲ್ಲಿಸಿದರು. ಬಳಿಕ ನಿಮಿಷ ಕಾಲ ಮೌನಾಚರಣೆ ನಡೆಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾಮ್, ಆದಿತ್ಯ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಚಂದ್ರಶೇಖರ್, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವಲಯ ಪ್ರಮುಖ್ ಡಾ.ವಿ.ರಂಗನಾಥ್, ಮೈಸೂರು ಜಿಲ್ಲಾಧ್ಯಕ್ಷ ಎಸ್.ಸುಬ್ರಹ್ಮಣ್ಯ, ರಂಗಭೂಮಿ ಟ್ರಸ್ಟ್ ಕೊಡಗು ಕಾರ್ಯದರ್ಶಿ ಅನಿತಾ ಕಾರ್ಯಪ್ಪ ಮೈಸೂರು ರಂಗಾಯಣದ ಮಾಜಿ ನಿರ್ದೇಶಕರೂ ಆದ ಕೃತಿಕರ್ತೃ ಅಡ್ಡಂಡ ಸಿ.ಕಾರ್ಯಪ್ಪ ಮತ್ತಿತರರು ಹಾಜರಿದ್ದರು.

ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮಂಗಳವಾರ ಸಂಸದ ಯದುವೀರ ಒಡೆಯರ್ ಅವರು 'ನಿಜಮಹಾತ್ಮ ಬಾಬಾಸಾಹೇಬ' ಪುಸ್ತಕ ಬಿಡುಗಡೆ ಮಾಡಿದರು.

ಅ.13ರಂದು 'ನಿಜಮಹಾತ್ಮ ಬಾಬಾ ಸಾಹೇಬ' ನಾಟಕ ಪ್ರದರ್ಶನಕ್ಕೆ ಚಾಲನೆ

ಮೈಸೂರು,ಅ.7(ಪಿಎಂ)– ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) 100ನೇ ವರ್ಷದ ಸಂಭ್ರಮದಲ್ಲಿದ್ದೇವೆ. 'ನಿಜಮಹಾತ್ಮ ಬಾಬಾಸಾಹೇಬ' ನಾಟಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಹೆಡ್ಗೆವಾರ್ ಮತ್ತು ಅಂಬೇಡ್ಕರ್ ಅವರು ಭೇಟಿಯಾಗಿ ಚರ್ಚಿಸಿದ ದೃಶ್ಯವೊಂದನ್ನು ನಾಟಕದಲ್ಲಿ ತರಲಾಗಿದೆ. ಅ.13ರಂದು ನಾಟಕ ಪ್ರದರ್ಶನಕ್ಕೆ ಚಾಲನೆ ದೊರೆಯಲಿದೆ ಎಂದು ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.

ಬಾಬಾ ಸಾಹೇಬರ ವಿಚಾರದಲ್ಲಿ ನನಗೆ ಅನೇಕ ಸಂಗತಿಗಳು ಕಾಡುತ್ತಿದ್ದವು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದವರು 22 ಸಂಪುಟಗಳಲ್ಲಿ ಅಂಬೇಡ್ಕರ್ ಅವರ ಕುರಿತಂತೆ ಪುಸ್ತಕಗಳನ್ನು ಹೊರತಂದಿದ್ದಾರೆ. ಅಂಬೇಡ್ಕರ್ ಅವರ 2ನೇ ಪತ್ನಿ ಡಾ.ಸವಿತಾ ಅಂಬೇಡ್ಕರ್ ಅವರು 'ಅಂಬೇಡ್ಕರ್ ಸಹವಾಸದಲ್ಲಿ' ಪುಸ್ತಕ ಬರೆದಿದ್ದಾರೆ. ಅಂಬೇಡ್ಕರ್ ಅವರ ಕಾರ್ಯದರ್ಶಿಯಾಗಿದ್ದ ನಾನಾಕ್‌ಚಂದ ರತ್ತು ಅವರು 'ಅಂಬೇಡ್ಕರ್ ಅವರ ಕೊನೆಯ ದಿನಗಳು' ಪುಸ್ತಕ ಬರೆದಿದ್ದಾರೆ. ಈ ಪುಸ್ತಕಗಳನ್ನು ಅಧ್ಯಯನ ಮಾಡಿದೆ ಎಂದರು.

ಜೊತೆಗೆ ಬಹಳ ನನಗೆ ಗಮನ ಸೆಳೆದ ಪುಸ್ತಕ 'ಸಾಮಾಜಿಕ ಕ್ರಾಂತಿಸೂರ್ಯ ಡಾ.ಬಾಬಾ ಸಾಹೇಬ್ ಅಂಬೇಡ್ಕರ್'. ಇದನ್ನು ದತ್ತೋಪಂತ ಠೇಂಗಡಿ ಬರೆದಿದ್ದು, ಕನ್ನಡಕ್ಕೆ ಚಂದ್ರಶೇಖರ ಭಂಡಾರಿಯವರು ಅನುವಾದ ಮಾಡಿದ್ದಾರೆ. ಈ ಪುಸ್ತಕವನ್ನು ಮೂಲ ಆಧಾರವಾಗಿ ಮಾಡಿಕೊಂಡಿದ್ದೇನೆ. ದತ್ತೋಪಂತ ಠೇಂಗಡಿ ಆರ್‌ಎಸ್‌ಎಸ್ ಪ್ರಚಾರಕರಾಗಿದ್ದವರು. ಅವರು ಯಾವುದನ್ನೂ ಮುಲಾಜಿಲ್ಲದೆ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಆರ್‌ಎಸ್‌ಎಸ್ ಹಾಗೂ ಹಿಂದೂ ಧರ್ಮದ ಬಗ್ಗೆ ಅಂಬೇಡ್ಕರ್ ಅವರು ಮಾಡಿದ ಟೀಕೆಗಳನ್ನು ಉಲ್ಲೇಖಿಸಿದ್ದಾರೆ. ವಸ್ತುನಿಷ್ಠವಾಗಿ ನನಗೆ ಗೋಚರಿಸಿದ ಪುಸ್ತಕ ಇದು. ಇದೇ ಪುಸ್ತಕದಲ್ಲಿ ಹೆಡ್ಗೆವಾರ್ ಮತ್ತು ಅಂಬೇಡ್ಕರ್ ಅವರು ನಾಗ್ಪುರದಲ್ಲಿ ಭೇಟಿಯಾಗಿದ್ದ ಸನ್ನಿವೇಶ ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ನಾನು ದತ್ತೋಪಂತ ಠೇಂಗಡಿ ಅವರನ್ನು ನಾಟಕದಲ್ಲಿ ನಿರೂಪಕರಾಗಿ ತಂದಿದ್ದೇನೆ. ಅವರೇ ಕಥೆ ಹೇಳುತ್ತಾರೆ. ನಾಟಕದಲ್ಲಿ ಒಬ್ಬ ಪಾತ್ರಧಾರಿ ನಿರೂಪಕನಾಗುವುದು ಶಕ್ತಿಯುತ ಅಂಶ. ಇದೊಂದು ತಪ್ಪು ಮಾಡಿದ್ದೇನೆ ಎನ್ನಬಹುದು. ಆದರೆ ಅದು ಅಗತ್ಯವೆಂದು ಭಾವಿಸಿ, ಈ ರೀತಿ ಮಾಡಿಕೊಂಡಿದ್ದೇನೆ ಎಂದರು.

ಅಂಬೇಡ್ಕರ್ ಅವರು ಕಾಂಗ್ರೆಸ್‌ಗೆ ಬೈದಿರುವಷ್ಟು ಭಾರತದ ಯಾವುದೇ ರಾಜಕಾರಣಿ ಕಾಂಗ್ರೆಸ್‌ಗೆ ಬೈದಿಲ್ಲ. ಗಾಂಧೀಜಿಯವರನ್ನು ಅಂಬೇಡ್ಕರ್ ಅವರು ಎಂದೂ 'ಮಹಾತ್ಮ' ಎಂದು ಕರೆದಿಲ್ಲ. 'ಮಿಸ್ಟರ್ ಗಾಂಧಿ' ಎಂದೇ ಕರೆಯುತ್ತಿದ್ದರು. ಆದರೂ ನಾನು ನಾಟಕದಲ್ಲಿ 'ಗಾಂಧಿಜಿ' ಎಂದು ಕರೆಸಿದ್ದೇನೆ. ಗಾಂಧಿಜಿಯವರನ್ನು ಅಂಬೇಡ್ಕರ್ ಅವರು ವಿಶ್ವಾಸಘಾತುಕ, ಸರ್ವಾಧಿಕಾರಿ ಎಂದೆಲ್ಲಾ ಟೀಕಿಸಿದ್ದಾರೆ. ಗಾಂಧಿ ಆವರಿಸಿಕೊಂಡಿದ್ದ ಸರ್ವಾಧಿಕಾರದ ವರ್ತುಲದಿಂದಾಗಿ ಬೇರೆ ಹುತಾತ್ಮರು ಕಾಣಿಸಲೇ ಇಲ್ಲ. ಹೀಗಿರುವಾಗ ಬಾಬಾ ಸಾಹೇಬರು ಯಾವ ಲೆಕ್ಕ. ಸ್ವಾತಂತ್ರ್ಯ ಬಂದು 20 ವರ್ಷಗಳವರೆಗೆ ಅಂಬೇಡ್ಕರ್ ಅವರನ್ನು ಯಾವ ಲೆಕ್ಕಕ್ಕೂ ತೆಗೆದುಕೊಳ್ಳಲಿಲ್ಲ ಎಂದರು.

42 ಪುಸ್ತಕಗಳನ್ನು ಅಧ್ಯಯನ ಮಾಡಿ ಈ ಕೃತಿ ರಚಿಸಿ ನಾಟಕ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದ್ದೇನೆ. ಕಳೆದ ನಾಲ್ಕು ವರ್ಷಗಳಿಂದ ಅಂಬೇಡ್ಕರ್ ಅವರ ಕುರಿತು ಅಧ್ಯಯನ ಮಾಡುತ್ತಾ ಟಿಪ್ಪಣಿ ಬರೆಯುತ್ತಿದ್ದೆ. ಅ.13, 14 ಮತ್ತು 16 ಇದೇ ಕಿರುರಂಗಮಂದಿರದಲ್ಲಿ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ವಾಲ್ಮೀಕಿ ಜಯಂತಿ ಆಚರಣೆ



ಮೈಸೂರು ತಾಲೂಕು ನಾಗವಾಲ ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ, ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ ಬಸವನಾಯಕ, ಸದಸ್ಯರಾದ ಧನಂಜಯ, ಉಲ್ಲಾಳ್ ಕುಮಾರ್, ಮುಖಂಡರಾದ ಮಹೇಶ್, ಕೆಂಪೇಗೌಡ, ಸೀಗಲಿ ಕುಮಾರ, ಯಶೋಧಮ್ಮ, ನಾಗವಾಲ ಮಂಜು, ಕಾರ್ಯದರ್ಶಿ ಯಶ್ವಂತ್. ಪಾಪ ನಾಯ್ಕ, ವಿಷಕಂಠ ನಾಯಕ ಮತ್ತಿತರರು ಉಪಸ್ಥಿತರಿದ್ದರು.

ಮೃಗಾಲಯದಲ್ಲಿ ನಡೆದ ಛಾಯಾಚಿತ್ರ ಸ್ಪರ್ಧೆ ವಿಜೇತರು




ಮಧುಸೂದನ್


ಮೈಸೂರು, ಅ.7(ಎಸ್‌ಪಿಎನ್)– ಶ್ರೀ ಚಾಮರಾಜೇಂದ್ರ ಮೃಗಾಲಯದ ವತಿಯಿಂದ 71ನೇ ವನ್ಯಜೀವಿ ಸಪ್ತಾಹ ಆಚರಣೆ ನಿಮಿತ್ತ ನಡೆದ ಛಾಯಾಚಿತ್ರ ಸ್ಪರ್ಧೆಯಲ್ಲಿ 'ಇನ್–ಸಿಟ್ಯು' ಮತ್ತು 'ಎಕ್ಸ್ –ಸಿಟ್ಯು' ಪ್ರವರ್ಗದಲ್ಲಿ ತಲಾ ಐದು ಮಂದಿ ಪ್ರಶಸ್ತಿ ಪಡೆದಿದ್ದಾರೆ.

ಈ ಸ್ಪರ್ಧೆಯ **ಇನ್–ಸಿಟ್ಯು ಪ್ರವರ್ಗ**ದಲ್ಲಿ ವನ್ಯಜೀವಿ ಛಾಯಾಗ್ರಾಹಕರಾದ ಕೆ.ಶಿವು ಪ್ರಥಮ, ಎಸ್.ಆರ್.ಮಧುಸೂದನ (ದ್ವಿ), ಉಮಾಶಂಕರ್, ಜಿ.ಎಸ್.ರವಿಶಂಕರ್, ಸಾಗರ್ ಸುರೇಶ್ ಅವರಿಗೆ ಪ್ರಮಾಣಪತ್ರ ನೀಡಲಾಗಿದೆ. **ಎಕ್ಸ್–ಸಿಟ್ಯು ಪ್ರವರ್ಗ**ದಲ್ಲಿ ರಾಹುಲ್ ವಿಶ್ವನಾಥ್ ಪ್ರಥಮ, ಎಸ್.ಆರ್.ಮಧುಸೂದನ್ ದ್ವಿತೀಯ, ಲಕ್ಷ್ಮೀನಾರಾಯಣ ಯಾದವ್, ಎಂ.ಲೋಕನಾಥ್, ಅನೂಪ್ ಆರ್.ಶಂಕರ್ ಅವರಿಗೆ ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಘೋಷಿಸಿದ್ದಾರೆ.

ವನ್ಯಜೀವಿ ಹಾಗೂ ಮೃಗಾಲಯ ಎರಡು ವಿಭಾಗದಲ್ಲೂ ವನ್ಯಜೀವಿ ಛಾಯಾಗ್ರಾಹಕ ಎಸ್.ಆರ್.ಮಧುಸೂದನ್ ಅವರಿಗೆ ದ್ವಿತೀಯ ಬಹುಮಾನ ದೊರೆತಿದೆ. 'ಬಾವಲಿ ಮನೆ ಚಿತ್ರ' ಹಾಗೂ 'ಮೃಗಾಲಯದ ಹುಲಿಗಳು ನೀರಿನಲ್ಲಿ ಆಟವಾಡು'ತ್ತಿರುವ ಛಾಯಾಚಿತ್ರಗಳಿಗೆ ದ್ವಿತೀಯ ಬಹುಮಾನ ಲಭಿಸಿವೆ.



'ಬಾವಲಿ ಮನೆ ಚಿತ್ರ'



'ಮೃಗಾಲಯದ ಹುಲಿಗಳು ನೀರಿನಲ್ಲಿ ಆಟವಾಡು'ತ್ತಿರುವ ದೃಶ್ಯ

ಜಾತಿಗಣತಿ ಸಮೀಕ್ಷೆಗಾಗಿ ಶಾಲಾ ರಜೆ ವಿಸ್ತರಣೆಗೆ ಎಐಡಿಎಸ್‌ಓ ಆಕ್ಷೇಪ

ಮೈಸೂರು, ಅ.7(ಎಸ್‌ಪಿಎನ್)– ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗಾಗಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ರಜೆಯನ್ನು ಸರ್ಕಾರ ವಿಸ್ತರಿಸಿದೆ. ಈ ಕ್ರಮ ಸರಿಯಲ್ಲ. ಕೂಡಲೇ ಶಾಲೆಗಳಿಗೆ ನೀಡಿರುವ ರಜೆ ರದ್ದುಪಡಿಸುವಂತೆ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ(ಎಐಡಿಎಸ್‌ಓ) ಮೈಸೂರು ಜಿಲ್ಲಾ ಸಮಿತಿ ಆಗ್ರಹಿಸಿದೆ.

ಇದರಿಂದ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಅಡ್ಡಿಯಾಗುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ಖಾಸಗಿ ಶಾಲಾ ಮತ್ತು ಸರ್ಕಾರಿ ಶಾಲಾ ಮಕ್ಕಳ ನಡುವೆ ಅಪಾಯಕಾರಿ ತಾರತಮ್ಯ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.



ಸಂಗ್ರಹ ಚಿತ್ರ

ಈಗಾಗಲೇ ಶಾಲಾ ಶಿಕ್ಷಕರು ಬೋಧನೆ ಜೊತೆಗೆ ಬೋಧಕೇತರ ಚಟುವಟಿಕೆಗಳ ಜವಾಬ್ದಾರಿಗಳನ್ನು ನಿರ್ವಹಿಸುವ ದುಸ್ಥಿತಿ ಇದ್ದು, ಈ ಗಣತಿಯು ಶಿಕ್ಷಕರ ದೈನಂದಿನ ಕೆಲಸದ ಜೊತೆಗೆ ಹೆಚ್ಚುವರಿ ಹೊರೆಯಾಗಲಿದೆ ಎಂದು ಶಿಕ್ಷಕರಿಂದಲೂ ಆಕ್ಷೇಪ ವ್ಯಾಪಕವಾಗಿ ಕೇಳಿಬರುತ್ತಿದೆ. ಅಲ್ಲದೇ ಈ ಕ್ರಮವು ಸರ್ಕಾರಿ ಶಾಲಾ ಮಕ್ಕಳ ಶೈಕ್ಷಣಿಕ ಸ್ಥಿರತೆಯನ್ನು ಹಾಳು ಮಾಡುತ್ತದೆ. ಬೋಧನೆ ಮತ್ತು ಕಲಿಕೆಯ ಶಾಲಾ ಪ್ರಮುಖ ಕಾರ್ಯಕ್ಕೆ ಅಡಚಣೆಯಾಗುತ್ತದೆ.

ರಜೆ ವಿಸ್ತರಣೆ ಕುರಿತು ರಾಜ್ಯ ಸರ್ಕಾರ ಪೂರಕ ಯೋಚನೆ ಮಾಡದೇ, ಸಾಧಕ–ಬಾಧಕ ಕುರಿತು ಚರ್ಚೆ ಮಾಡದೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಏಕಾಏಕಿ ರಜೆ ವಿಸ್ತರಿಸಿರುವುದು ವಿವೇಚನಾ ರಹಿತ ನಿರ್ಧಾರವಾಗಲಿದೆ. ಜೊತೆಗೆ ಸರ್ಕಾರಿ ಶಾಲಾ ಮಕ್ಕಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿಯುವ ಭೀತಿಯಿದೆ ಎಂದು ಆರೋಪಿಸಿದೆ.

ಸಮೀಕ್ಷೆಗಾಗಿ ಸರ್ಕಾರಿ ಶಾಲಾ ಬೋಧನಾ ಸಮಯವನ್ನು ಬಲಿಕೊಡದೆ, ಸಮೀಕ್ಷೆಯ ಕೆಲಸಕ್ಕೆ ಪರ್ಯಾಯ ವ್ಯವಸ್ಥೆಗೆ ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಎಐಡಿಎಸ್‌ಓ ಜಿಲ್ಲಾ ಸಮಿತಿ ಜಿಲ್ಲಾ ಕಾರ್ಯದರ್ಶಿ ನಿತನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಸನಾಂಭ ಜಾತ್ರೆಗೆ ಮೈಸೂರು, ಮಂಡ್ಯ ಸೇರಿ ಹಲವೆಡೆಯಿಂದ 115 ಹೆಚ್ಚುವರಿ ಬಸ್ ವ್ಯವಸ್ಥೆ


ಮೈಸೂರು, ಅ.7(ಎಸ್‌ಪಿಎನ್)–ಹಾಸನಾಂಭ ಜಾತ್ರಾ ಮಹೋತ್ಸವದ ಅಂಗವಾಗಿ ಅ.9ರಿಂದ ಅ.22ರವರೆಗೆ ಕೆಎಸ್‌ಆರ್‌ಟಿಸಿ ವತಿಯಿಂದ ವಿಶೇಷ ಕಾರ್ಯಾಚರಣೆಗಾಗಿ 115 ಹೆಚ್ಚುವರಿ ಬಸ್‌ಗಳನ್ನು ಓಡಿಸಲು ತೀರ್ಮಾನಿಸಿದೆ.



ಮೈಸೂರು ನಗರದಿಂದ 30, ಮೈಸೂರು ಗ್ರಾಮಾಂತರ 20, ಮಂಡ್ಯ 20, ಚಿಕ್ಕಮಗಳೂರು 25 ಹಾಗೂ ತುಮಕೂರಿಂದ 20 ಬಸ್‌ಗಳು ಸೇರಿದಂತೆ ಒಟ್ಟು 115 ಹೆಚ್ಚುವರಿ ಬಸ್ ಓಡಿಸಲು ನಿರ್ಧರಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಯಾಂತ್ರಿಕ ಅಭಿಯಂತರರು, ಐದು ಜಿಲ್ಲೆಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಐದು ಜಿಲ್ಲೆಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಹಾಸನ ವಿಭಾಗದ ಡಿಸಿಯವರೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ಅ.8ರಂದು ಮಧ್ಯಾಹ್ನವೇ ಐದು ವಿಭಾಗಗಳಿಂದ ಹೆಚ್ಚುವರಿ ಬಸ್‌ಗಳನ್ನು ಪಡೆದು ಪ್ರಯಾಣಿಕರ ಬೇಡಿಕೆಗೆ ತಕ್ಕಂತೆ ಸಾರಿಗೆ ಬಸ್‌ಗಳನ್ನು ಕಾರ್ಯಾಚರಣೆ ಮಾಡುವುದು. ಕಾರ್ಯಾಚರಣೆ ಮುಗಿದ ಬಳಿಕ ವಾಹನಗಳನ್ನು ಆಯಾ ವಿಭಾಗಗಳಿಗೆ ಹಿಂದಿರುಗಿಸುವಂತೆ ಸೂಚಿಸಿದ್ದಾರೆ.

ಹುಟ್ಟುಹಬ್ಬ ಶುಭಾಶಯ



ಬೆಂಗಳೂರಿನ ಬಾಕ್ವೆಂಟ್ ಹಾಲ್‌ನಲ್ಲಿ ನಡೆದ ಸುಪ್ರಿಂಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರ 75ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೋದಿ ಸಾರ್ವಜನಿಕ ಜೀವನಕ್ಕೆ 25 ವರ್ಷ

2001ರ ಫೋಟೋ ಹಂಚಿಕೊಂಡು ಪ್ರಧಾನಿ ಕೃತಜ್ಞತೆ

ನವದೆಹಲಿ, ಅ.7– ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ 25 ವರ್ಷಗಳನ್ನು ಪೂರೈಸಿ ಸರ್ಕಾರದ ಮುಖ್ಯಸ್ಥರಾಗಿ ಕಳೆದ 25 ವರ್ಷಗಳನ್ನು ಹೇಗೆ ಕಳೆದೆ ಎಂಬುದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸ್ಮರಿಸಿಕೊಂಡಿದ್ದಾರೆ.

ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನವಾದ ಅಕ್ಟೋಬರ್ 7, 2001ರ ಚಿತ್ರವನ್ನು ಹಂಚಿಕೊಂಡ ಪ್ರಧಾನಿ, ಸಾರ್ವಜನಿಕ ಸೇವೆಯಲ್ಲಿನ ತಮ್ಮ ಇಷ್ಟು ವರ್ಷಗಳ ಪಯಣವನ್ನು ನೆನಪಿಸಿಕೊಳ್ಳುತ್ತಾ ದೇಶದ ಜನತೆಗೆ ಕೃತಜ್ಞತೆ ಸಲ್ಲಿಸಿದರು.

2001 ರಲ್ಲಿ ಈ ದಿನ, ನಾನು ಮೊದಲ ಬಾರಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದೆ. ನನ್ನ ಸಹ ಭಾರತೀಯರ ನಿರಂತರ ಆಶೀರ್ವಾದಕ್ಕೆ ಧನ್ಯವಾದಗಳು, ನಾನು ಸರ್ಕಾರದ ಮುಖ್ಯಸ್ಥನಾಗಿ 25ನೇ ವರ್ಷವನ್ನು ಪ್ರವೇಶಿಸುತ್ತಿದ್ದೇನೆ.

ಇಷ್ಟು ವರ್ಷಗಳಿಂದ, ನಮ್ಮ ಜನರ ಜೀವನವನ್ನು ಸುಧಾರಿಸಲು ಮತ್ತು ನಮ್ಮೆಲ್ಲರನ್ನೂ ಪೋಷಿಸಿದ ಈ ಮಹಾನ್ ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡಲು ನಾನು ನಿರಂತರವಾಗಿ ಪ್ರಯತ್ನಿಸುತ್ತಿದ್ದೇನೆ ಎಂದು ಬರೆದುಕೊಂಡಿದ್ದಾರೆ.



ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಹಿಂದಿನ ಚಿತ್ರದ ಜೊತೆಗೆ, ಪ್ರಧಾನಿ ಮೋದಿ ರಾಷ್ಟ್ರಪತಿ ಭವನದಲ್ಲಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಫೋಟೋವನ್ನು ಸಹ ಹಂಚಿಕೊಂಡಿದ್ದಾರೆ.

ಭಾರತದ ಪ್ರಧಾನಿಯಾಗಿ ಆಯ್ಕೆಯಾಗುವ ಮೊದಲು, ಮೋದಿ 2001 ರಿಂದ 2014 ರವರೆಗೆ ಗುಜರಾತ್ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಹವಾಮಾನ ಬದಲಾವಣೆಗೆ ನವೀನ ಪರಿಹಾರಗಳನ್ನು ಒದಗಿಸಲು ಅವರು ಪ್ರತ್ಯೇಕ ಹವಾಮಾನ ಬದಲಾವಣೆ ಇಲಾಖೆಯನ್ನು ರಚಿಸಿದರು, ಇದನ್ನು 2015ರ ಪ್ಯಾರಿಸ್‌ನಲ್ಲಿ ನಡೆದ COP21 ಶೃಂಗಸಭೆಯಲ್ಲಿ ಮುಂದುವರಿಸಲಾಯಿತು, ಅಲ್ಲಿ ಪ್ರಧಾನಿ ಮೋದಿ ಉನ್ನತ ಮಟ್ಟದ ಚರ್ಚೆಗಳಲ್ಲಿ ಪ್ರಮುಖ ಪಾತ್ರ ವಹಿಸಿದರು.

ಗುಜರಾತ್ – ಪ್ರಧಾನಿ ಮೋದಿ ಅವರ ತವರು ರಾಜ್ಯ: ಪ್ರಧಾನಿ ಮೋದಿ ಗುಜರಾತ್‌ನ ಒಂದು ಸಣ್ಣ ಪಟ್ಟಣದಲ್ಲಿ ಜನಿಸಿ ಗುಜರಾತ್ ವಿಶ್ವವಿದ್ಯಾಲಯದಿಂದ ರಾಜಕೀಯ ವಿಜ್ಞಾನದಲ್ಲಿ ಎಂಎ ಮುಗಿಸಿದವರು.

ಅವರ ಕುಟುಂಬವು ಒಬಿಸಿ ವರ್ಗಕ್ಕೆ ಸೇರಿದ್ದು, ಇದು ಸಮಾಜದ ಅಂಚಿನಲ್ಲಿರುವ ವರ್ಗಗಳಲ್ಲಿ ಒಂದಾಗಿದೆ. ಜೀವನದ ಆರಂಭದ ದಿನಗಳಲ್ಲಿ ಕಷ್ಟಗಳು ಅವರಿಗೆ ಕಠಿಣ ಪರಿಶ್ರಮದ ಮೌಲ್ಯವನ್ನು ಕಲಿಸಿದ್ದವು. ಇದು ಅವರಿಗೆ ಚಿಕ್ಕ ವಯಸ್ಸಿನಿಂದಲೇ ಜನರು ಮತ್ತು ರಾಷ್ಟ್ರದ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸ್ಫೂರ್ತಿ ನೀಡಿತು.

ರಾಜಕೀಯಕ್ಕೆ ಸೇರಿದ ಹೊಸದರಲ್ಲಿ ಅವರು ರಾಷ್ಟ್ರ ನಿರ್ಮಾಣಕ್ಕೆ ಮೀಸಲಾದ ರಾಷ್ಟ್ರೀಯತಾವಾದಿ ಸಂಘಟನೆಯಾದ ಆರ್ ಎಸ್ ಎಸ್ ನೊಂದಿಗೆ ಕೆಲಸ ಮಾಡಿದರು. ನಂತರ ಅವರು ರಾಜಕೀಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡರು, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಭಾರತೀಯ ಜನತಾ ಪಕ್ಷದೊಂದಿಗೆ ಕೆಲಸ ಮಾಡಿದರು.

ಮಾರ್ಕೋನಹಳ್ಳಿ ಡ್ಯಾಂನಲ್ಲಿ ಮುಳುಗಿ 6 ಮಂದಿ ಜಲಸಮಾಧಿ

ಮತ್ತೊಂದೆಡೆ ಅಪಘಾತಕ್ಕೆ 3 ಜನ ಬಲಿ

ತುಮಕೂರು: ತುಮಕೂರು ಜಿಲ್ಲೆಯ ಪ್ರತ್ಯೇಕ ಕಡೆಗಳಲ್ಲಿ 2 ದುರ್ಘಟನೆ ನಡೆದಿದ್ದು, ಒಟ್ಟು 9 ಮಂದಿ ಬಲಿಯಾಗಿದ್ದಾರೆ. ಕುಣಿಗಲ್ ತಾಲ್ಲೂಕಿನ ಮಾರ್ಕೋನಹಳ್ಳಿ ಡ್ಯಾಂನಲ್ಲಿ ಮುಳುಗಿ 6 ಮಂದಿ ಜಲಸಮಾಧಿಯಾದರೆ, ಹುಲಿಯೂರು ದುರ್ಗದ ಬಳಿ ಭೀಕರ ರಸ್ತೆ ಅಪಘಾತದಲ್ಲಿ ಮೂವರು ಸಾವನ್ನಪ್ಪಿರುವ ಘಟನೆ ನಡೆದಿದೆ. ಡ್ಯಾಂನಲ್ಲಿ ಮುಳುಗಿ ಮೃತಪಟ್ಟವರನ್ನು ತುಮಕೂರು ನಗರ ಬಿಜಿ ಪಾಳ್ಯದವರು ಎಂದು ಗುರುತಿಸಲಾಗಿದೆ ಹಾಗೆಯೇ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದವರನ್ನು ಉಂಗ್ರ ಗ್ರಾಮದವರು ಎನ್ನಲಾಗಿದೆ.

ಡ್ಯಾಂನಲ್ಲಿ ಮುಳುಗಿ ಮೃತಪಟ್ಟವರು ಬಿಜಿ ಪಾಳ್ಯದಿಂದ ಕುಣಿಗಲ್ ತಾಲೂಕಿನ ಮಾಗಡಿಪಾಳ್ಯ ಗ್ರಾಮದಲ್ಲಿರುವ ತಮ್ಮ ಸಂಬಂಧಿಕರ ಮನೆ ಬಂದಿದ್ದರು. ಸಂಬಂಧಿಕರ ಮನೆಯಲ್ಲಿ ಊಟ ಮುಗಿಸಿ ಇಬ್ಬರು ಮಕ್ಕಳು ಸೇರಿ ಕುಟುಂಬ ಸಮೇತ 7 ಜನ ಡ್ಯಾಂಗೆ ತೆರಳಿದ್ದರು. ಈ ವೇಳೆ ಮರ್ಕೋನ ಹಳ್ಳಿ ಡ್ಯಾಂನ ಹಿನ್ನೀರಿನ ಕಾಲುವೆಯಲ್ಲಿ ಆಟವಾಡಲು ಇಳಿದಿದ್ದರು.

ಆಟೋಮ್ಯಾಟಿಕ್ ಆಗಿ ಸೈಫನ್ ಸಿಸ್ಟಂಗಳು ಓಪನ್ ಆಗಿದ್ದು, ನೀರಿನ ಹರಿವು ಹೆಚ್ಚಾದ ಪರಿಣಾಮ 7 ಮಂದಿ ಕೊಚ್ಚಿ ಹೋಗುತ್ತಿದ್ದರು. 7 ಜನರು ಪೈಕಿ ಗಾಯಗೊಂಡಿದ್ದ ಓರ್ವ ಯುವಕನನ್ನು ರಕ್ಷಣೆ ಮಾಡಲಾಗಿದೆ. ಉಳಿದ 6 ಮಂದಿ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.



ಸ್ಥಳಕ್ಕೆ ಎಸ್ಪಿ ಭೇಟಿ: ಸಾಜಿಯಾ, ಅರ್ಬಿನ್ ಎಂಬುವವರ ಮೃತದೇಹಗಳು ಪತ್ತೆಯಾಗಿದ್ದು, ತಬಸುಮ್(45), ಶಬಾನ (44), ಮಿಫ್ರಾ(4), ಮಹಿಬ್(1) ಕಣ್ಮರೆಯಾಗಿದ್ದಾರೆ. ಪ್ರಾಣಾಪಾಯದಿಂದ ಪಾರಾದ ನವಾಜ್ ಎಂಬುವನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ಎಸ್ಪಿ ಅಶೋಕ್ ಕೆವಿ ಮತ್ತು ಅಮೃತೂರು ಠಾಣಾ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಅಮೃತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೀಕರ ರಸ್ತೆ ಅಪಘಾತಕ್ಕೆ 3 ಜನ ಬಲಿ: ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಹುಲಿಯೂರುದುರ್ಗದ ಬಳಿ ಬೈಕ್ ಹಾಗೂ ಲಾರಿ ಮಧ್ಯೆ ಭೀಕರ ರಸ್ತೆ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಮಗು ಸೇರಿ ಸ್ಥಳದಲ್ಲೇ ಮೂವರು ಸಾವನ್ನಪ್ಪಿದ್ದಾರೆ. ಹುಚ್ಚೇಗೌಡ (60), ಮೊಮ್ಮಗ ಪ್ರೀತಮ್ (11) ನಿಂಗಮ್ಮ(55) ಮೃತ ದುರ್ದೈವಿಗಳು.

ರಾಜ್ಯ ಹೆದ್ದಾರಿ 85ರ ಬಳಿಯ ಸುಗ್ಗನಹಳ್ಳಿ ಗ್ರಾಮದ ಬಳಿ ರಸ್ತೆ ಕಾಮಗಾರಿ ನಡೆಯುತ್ತಿತ್ತು. ಹೀಗಾಗಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಈ ವೇಳೆ ಎದುರಿಗೆ ಬಂದ ಲಾರಿಗೆ ಬೈಕ್ ಸವಾರ ಹುಚ್ಚೇಗೌಡ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದರೆ, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ನಿಂಗಮ್ಮ ಮೃತಪಟ್ಟಿದ್ದಾರೆ ಈ ಸಂಬಂಧ ಹುಲಿಯೂರು ದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ರೀ ಕಲ್ಲು ಇದ್ದ ಹಾಗೇ ಇದ್ದೀರ?
ಗಂಡ : ಹೂ ಕಣೇ, ಅಕ್ಕೀಲಿ ಕಲ್ಲನ್ನು ಸೋಸಿ ಹಾಕಂದ್ರೆ ಹಾಗೇ ಬೇಯ್ಸಿ ಹಾಕ್ತೀಯಲ್ಲ ಅದನ್ನು ತಿಂದು ಕಲ್ಲಿದ್ದಂಗೆ ಇದ್ದೀನಿ.

ಮೈಸೂರು ಮಿತ್ರ

ಬುಧವಾರ, 8 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಜೀವನದಲ್ಲಿ ಯಾವತ್ತೂ ನಟಿಸಬೇಡಿ. ನೀವು ಹೇಗಿದ್ದೀರಾ ಹಾಗೇ ಇರಿ. ಯಾರನ್ನು ಮೆಚ್ಚಿಸಲು ಪ್ರಯತ್ನ ಮಾಡಬೇಡಿ. ಏಕೆಂದರೆ, ನಟನೆ ಒಮ್ಮೆ ಅಭ್ಯಾಸವಾದರೆ ಜೀವನ ಪೂರ್ತಿ ನಟಿಸುತ್ತಲೇ ಇರಬೇಕಾಗುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಿಡಿ ಸಣ್ಣದಾದರೂ ಕಾಡೆಲ್ಲವನ್ನು ಸುಡುತ್ತದೆ.

ನಿಮ್ಮ ಪತ್ರಗಳು

■ ಡಿ. ಮಾದೇಗೌಡರಿಗೆ ಬೆಂಗಳೂರು ವಿವಿ ಗೌರವ ಡಾಕ್ಟರೇಟ್ ಸ್ವಾಗತಾರ್ಹ

ಮಾನ್ಯರೆ,



ಮಾಜಿ ವಿಧಾನ ಪರಿಷತ್ ಸದಸ್ಯ, ಮೈಸೂರಿನ ಹಿಂದಿನ ಸಿಐಟಿಬಿ (ನಗರ ವಿಶ್ವಸ್ಥ ಮಂಡಳಿ) ಮಾಜಿ ಅಧ್ಯಕ್ಷರು, ಮನೆ ಮಾದೇಗೌಡ ಎಂದೇ ಜನಪ್ರಿಯ ರಾದ ಡಿ.ಮಾದೇಗೌಡರಿಗೆ ಬೆಂಗಳೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡುತ್ತಿರುವುದು ಸ್ವಾಗತಾರ್ಹ.

ಪ್ರಾಮಾಣಿಕ ರಾಜಕಾರಣಿ, ಸರಳ ಸಜ್ಜನಿಕೆಯ ಸಾಕಾರ ಮೂರ್ತಿಯಂತಿರುವ ಡಿ.ಮಾದೇಗೌಡರು ಸಿಐಟಿಬಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆಶಾ ಮಂದಿರದ ಯೋಜನೆಯಲ್ಲಿ ಸಾವಿರಾರು ಜನರಿಗೆ ಸೂರು ನೀಡಿದ್ದು , ಅದೂ ಜನರ ಮನೆ ಮನೆ ಬಾಗಿಲಿಗೆ ಹೋಗಿ ನಿವೇಶನ ಮಂಜೂರು ಮಾಡಿದ್ದು ಇವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಅಂದು ಕೇವಲ ಆರು ಸಾವಿರಕ್ಕೆ ಅವರು ಮಂಜೂರು ಮಾಡಿದ 20x30 ನಿವೇಶನ ಇಂದು ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವಂತಾಗಿದೆ. ಇವರ ಸಾಧನೆಯನ್ನು ಗುರುತಿಸಿ ಬೆಂಗಳೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸುತ್ತಿರುವುದು ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ. ಇಂತಹ ಪ್ರಾಮಾಣಿಕ ರಾಜಕಾರಣಿ ಯಾವುದೇ ಸಾರ್ವಜನಿಕ ಚುನಾವಣೆಯಲ್ಲೂ ಜನಪ್ರತಿನಿಧಿಯಾಗಿ ಆಯ್ಕೆ ಆಗದೇ ಹೋದದ್ದು ಪ್ರಜಾಪ್ರಭುತ್ವದ ದುರಂತ. ಈ ರಾಜಕೀಯದಿಂದ ಬೇಸತ್ತು ಕೊನೆಗೆ ರಾಮಕೃಷ್ಣ ಆಶ್ರಮದ ಭಕ್ತರಾಗಿ ಸಮಾಜ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು, ಸಮಾಜ ಸೇವೆ ಸಲ್ಲಿಸುತ್ತಿರುವುದು ಇವರ ಪ್ರಾಮಾಣಿಕತೆಗೆ ಹಿಡಿದ ಕೈಗನ್ನಡಿಯಾಗಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಸಾರ್ವಜನಿಕ ಶೌಚಾಲಯಗಳ ಸೂಕ್ತ ನಿರ್ವಹಣೆ ಅಗತ್ಯ

ಮಾನ್ಯರೆ,

ಮೈಸೂರಿನಲ್ಲಿ ಮಹಿಳೆಯರಿಗೆಂದೇ ಪ್ರತ್ಯೇಕ ಶೌಚಾಲಯ ಕೇವಲ ದೇವರಾಜ ಅರಸ್ ರಸ್ತೆಗೆ ಹತ್ತಿರ ಇರುವಂತೆ ನಿರ್ಮಿಸಿದ್ದಾರೆ.

ಈಗ ಸಾರ್ವಜನಿಕ ಶೌಚಾಲಯಗಳು ಮಹಿಳೆಯರು ಉಪಯೋಗಿಸಲು ಯೋಗ್ಯವಾಗಿಲ್ಲ. ಗಲೀಜಿನಿಂದ ಕೂಡಿರುವ ಈ ಶೌಚಾಲಯ ಬಳಸುವುದು ಮಹಿಳೆಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಪ್ರತಿನಿತ್ಯ ಸಾವಿರಾರು ಮಹಿಳೆಯರು ಶಾಲಾ ಕಾಲೇಜು, ವೃತ್ತಿ, ದೈನಂದಿನ ಕೆಲಸ ಹರಸಿ ಮೈಸೂರಿಗೆ ಬರುತ್ತಾರೆ. ಸಾರ್ವಜನಿಕ ಶೌಚಾಲಯಗಳು ಇಂದಿಗೂ ಕೂಡ ದುಸ್ಥಿತಿಯಲ್ಲಿವೆ. ತಂತ್ರಜ್ಞಾನ ಹಾಗೂ ಆಧುನಿಕ ಸಾಧನಗಳನ್ನು ಬಳಸಿ ನಿರ್ಮಿಸುವ ಶೌಚಾಲಯಗಳು ನಮಗೆ ಸಿಗುವುದು ಐಷಾರಾಮಿಯ ಹೋಟೆಲ್ ಹಾಗೂ ಮಾಲ್‌ಗಳಲ್ಲಿ ಮಾತ್ರ. ಪ್ರತಿ ಸಾರ್ವಜನಿಕ ಶೌಚಾಲಯದಲ್ಲೂ ಶೌಚಾಲಯದ ಗುಣಮಟ್ಟ ಹಾಗೂ ನೈರ್ಮಲ್ಯತೆಯ ಬಗ್ಗೆ ಪ್ರತಿಕ್ರಿಯೆ ನೀಡಲು ಅಳವಡಿಸಿರುವ ಸಾಧನಗಳು ಕೆಲಸ ಮಾಡುತ್ತಿಲ್ಲ. ಹೊಸದಾಗಿ ನಿರ್ಮಿಸಿರುವ ಶೌಚಲಯಗಳು ಬಾಗಿಲು ಮುಚ್ಚಿವೇ. ಮಾನ್ಯ ಜಿಲ್ಲಾಧಿಕಾರಿಗಳು ಮಹಿಳೆಯರ ಕಾಳಜಿ ಹಾಗೂ ಸ್ವಚ್ಛ ಮೈಸೂರು ಆಶಯದೊಂದಿಗೆ ಈಗ ಇರುವ ಸಾರ್ವಜನಿಕ ಶೌಚಲಯಗಳನ್ನು ತಂತ್ರಜ್ಞಾನ ಹಾಗೂ ಆಧುನಿಕ ಸಾಧನಗಳೊಂದಿಗೆ ಅಭಿವೃದ್ಧಿ ಪಡಿಸಬೇಕಾಗಿದೆ. ಅವುಗಳ ನಿರ್ವಹಣೆಗೆ ಸೂಕ್ತ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ.

–ಸಾರ್ವಜನಿಕ ಹಿತಾಸಕ್ತರು, ಮೈಸೂರು.

■ ಜಾತಿ ಗಣತಿ : ತಿದ್ದುಪಡಿಗೆ ಆಪ್‌ನಲ್ಲಿ ಅವಕಾಶ ಮಾಡಿ

ಮಾನ್ಯರೆ,

ಸರ್ಕಾರವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಮೀಕ್ಷೆಯನ್ನು ಜಾತಿಗಳನ್ನು ಗುರುತಿಸುವುದರ ಮೂಲಕವೇ ನಡೆಸುತ್ತಿದೆ. ಈ ಸಮೀಕ್ಷೆಗೆ ಪ್ರಮುಖವಾಗಿ ಪಡಿತರ ಚೀಟಿಯನ್ನೇ ಮೂಲ ಆಧಾರವಾಗಿ ಬಳಸಲಾಗುತ್ತಿದೆ. ಆದರೆ ಎಪಿಎಲ್ ಕಾರ್ಡ್ ಹೊಂದಿರುವ ಬಹಳಷ್ಟು ಮಂದಿಯ ಕಾರ್ಡ್‌ಗಳು ಯಾವುದೇ ಪಡಿತರ ಪಡೆಯದಿರುವ ಕಾರಣದಿಂದ ನಿಷ್ಕ್ರಿಯವಾಗಿವೆ. ಆದರೆ ಸಮೀಕ್ಷೆಗೆ ಬರುವ ಸಿಬ್ಬಂದಿ ರೇಷನ್ ಕಾರ್ಡ್ ಅನ್ನೇ ಮೂಲ ಆಧಾರವಾಗಿ ಬಳಸುತ್ತಿದ್ದಾರೆ. ನಿಷ್ಕ್ರಿಯವಾಗಿರುವ ಕಾರ್ಡ್‌ಗಳ ಸಂಖ್ಯೆಯನ್ನು ದಾಖಲು ಮಾಡಿದಾಗ ಅಲ್ಲಿ ಕುಟುಂಬದ ಎಲ್ಲಾ ಸದಸ್ಯರ ಮಾಹಿತಿ ಇಲ್ಲದೆ ಕೇವಲ ಕುಟುಂಬದ ಯಜಮಾನರ ಮಾಹಿತಿ ಅಷ್ಟೇ ದಾಖಲಾಗುತ್ತದೆ. ಇನ್ನುಳಿದ ಸದಸ್ಯರ ಮಾಹಿತಿಯನ್ನು ದಾಖಲಿಸಲು ಆಪ್‌ನಲ್ಲಿ ಸಮೀಕ್ಷೆದಾರರಿಗೆ ಅವಕಾಶವಿಲ್ಲದ ಕಾರಣ ಸದಸ್ಯರ ಮಾಹಿತಿ ಬಿಟ್ಟು ಹೋಗುತ್ತಿದೆ. ಆದ್ದರಿಂದ ಹಿಂದುಳಿದ ವರ್ಗಗಳ ಆಯೋಗವು ಇಂತಹ ಸಂದರ್ಭದಲ್ಲಿ ಉಳಿದ ಸದಸ್ಯರ ಮಾಹಿತಿಯನ್ನು ತುಂಬಲು ಸಮೀಕ್ಷೆ ನಡೆಸುವವರಿಗೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಸಮೀಕ್ಷೆಯ ಉದ್ದೇಶ ವಿಫಲವಾಗುತ್ತದೆ. ನಮಗೆ ಯಾವುದೇ ಮಾಹಿತಿಯನ್ನು ಸೇರಿಸಲು ಅವಕಾಶವಿಲ್ಲ. ಈ ಬಗ್ಗೆ ನಮ್ಮ ಅಧಿಕಾರಿಗಳನ್ನು ಕೇಳಿಕೊಂಡು ನಾಳೆ ಬರುತ್ತೇವೆ ಎಂದು ಹೇಳಿ ಹೋದರು. ಆದರೆ ಬರಲಿಲ್ಲ. ಇಂತಹ ತೊಂದರೆಗಳ ಬಗ್ಗೆ ಸರ್ಕಾರ ಗಮನ ಹರಿಸಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಎರಡು 'ಮರಣಸೂಕ್ತಿ'ಗಳು!

ಮಾನ್ಯರೆ,

ಸ್ವಾಮಿ ವಿವೇಕಾನಂದರು ಹೇಳುತ್ತಾರೆ :

1. "ನಕಾರಾತ್ಮಕ ಶಿಕ್ಷಣ ಅಥವಾ ನಕಾರತೆಯನ್ನು ಆಧರಿಸಿದ ಯಾವುದೇ ತರಬೇತಿ ಸಾವಿಗಿಂತ ಹೀನ!"
2. "ಇತರರಿಗಾಗಿ ಯಾರು ಬದುಕುತ್ತಾರೋ ಅವರದೇ (ನಿಜವಾದ) ಬದುಕು; ಉಳಿದವರು ಬದುಕಿಯೂ ಸತ್ತಂತೆ!"

ಈ ಹೇಳಿಕೆಗಳು ಅತ್ಯಂತ ಪ್ರಸ್ತುತವಲ್ಲವೆ?

ಬುರುಡೆ : ತಿರುಳು ಹುರುಳಿಲ್ಲದ ಬರಿಯ 'ಬುರುಡೆ'ಗಳ ದೇಶವಾಯಿತೇ ಭಾರತ? ಶೋಚನೀಯ!

– ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಜೀವನ ಮೌಲ್ಯವುಳ್ಳ ಪ್ರತಿಬಿಂಬ ಶ್ರೀರಾಮ

ರಾಮಾಯಣ ಭಾರತ ದೇಶದ ಜೀವನಾಡಿ. ಅದರ ಮುಖ್ಯ ಪಾತ್ರವೂ, ನಾಯಕನೂ ಆದ ಶ್ರೀರಾಮನು ನಮಗೆ ಆದರ್ಶ ಪುರುಷ. ರಾಮಾದಿವದ್ವರ್ತಿತವ್ಯಂ, ರಾಮನಂತೆ ಇರಬೇಕು ಎಂಬುದು ಭಾರತೀಯ ಸಂಸ್ಕೃತಿ ಫಲದ ತಿರುಳು. ಅವನು ಎಲ್ಲ ಜೀವನ ಮೌಲ್ಯಗಳ ಪ್ರತಿನಿಧಿ. ವಾಲ್ಮೀಕಿ ಮಹರ್ಷಿಗಳು ನಾರದರನ್ನೂ–

ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ

ಈ ಎಲ್ಲ ಗುಣಗಳನ್ನು ಹೊಂದಿರುವ ಮನುಷ್ಯನು ಯಾರು? ಎಂದು ಕೇಳಿದಾಗ ಸಿಕ್ಕಿದ ಉತ್ತರ ರಾಮ ಎಂಬುದೇ ಆಗಿತ್ತು. ರಾಮನು ಗೌರವಿಸಿದ ಮೌಲ್ಯಗಳು ಧರ್ಮ, ಕೃತಜ್ಞತೆ, ಸತ್ಯ ಮತ್ತು ವ್ರತ (ನಿಯಮ ಪಾಲನೆ).

ಧರ್ಮವು ಜಗತ್ತಿನ ಅಸ್ತಿತ್ವಕ್ಕೆ ಅಡಿಪಾಯ. ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ಎಂದು ಹೇಳಿದ್ದಾರೆ. ಧರ್ಮದ ಪ್ರತಿಷ್ಠಾಪನೆ ಮತ್ತು ಅಧರ್ಮ ನಿರ್ಮೂಲನೆ ಭಗವಂತನ ಅವತಾರಗಳ ಮುಖ್ಯೋದ್ದೇಶ. ಶ್ರೀರಾಮನು ಎಂದೂ ಧರ್ಮ ವಿರುದ್ಧವಾದುದನ್ನು ಮಾಡಲಿಲ್ಲ. ಧರ್ಮವನ್ನು ತಿಳಿದವನು, ಧರ್ಮವನ್ನು ಆಚರಿಸಿದವನು ಧರ್ಮಜ್ಞ. ಅಷ್ಟು ಮಾತ್ರವಲ್ಲ, ಅವನೇ ಧರ್ಮದ ರೂಪ, ರಾಮ ಬೇರೆಯಲ್ಲ, ಧರ್ಮ ಬೇರೆಯಲ್ಲ ಎಂದು ಅವನಿಗೆ ಶತ್ರುಗಳಾಗಿದ್ದ ರಾಕ್ಷಸ ಲ್ಲೊಬ್ಬನಾಗಿದ್ದ ಮಾರೀಚನೇ ಹೇಳುತ್ತಾನೆ. ರಾಮೋ ವಿಗ್ರಹವಾನ್ ಧರ್ಮ: ಎಂಬುದು ಮಾರೀಚನ ಮಾತು.

ರಾಮನು ಪಾಲಿಸಿದ ಎರಡನೆಯ ಮೌಲ್ಯ ಕೃತಜ್ಞತೆ. ಯಾರಾದರೂ ಮಾಡಿದ ಉಪಕಾರ ನೆನೆಯುವುದು ಕೃತಜ್ಞತೆ. ಯಾರಾದರೂ ಎಂದಾದರೂ ಮಾಡಿದ ಸಣ್ಣ ಉಪಕಾರವನ್ನೂ ರಾಮನು ಮರೆಯುತ್ತಿರಲಿಲ್ಲ.

ಕಥಂಚಿದುಪಕಾರೇಣ ಕೃತೇನೈಕೇನ್ ತುಷ್ಯತಿ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತೆಯಾ॥

ಹೀಗೆ ವಾಲ್ಮೀಕಿ ಮಹರ್ಷಿಗಳು ಹೇಳಿದ್ದಾರೆ. ರಾಮನು ಬೇರೆಯವರು ಮಾಡಿದ ಒಂದು ಉಪಕಾರವನ್ನೂ ಮರೆಯುವುದಿಲ್ಲ. ಆದರೆ ನೂರು ಅಪರಾಧಗಳನ್ನು ನೂರು ಉಪಕಾರಗಳನ್ನು ಮಾಡಿದ್ದರೂ, ಅವನ್ನು ಎಂದೂ ನೆನಪಿಸಿಕೊಳ್ಳುವುದಿಲ್ಲ. ಇದು ರಾಮನ ವೈಶಿಷ್ಟ್ಯ. ರಾವಣನು ಸೀತೆಯನ್ನು ಮೋಸದಿಂದ ಕದ್ದು ಒಯ್ಯುವಾಗ ಅವನಿಗೆ ಅಡ್ಡ ಬಂದು ಸೀತೆಯ ರಕ್ಷಣೆಗಾಗಿ ತನ್ನ ಪ್ರಾಣವನ್ನೇ ತೆತ್ತವನು ಜಟಾಯು. ಅದನ್ನು ಅರಿತು ಅತ್ಯಂತ ದುಃಖಪಟ್ಟವನು ಶ್ರೀರಾಮ. ಕೃತಜ್ಞತೆಯಿಂದ ರಾಮನು ಮೃತ ಜಟಾಯುವಿಗೆ ಪಿತೃಯೋಗ್ಯವಾದ ಅಂತಿಮ ಸಂಸ್ಕಾರವನ್ನು ಮಾಡುತ್ತಾನೆ.

ಸತ್ಯವಾಕ್ಯ ಎಂಬುದು ರಾಮನು ಗೌರವಿಸಿ ಪಾಲಿಸಿದ ಇನ್ನೊಂದು ಮೌಲ್ಯ. ಯಾವ ಸಂದರ್ಭದಲ್ಲೂ ಅವನು ಸುಳ್ಳನ್ನು ನುಡಿಯಲಿಲ್ಲ. ರಾಮೋ ದ್ವಿರ್ನಾಭಿಭಾಷತೇ. ಒಮ್ಮೆ ಮಾತು ಕೊಟ್ಟರೆ ಅದನ್ನು ನಡೆಸುವುದೇ ಧರ್ಮ ಎಂದು ಅವನ ನೀತಿ. ಹಾಗೆ ಯಾವಜ್ಜೀವವೂ ನಡೆದುಕೊಂಡ ವ್ಯಕ್ತಿ ಶ್ರೀರಾಮ. ಯಾರದೋ ಭಯದಿಂದ, ಯಾವುದೇ ಆಶೆಯಿಂದ, ಲಾಭಕ್ಕಾಗಿಯಾದರೂ ಸುಳ್ಳನ್ನೇ ಆಡುವವರು ಸಾಮಾನ್ಯರು. ಯಾವ ಕಾರಣಕ್ಕೂ ಸತ್ಯ ಮಾರ್ಗವನ್ನು ಬಿಡುವವನಲ್ಲ ಶ್ರೀರಾಮ.



ರಾಮನ ವ್ಯಕ್ತಿತ್ವದ ಇನ್ನೊಂದು ವಿಶೇಷ ಮೌಲ್ಯ ದೃಢವ್ರತ. ಒಪ್ಪಿಕೊಂಡ ವ್ರತವನ್ನು ಯಾವಜ್ಜೀವ, ಎಂದರೆ ಬದುಕಿರುವವರೆಗೂ ಪಾಲಿಸುವ ನಿಷ್ಠೆ ಅವನು ಏಕಪತ್ನೀವ್ರತಸ್ಥ. ಒಂದೇ ಮಾತು, ಒಂದೇ ಬಾಣ, ಒಬ್ಬಳೇ ಪತ್ನಿ. ಆ ಕಾಲದಲ್ಲಿ ರಾಜರಿಗೆ ಅನೇಕ ಪತ್ನಿಯರು ಇರುತ್ತಿದ್ದರು. ರಾಜಾನೋ ಬಹುವಲ್ಲಭಾಃ. ರಾಮನ ತಂದೆ ದಶರಥನಿಗೂ ಮೂವರು ರಾಣಿಯರಿದ್ದರು. ಆದರೆ ರಾಮನಿಗೆ ಸೀತೆ ಒಬ್ಬಳೇ ಪತ್ನಿ. ಸೀತಾಪರಿತ್ಯಾಗಾ ನಂತರವೂ ಅಶ್ವಮೇಧಯಾಗವನ್ನು ಮಾಡುವಾಗ ಸೀತೆಯ ಚಿನ್ನದ ಪ್ರತಿಮೆಯನ್ನು ಅವಳ ಜಾಗದಲ್ಲಿ ಇಟ್ಟು ರಾಮನು ಯಾಗವನ್ನು ಮಾಡಿದನು.

ಮಾತಾಪಿತೃಭಕ್ತಿ ರಾಮನು ತಂದೆ–ತಾಯಿಯರನ್ನು ದೇವರೆಂದು ಸದಾ ಭಾವಿಸುತ್ತಿದ್ದನು. ತಂದೆಯ ಜ್ಯೇಷ್ಠ ಪುತ್ರನಾಗಿ ಪರಂಪರಾನುಗತವಾಗಿ ರಾಜ್ಯಾಧಿಕಾರದ ಹಕ್ಕು ಇದ್ದರೂ, ದಶರಥನು ಕೈಕೇಯಿಗೆ ಕೊಟ್ಟಿದ್ದ ಮಾತನ್ನು ಉಳಿಸಲು ರಾಮನು ರಾಜ್ಯವನ್ನು ತ್ಯಜಿಸಿ ಹದಿನಾಲ್ಕು ವರ್ಷ ವನವಾಸ ಮಾಡಲು ಸಿದ್ಧನಾಗಿ ಹೊರಟಿದ್ದು ಪಿತೃವಾಕ್ಯ ಪರಿಪಾಲನೆ ಎಂಬ ಮೌಲ್ಯಕ್ಕೆ ಅವನಿತ್ತ ಬೆಲೆಯನ್ನು ತಿಳಿಸುತ್ತದೆ. ಹದಿನಾಲ್ಕು ವರ್ಷ ಯಾವ ನಗರದಲ್ಲಾಗಲಿ, ಗ್ರಾಮದಲ್ಲಾಗಲಿ ಕಾಲನ್ನಿಡದೆ ಕಾಡಿನಲ್ಲೇ ಕಾಲವನ್ನು ಕಳೆಯುವ ಅವನ ನಿರ್ಧಾರ ಅಚಲವಾಗಿತ್ತು. ತನ್ನ ಪಟ್ಟಾಭಿಷೇಕ ತಪ್ಪಿಸಿ ಕಾಡಿಗೆ ಅಟ್ಟಿದ ಚಿಕ್ಕಮ್ಮನನ್ನೂ ಅವನು ನಿಂದಿಸಲಿಲ್ಲ. ತಂದೆಯ ಮೇಲೆ ಕೋಪಿಸಿಕೊಳ್ಳಲಿಲ್ಲವೆನ್ನುವುದು ರಾಮನ ಮಾತಾಪಿತೃ ಭಕ್ತಿ ಉನ್ನತೀಕರಿಸಿದೆ.

ಭ್ರಾತೃಪ್ರೇಮ ತನ್ನ ತಮ್ಮಂದಿರಲ್ಲಿ ರಾಮನಿಗೆ ಅಪಾರ ಪ್ರೀತಿಯಿತ್ತು. ಲಕ್ಷ್ಮಣನಲ್ಲಂತೂ ಅವನ ವಾತ್ಸಲ್ಯ ಅತಿಶಯಿತವಾಗಿತ್ತು. ರಾವಣನೊಡನೆ ನಡೆದ ಯುದ್ಧದಲ್ಲಿ ಲಕ್ಷ್ಮಣನೊಮ್ಮೆ ಕೆಳಗೆ ಬಿದ್ದು ಸಂಜ್ಞೆಯನ್ನೇ ಕಳೆದುಕೊಂಡಾಗ ರಾಮನ ವಿಲಾಪ ಕರುಳನ್ನೇ ಕಿವಿಚುವಂತಿದೆ.

ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾಂಧವಾಃ।
ತಂತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ॥

(ಯಾವ ದೇಶದಲ್ಲಾದರೂ ಹೆಂಡತಿಯರು ದೊರಕುತ್ತಾರೆ, ಯಾವ ದೇಶದಲ್ಲಾದರೂ ಬಂಧುಗಳು ದೊರಕುತ್ತಾರೆ, ಆದರೆ ಸಹೋದರನು ದೊರಕುವ ದೇಶವನ್ನು ನಾನೆಲ್ಲೂ ಕಾಣೆ) ಎಂಬ ಅವನ ಮಾತು ಭ್ರಾತೃ ವಾತ್ಸಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ರಾಮನು ಭರತನನ್ನು ತನ್ನ ಸ್ಪರ್ಧಿ (rival) ಎಂದು ಎಂದೂ ಪರಿಗಣಿಸಲಿಲ್ಲ. ಸೀತೆಯೊಡನೆ ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗಿದ ಮೇಲೆ ಶ್ರೀರಾಮನ ಪಟ್ಟಾಭಿಷೇಕ ವೈಭವದಿಂದ ಜರುಗಿತು. ರಾಜ್ಯದ ಐಶ್ವರ್ಯವನ್ನು, ಅಧಿಕಾರವನ್ನು, ನಾಲ್ವರೂ ಹಂಚಿಕೊಳ್ಳಬೇಕು ಎಂಬುದೇ ರಾಮನ ಅಭಿಲಾಷೆಯಾಗಿತ್ತು. ನೀನು ಯುವರಾಜನಾಗು ಎಂದು ಲಕ್ಷ್ಮಣನಿಗೆ ಹೇಳಿದರೂ ಅವನು ಒಪ್ಪಿಗೆ ಕೊಡಲಿಲ್ಲ. ಆಗ ರಾಮನು ಭರತನನ್ನು ಒಪ್ಪಿಸಿ ಅವನನ್ನೇ ಯುವರಾಜನನ್ನಾಗಿ ಮಾಡಿದನು.

ರಾಮನ ಪ್ರಜಾನುರಾಗ

ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ –'ಸ್ವಸುಖಂ ನ ಸುಖಂ ರಾಜ್ಞಃ ಪ್ರಜಾನಾಂ ತು ಸುಖಂ ಸುಖಂ' ಎಂದು ಹೇಳಿದ್ದಾನೆ. ತನ್ನ ಸುಖ ರಾಜನಿಗೆ ಸುಖವಲ್ಲ, ಪ್ರಜೆಗಳ ಸುಖವೇ ರಾಜನ ಸುಖ ಎಂದು ಅದರ ಅರ್ಥ. ಇದನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತಂದಿದ್ದವನು ರಾಮ. ಪ್ರಜೆಗಳು ಸೀತೆಯ ವಿಷಯದಲ್ಲಿ ಸಂಶಯ ಪಡುತ್ತಿದ್ದರೆಂಬುದನ್ನು ಕೇಳಿ ಅವಳನ್ನೇ ತ್ಯಜಿಸಿದ ತ್ಯಾಗಿ ರಾಜ ರಾಮ. ಪ್ರಜೆಗಳಿಗೆಲ್ಲ ತಮ್ಮ ದೂರನ್ನು ರಾಜನ ಬಳಿ ಹೇಳುವ ಅವಕಾಶವಿತ್ತು. ನಿಷ್ಕಾರಣವಾಗಿ ತನಗೆ ಯಾರೋ ಹೊಡೆದರು, ಅವರಿಗೆ ಶಿಕ್ಷೆಯಾಗಲಿ ಎಂದು ನಾಯಿ ಒಂದು ದೂರನ್ನು ಕೊಟ್ಟಾಗ ಆ ಅಪರಾಧಿಗೆ ರಾಮನು ದಂಡವನ್ನು ವಿಧಿಸಿದ ಕಥೆಯೂ ರಾಮಾಯಣದ ಉತ್ತರಕಾಂಡದಲ್ಲಿ ಬಂದಿದೆ. ಈ ರೀತಿಯಾದ ನ್ಯಾಯಪರತೆ, ಪ್ರಜಾವಾತ್ಸಲ್ಯ ರಾಮನಿಗೆ ಇಷ್ಟವಾಗಿದ್ದ ಮೌಲ್ಯ.

ಕ್ಷಮಾಗುಣ ತಪ್ಪನ್ನು ಮಾಡಿದವರು ಪಶ್ಚಾತ್ತಾಪ ಪಟ್ಟಾಗ ಅವರನ್ನು ಕ್ಷಮಿಸುವುದು ದೊಡ್ಡ ಗುಣ. ಅದು ಜೀವನದ ದೊಡ್ಡ ಮೌಲ್ಯ. ವಿಭೀಷಣನು ಲಂಕೆಯನ್ನು ತೊರೆದು ಅವನ ಕಡೆಗೆ ಸೇರಲು ಬಂದಾಗ ಅವನನ್ನು ತಮ್ಮ ಪಕ್ಷದಲ್ಲಿ ಸೇರಿಸಿಕೊಳ್ಳಲು ಸುಗ್ರೀವನು ಒಪ್ಪುವುದಿಲ್ಲ. ಆದರೆ ರಾಮನು ಆಗ ಹೇಳುತ್ತಾನೆ.

ಆನಯೈನಂ ಕಪಿಶ್ರೇಷ್ಠ ದತ್ತಮಸ್ಯಾಭಯಂ ಮಯಾ।
ವಿಭೀಷಣೋ ವಾ ಸುಗ್ರೀವ ಯದಿ ವಾರಾಯಣ: ಸ್ವಯಮ್ ॥

(ಕಪಿರಾಜನೆ, ಅವನನ್ನಿಲ್ಲಿ ಕರೆದುಕೊಂಡು ಬಾ. ಅವನಿಗೆ ನಾನು ಅಭಯವನ್ನು ನೀಡುತ್ತಿದ್ದೇನೆ. ಅವನು ವಿಭೀಷಣನಾಗಿರಲಿ ಅಥವಾ ಸಾಕ್ಷಾತ್ ರಾವಣನೇ ಆಗಿರಲಿ, ಚಿಂತೆಯಿಲ್ಲ).

ಸೀತಾಪಹರಣದಂತಹ ಮಹಾಪರಾಧವನ್ನು ಮಾಡಿದವನಾದರೂ ರಾವಣನು ತನ್ನ ಪಾಪಕ್ಕೆ ಪಶ್ಚಾತ್ತಾಪಪಟ್ಟು ಶರಣಾಗತನಾದರೆ ಕ್ಷಮಿಸಲು ಶ್ರೀರಾಮನು ಸಿದ್ಧನಾಗಿದ್ದನೆಂಬುದು ಅವನ ಕ್ಷಮಾಗುಣವನ್ನು ಸೂಚಿಸುತ್ತದೆ. ಆದರೆ ರಾಮನ ಕ್ಷಮೆ ದೌರ್ಬಲ್ಯದಿಂದ ಬಂದುದಲ್ಲ. ಅವನ ಸಹನೆ ಕೈಲಾಗದವನ ಸಹನೆಯಲ್ಲ. ಶಕ್ತಿವಂತನ ಕ್ಷಮಾಗುಣವೇ ನಿಜವಾದ ಭೂಷಣ. ರಾವಣನು ಮೊಂಡುತನದಿಂದ, ಅಹಂಕಾರದಿಂದ, ಗರ್ವದಿಂದ ಸೆಟೆದು ನಿಂತಾಗ ಅವನನ್ನು ಬಗ್ಗು ಬಡಿಯುವುದು ರಾಮನಿಗೆ ಅನಿವಾರ್ಯವಾಯಿತು. ರಾವಣನೊಬ್ಬನ ತಪ್ಪು ರಾಕ್ಷಸಕುಲಕ್ಕೇ ಮಾರಕವಾಯಿತು. ಅದು ರಾಮನ ದೋಷವಲ್ಲ. ರಾಮನು ಹೀಗೆ ಹಲವು ಮೌಲ್ಯಗಳ ಸಂಗಮ. ಅಂತಹ ದಿವ್ಯ ವ್ಯಕ್ತಿತ್ವವನ್ನು ಚಿತ್ರಿಸಿದ ವಾಲ್ಮೀಕಿ ಮಹರ್ಷಿಗಳು ಧನ್ಯರು.

ಮಾದರಿ ಮಾದೇಗೌಡರಿಗೆ ಗೌರವ ಡಾಕ್ಟರೇಟ್



ಆರ್.ರಘು
ಸಾಮಾಜಿಕ ಚಿಂತಕ
ಹಾಗೂ
ರಾಜಕಾರಣಿ
ಮೊಬೈಲ್: 9448061101

ಪ್ರಶಸ್ತಿ–ಪುರಸ್ಕಾರಗಳು ಇವತ್ತಿನ ವ್ಯವಸ್ಥೆಯಲ್ಲಿ ಅರ್ಹರಿಗೆ ಸಲ್ಲುವುದು ಅಪರೂಪವೇ ಆಗಿದೆ. ಕೆಲವೊಮ್ಮೆ ಅರ್ಹರಿಗೆ ಸಲ್ಲುವ ಮೂಲಕ ಆಯಾಯ ಪ್ರಶಸ್ತಿ–ಪುರಸ್ಕಾರಗಳೇ ತಮ್ಮ ಘನತೆ ಹೆಚ್ಚಿಸಿಕೊಳ್ಳುತ್ತವೆ. ಸದ್ಯಕ್ಕೆ ನಮ್ಮ ಮೈಸೂರಿನ ಡಿ.ಮಾದೇಗೌಡರಿಗೆ ಬೆಂಗಳೂರು ವಿಶ್ವವಿದ್ಯಾಲಯದ ಈ ಬಾರಿಯ ಗೌರವ ಡಾಕ್ಟರೇಟ್ ಪದವಿ ಸಲ್ಲುತ್ತಿರುವುದು ನಿಜ ಸಾಧಕನಿಗೆ ಸಂದ ಗೌರವವಾಗಿದೆ. ಪಾರದರ್ಶಕ ನಡೆ–ನುಡಿ, ಸಮಾಜ ಹಾಗೂ ದೇಶಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ಆದರ್ಶ ರಾಜಕಾರಣಿಗಳ ಪರಂಪರೆಯ ಕೊಂಡಿ ಉಳಿದುಕೊಂಡಿರುವುದು ಬೆರಳೆಣಿಕೆಯಷ್ಟು ಮಾತ್ರ. ಇಂತಹ ಮಹನೀಯರ ಸಾಲಿನಲ್ಲಿ ಡಿ.ಮಾದೇಗೌಡರು ಇಂದಿಗೂ ಕ್ರಿಯಾಶೀಲರಾಗಿರುವುದು ಆದರ್ಶ ರಾಜಕಾರಣವನ್ನು ಬಯಸುವ ಜನಸಮುದಾಯದ ಪಾಲಿಗೆ ಪ್ರೇರಣಾ ಶಕ್ತಿಯಾಗಿದೆ.



ಡಿ.ಮಾದೇಗೌಡರು

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆದರ್ಶ ಚಿಂತನೆ–ಯೋಜನೆಗಳನ್ನು ಬೆಳೆಸುವುದು ಹಾಗಿರಲಿ, ಉಳಿಸುವ ಬದ್ಧತೆಯ ಕೊರತೆ ನಡುವೆ ಹೆಚ್.ಸಿ.ದಾಸಪ್ಪ, ಶ್ರೀಮತಿ ಯಶೋಧರ ದಾಸಪ್ಪ, ತುಳಸಿ ದಾಸಪ್ಪರಂತಹ ಮಹನೀಯರ ನಂತರದ ಸಾಲಿನಲ್ಲಿ ಮಾದೇಗೌಡರು 80ರ ದಶಕದಲ್ಲಿ ಜನ ಕಲ್ಯಾಣ ಕಾರ್ಯಗಳ ಕ್ರಾಂತಿಗೆ ಮತ್ತೆ ಮುನ್ನುಡಿ ಬರೆಯುವ ಸಂಕಲ್ಪದ ಸಂಕೇತ ರವಾನಿಸಿದರು.

ಮೈಸೂರಿನ ಕುಂಬಾರಕೊಪ್ಪಲು ಗ್ರಾಮದಲ್ಲಿ ಜನಿಸಿ, ಗ್ರಾಮೀಣ ಕಾಳಜಿಯ ಜೊತೆಗೆ ಗಾಂಧೀಜಿಯವರ ಆದರ್ಶ, ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ಜೀವನದ ಧ್ಯೇಯಮಂತ್ರವನ್ನಾಗಿಸಿಕೊಂಡು ಸಾರ್ವಜನಿಕ ಬದುಕು ಪ್ರವೇಶಿಸಿದ ಮಾದೇಗೌಡರು, ಒಂದಷ್ಟು ಕಾಲ ಸರ್ಕಾರಿ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದರು.

ನಾಲ್ವಡಿಯವರ ಮಹಾಕಳಕಳಿ ಎಂದರೆ, ತಮ್ಮ ಸಂಸ್ಥಾನದ ಪ್ರಜೆಗಳು ಮೂಲ ಸೌಕರ್ಯಗಳಿಂದ ಬವಣೆ ಪಡುವಂತಾಗಬಾರದು, ರೈತಾಪಿ ವರ್ಗ ಆಕಾಶ ದಿಟ್ಟಿಸುವಂತಾಗಬಾರದು, ಸೂರಿಲ್ಲದ ಬಡಜನರು ಬಿಸಿಲು–ಮಳೆ–ಚಳಿಯ ಬಾಧೆಯಿಂದ ಬಸವಳಿಯುವಂತಾಗಬಾರದು, ಅವರಲ್ಲಿ ಸೂರಿಲ್ಲದ ಅನಾಥಪ್ರಜ್ಞೆ ಕಾಡಬಾರದು ಎಂಬುದಾಗಿತ್ತು. ಇದಕ್ಕಾಗಿ ಅವರು ಆಧುನಿಕ ತಂತ್ರಜ್ಞಾನವನ್ನು ಏಷ್ಯಾ ಖಂಡದಲ್ಲಿಯೇ ಮೊದಲ ಬಾರಿಗೆ ಸ್ಪರ್ಶಿಸಿ, ಮನೆ–ಮನೆಯಲ್ಲಿ ವಿದ್ಯುದ್ದೀಪ ಬೆಳಗಿಸಿ, 'ಕೃಷ್ಣರಾಜ ಭೂಪ–ಮನೆ ಮನೆ ದೀಪ' ಎಂದೆನಿಸಿಕೊಂಡರು.

ಅರಮನೆಯ ಸ್ವಂತ ಒಡವೆಗಳನ್ನು ಮಾರಿ ರೈತರಿಗಾಗಿ ಕನ್ನಂಬಾಡಿ ಕಟ್ಟೆ (ಕೃಷ್ಣರಾಜ ಸಾಗರ) ಕಟ್ಟಿಸಿದರು. ಸೂರಿಲ್ಲದವರಿಗಾಗಿ ಬೆಂಗಳೂರು–ಮೈಸೂರಲ್ಲಿ 'ನಗರ ವಿಶ್ವಸ್ಥ ಮಂಡಳಿ' ಅಸ್ತಿತ್ವಕ್ಕೆ ತಂದರು. ಅಂದಿನಿಂದಲೇ ಯೋಜಿತ ಬಡಾವಣೆಗಳ ನಿರ್ಮಾಣ ಮಾಡಿ, ಜನರಿಗೆ ವಸತಿ ಸೌಲಭ್ಯ ಕಲ್ಪಿಸುವ ಮಹಾ ಕಾರ್ಯಕ್ಕೆ ನಾಂದಿ ಹಾಡಿದರು. ನಾಲ್ವಡಿಯವರ ಆಶಯದ ಅಭಿವೃದ್ಧಿ ರಥವನ್ನು ಮತ್ತೆ ಎಳೆದೊಯ್ಯುವ ಸಂಕಲ್ಪ ತೊಟ್ಟು, ಜನಸಾಮಾನ್ಯರಿಗೆ 'ಆಶಾಮಂದಿರ' ಯೋಜನೆ ಹೆಸರಿನಲ್ಲಿ ಐತಿಹಾಸಿಕ ಸೂರು ಕ್ರಾಂತಿ ನಡೆಸಿದ ಯಾವುದಾದರೂ ನಗರವಿದ್ದರೆ ಅದು ಮೈಸೂರು ನಗರ, ಅದರ ರೂವಾರಿ ಡಿ.ಮಾದೇಗೌಡರು.

ನಗರ ವಿಶ್ವಸ್ಥ ಮಂಡಳಿ ಅಧ್ಯಕ್ಷರಾಗಿ 1986ರಲ್ಲಿ ನೇಮಕಗೊಂಡ ಡಿ.ಮಾದೇಗೌಡರು 1987ರಲ್ಲಿ ವಿಶ್ವಸಂಸ್ಥೆ ಘೋಷಣೆ ಮಾಡಿದ 'ಅಂತರರಾಷ್ಟ್ರೀಯ ವಸತಿ ವರ್ಷ'ವನ್ನು ಅಕ್ಷರಶಃ ಸಾಕಾರಗೊಳಿಸಬೇಕೆಂಬ ಸಂಕಲ್ಪ ತೊಟ್ಟರು. ಆಶಾಮಂದಿರ ಯೋಜನೆ 50 ಸಾವಿರ ಸೂರಿಲ್ಲದ ಕುಟುಂಬಗಳಿಗೆ ವ್ಯವಸ್ಥಿತ ಸೂರು ಕಲ್ಪಿಸುವಲ್ಲಿ ಜಾಗತಿಕ ದಾಖಲೆ ಮಾಡಿತು. 'ಇಂದಿನ ದಿನಗಳಲ್ಲಿ ಸರ್ಕಾರಿ ನೌಕರರೂ 20X30ರ ನಿವೇಶನ ಹೊಂದುವುದು ಕನಸಿನ ಮಾತಾಗಿದೆ. ಆದರೆ ಆ ದಿನಗಳಲ್ಲಿ ಸ್ವಂತ ಮನೆ ಹೊಂದಬೇಕೆಂಬ ಕನಸು ಕಲ್ಪನೆಯೇ ಇಲ್ಲದ ಬಡ ಕುಟುಂಬಗಳು, ನಿರ್ಗತಿಕ ಕುಟುಂಬಗಳು, ಬೀದಿ ವ್ಯಾಪಾರಿಗಳು, ಅಲೆಮಾರಿಗಳು. ಸಣ್ಣ–ಪುಟ್ಟ ನೌಕರರು, ಕಾರ್ಖಾನೆ ಕಾರ್ಮಿಕರು, ತಳ್ಳುಗಾಡಿ ವ್ಯಾಪಾರಿಗಳಿಗೆ ಕೈಗೆಟಕುವ ದರದಲ್ಲಿ ನಿವೇಶನ, ಮನೆ ಹೊಂದುವ ಭಾಗ್ಯ ಒಲಿಯಿತು. ಹುಡ್ಕೋ ನೆರವಿನೊಂದಿಗೆ ಆದಾಯ ಮೂಲ ಹಾಗೂ ಭದ್ರತೆಯ ಷರತ್ತುಗಳಿಲ್ಲದಂತೆ ಬಡವರಿಗೆ ಸರಳ ಕಂತು ಕಟ್ಟುವ ಯೋಜನೆಯಡಿಯಲ್ಲೂ ಸುವ್ಯವಸ್ಥಿತವಾಗಿ ಮನೆಗಳನ್ನು ವಿತರಿಸುವಲ್ಲಿ ಮಾದೇಗೌಡರು ವಹಿಸಿದ ಶ್ರಮ ಅನನ್ಯವಾದುದು.

"ಅಣ್ಣ ಬಸವಣ್ಣನವರ ಇವನಾರವ ಇವನಾರವ" ಅಮೃತವಾಣಿಯನ್ನು ಹೃದಯಕ್ಕೆ ಅಂಟಿಸಿಕೊಂಡು ಸ್ವಂತ ಸೂರಿಲ್ಲದವರ ಗುಡಿಸಲು–ವಠಾರಗಳ ಬಳಿಗೆ ಹೋಗಿ ನಿಂತು, ನೀವು ನನ್ನವರು, ನೀವು ನನ್ನವರು ಗುಡಿಸಲು–ಬಾಡಿಗೆ ಮನೆಗಳನ್ನು ತೊರೆಯಿರಿ, ಸ್ವಂತ ಮನೆ ಹೊಂದಿರಿ; ಆಶಾಮಂದಿರ ಪ್ರವೇಶಿಸಿ ಭದ್ರ ಭವಿಷ್ಯದ ಬೆಳಕಿನ ದೀಪ ಹಚ್ಚ ಬನ್ನಿ ... ಎಂದು ಪಾದಯಾತ್ರೆ ಮೂಲಕ 'ಸೂರು ಕ್ರಾಂತಿ' ನಡೆಸಿದ 'ವಸತಿ ಗಾಂಧಿ' ಡಿ.ಮಾದೇಗೌಡರು. ಇಂದಿಗೂ ಅವರ ಸಾರಥ್ಯದಲ್ಲಿ ನಿರ್ಮಾಣ ಗೊಂಡ ರಾಮಕೃಷ್ಣನಗರ, ಶಾರದಾದೇವಿನಗರ, ವಿವೇಕಾನಂದನಗರ, ಅರವಿಂದನಗರ, ಕಲ್ಯಾಣಗಿರಿ, ರಾಜೀವ್‌ನಗರ ಸೇರಿದಂತೆ 9 ಬಡಾವಣೆಗಳ ಮನೆ–ಮನೆಗಳಲ್ಲಿ ಈಗಲೂ ಮಾದೇಗೌಡರ ಹೆಸರು ಮಾರ್ದನಿಸುತ್ತಲೇ ಇದೆ.

> ❝ ನಾಲ್ವಡಿಯವರ ಆಶಯದ ಅಭಿವೃದ್ಧಿ ರಥವನ್ನು ಮತ್ತೆ ಎಳೆದೊಯ್ಯುವ ಸಂಕಲ್ಪ ತೊಟ್ಟು, ಸ್ವಾತಂತ್ರ್ಯ ನಂತರದಲ್ಲಿ ದೇಶದಲ್ಲಿ ವಸತಿಹೀನರಿಗಾಗಿ ಜನಸಾಮಾನ್ಯರ ಬಳಿಗೆ ಆಶಾಮಂದಿರ ಯೋಜನೆಯ ಹೆಸರಿನಲ್ಲಿ ಐತಿಹಾಸಿಕ ಸೂರು ಕ್ರಾಂತಿ ನಡೆಸಿದ ಯಾವುದಾದರೂ ನಗರವಿದ್ದರೆ ಅದು ಮೈಸೂರು ನಗರ, ಅದರ ರೂವಾರಿ ಡಿ.ಮಾದೇಗೌಡರು.

ಮಾದೇಗೌಡರು ವಸತಿ ಸಮಸ್ಯೆಯನ್ನಷ್ಟೇ ನೀಗಿಸಲಿಲ್ಲ. ಶಿಕ್ಷಣ, ಆಧ್ಯಾತ್ಮಿಕ, ಆರೋಗ್ಯ, ಸಮುದಾಯ ಭವನ ಮೊದಲಾದ ಸೌಲಭ್ಯಗಳು ಈ ಬಡಾವಣೆಗಳಲ್ಲಿ ವ್ಯವಸ್ಥಿತವಾಗಿ ತಲೆಎತ್ತಲು ಈ ಬಡಾವಣೆಗಳಲ್ಲಿ ಸಿಎ ನಿವೇಶನಗಳನ್ನು ಮಂಜೂರು ಮಾಡಿದರು. ಇಂದಿನ ವಿಜಯನಗರದ ಯೋಗ ನರಸಿಂಹ ಸ್ವಾಮಿ ದೇವಸ್ಥಾನ, ರಾಮಕೃಷ್ಣನಗರದ ಚರ್ಚ್, ಸಿದ್ಧಿಕಿ ನಗರದ ಮಸೀದಿಗಳಿಗೆ ಸಿಎ ನಿವೇಶನ ಮಂಜೂರು ಮಾಡಿಸಿ ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟದ ಸಂದೇಶವನ್ನು ಅಕ್ಷರಶಃ ಸಾರ್ಥಕಗೊಳಿಸುವಲ್ಲಿ ಯಶಸ್ವಿಯಾದರು.

ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಹಾಗೂ ದಂತ ವೈದ್ಯಕೀಯ ಕಾಲೇಜಿಗೆ ಹೊಂದಿಕೊಂಡಂತಿರುವ ವಸತಿ ಪ್ರದೇಶಗಳಿಗೆ 'ಶಿವರಾತ್ರೀಶ್ವರ ನಗರ' ಎಂದು ನಾಮಕರಣ ಮಾಡುವ ಮೂಲಕ ಈ ಭಾಗದಲ್ಲಿ ಸರ್ವಧರ್ಮ ಸಮನ್ವಯ ಮನಸ್ಥಿತಿಯ ವಾತಾವರಣ ನಿರ್ಮಿಸುವಲ್ಲಿ ಮಾದೇಗೌಡರು ಜಾಣ್ಮೆಯ ಹೆಜ್ಜೆ ಇಟ್ಟರು. ಜನರ ಹೃದಯದಲ್ಲಿ ಹಾಗೂ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯಬಹುದು ಎನ್ನುವುದನ್ನು ಮಾದೇಗೌಡರು ರಾಜಕೀಯ ವ್ಯವಸ್ಥೆಯಲ್ಲಿ ಮಾದರಿಯಾಗಿ ನಿಂತು ತೋರಿಸಿಕೊಟ್ಟರು.

ಮೈಸೂರು ರಾಜಮಹಾರಾಜರು ಅದರಲ್ಲೂ ನಾಲ್ವಡಿಯವರ ಆಧುನಿಕ ಮೈಸೂರಿನ ಪರಂಪರೆಗೆ ಎಲ್ಲೂ ಚ್ಯುತಿ ಬಾರದ ರೀತಿಯಲ್ಲಿ ಮೂಲ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಸುಂದರ ಬಡಾವಣೆಗಳನ್ನು ನಿರ್ಮಿಸಿ ಮೈಸೂರಿನ ಘನತೆ ಎತ್ತಿ ಹಿಡಿದರು. ರಾಷ್ಟ್ರಕವಿ ಕುವೆಂಪು ಜೀವಿತಾವಧಿಯಲ್ಲೇ ಕುವೆಂಪು ಬಡಾವಣೆ ನಿರ್ಮಾಣಗೊಂಡು ಮೈಸೂರಿನ ಹೆಗ್ಗಳಿಕೆಗೆ ಗರಿ ಮೂಡಿಸಿಕೊಂಡಿತ್ತು. ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ನಿತ್ಯವೂ ಜನರು ಪಠಿಸುವಂತಾಗಲು ಕುವೆಂಪು ನಗರದ ಜೋಡಿ ರಸ್ತೆಗೆ ವಿಶ್ವ ಮಾನವ ಜೋಡಿ ರಸ್ತೆ ಎಂದು ಹೆಸರಿಟ್ಟರು, ಕುವೆಂಪು ಅವರ ಜನಪ್ರಿಯ ಕವಿತೆಗಳನ್ನು ನೆನಪಿಸುವ ಮಾದರಿಯಲ್ಲಿ ಅನಿಕೇತನ ರಸ್ತೆ, ನವಿಲು ರಸ್ತೆ, ಪಚ್ಚೆ ರಸ್ತೆ, ಗಗನ ಚುಂಬಿ ಜೋಡಿ ರಸ್ತೆ, ಪಂಚಮಂತ್ರ ರಸ್ತೆ ಹೀಗೆ ಕವಿಸಂದೇಶ ಹೆಸರಿಸಿ ಬಡಾವಣೆ ಹೆಸರನ್ನು ಮಾದೇಗೌಡರು ಸಾರ್ಥಕಗೊಳಿಸಿದರು. ಅಲ್ಲದೇ ಸಿದ್ಧಾರ್ಥನಗರ ಬಡಾವಣೆಯ ಹೆಸರನ್ನೂ ಅರ್ಥಪೂರ್ಣಗೊಳಿಸುವ ಆಶಯದೊಂದಿಗೆ ಗೌತಮ ಬುದ್ಧನ ಸಂದೇಶ ಸಾರುವ ನಿಟ್ಟಿನಲ್ಲಿ ಬುದ್ಧ ಮಾರ್ಗ, ಸತ್ಯಮಾರ್ಗ, ತ್ಯಾಗಮಾರ್ಗ, ಮೋಕ್ಷ ಮಾರ್ಗ, ಅಹಿಂಸಾಮಾರ್ಗಗಳೆಂಬ ಹೆಸರುಗಳನ್ನಿಟ್ಟು ಬುದ್ಧ ಬದ್ಧತೆ ಮೆರೆದರು.

ರಾಮಕೃಷ್ಣ ಆಶ್ರಮದ ಪರಮ ಭಕ್ತರಾದ ಮಾದೇಗೌಡರು ಸ್ವಾಮಿವಿವೇಕಾನಂದರು ತಂಗಿದ್ದ ನಿರಂಜನ ಮಠದ ಸ್ಥಳದಲ್ಲಿ ಭವ್ಯ ವಿವೇಕ ಸ್ಮಾರಕ ನಿರ್ಮಾಣಗೊಳ್ಳಲು ತೋರಿದ ಕಾಳಜಿ, ಎದುರಾದ ಹತ್ತು–ಹಲವು ಅಡ್ಡಿಗಳನ್ನು ನಿವಾರಿಸುವಲ್ಲಿ ಹೋರಾಟದ ಸಾರಥ್ಯ ವಹಿಸಿದ್ದರ ಫಲವಾಗಿ ಇಂದು ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಬೃಹತ್ ವಿವೇಕ ಸ್ಮಾರಕ ನಿರ್ಮಾಣವಾಗುತ್ತಿದೆ. ಇದು ಮೈಸೂರಿನ ಇತಿಹಾಸದ ಪುಟದಲ್ಲಿ ಒಂದು ಹೆಗ್ಗುರುತಾಗಲಿದೆ.

ರಾಜಕೀಯ ಅಧಿಕಾರಕ್ಕಾಗಿ ಮಾದೇಗೌಡರು ಎಂದೂ ಹಪಾಹಪಿತನ ತೋರಲಿಲ್ಲ. ಮಾದೇಗೌಡರ ಸೇವಾ ಹಿರಿತನ, ಸರಳತನ, ವಸತಿ ಕ್ರಾಂತಿಯ ಸಾಧನೆ ಹಿನ್ನೆಲೆ ಅರಿತಿದ್ದ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವಿಧಾನಪರಿಷತ್ತಿಗೆ ಅವರನ್ನು ಕಳಿಸಿಕೊಟ್ಟರು. ಶಾಸಕರಾಗಿ ಮೈಸೂರು ನಗರದ ಜನರ ದನಿಯಾಗಿ ಅವರು ಸದಾ ಕ್ರಿಯಾಶೀಲವಾಗಿ ಸ್ಪಂದಿಸಿದರು.

ಮಹಾನಗರಪಾಲಿಕೆಯ ಸ್ವಚ್ಛ ಅಭಿಯಾನವನ್ನು ಒಂದು ಕೈಂಕರ್ಯವೆಂದು ಕೈಗೆತ್ತಿಕೊಂಡು ಅವರು ನಡೆಸಿದ ಕಾರ್ಯಕ್ರಮ ಜಡ್ಡುಗಟ್ಟಿದ ಪಾಲಿಕೆಯ ವ್ಯವಸ್ಥೆ ಗತ್ಯಂತರವಿಲ್ಲದೇ ಕೈಗೆತ್ತಿಕೊಂಡು ಅನುಸರಿಸುವಂತಾಯಿತು. 'ನಿರ್ಮಲ ನಗರ' ಯೋಜನೆಯಡಿ ಕುಂಬಾರಕೊಪ್ಪಲಿನ ಘನತ್ಯಾಜ್ಯ ಘಟಕ ನಿರ್ವಹಣೆ ಮಾಡುತ್ತಿರುವ ಫೆಡರೇಶನ್ ಆಫ್ ಮೈಸೂರು ಸಿಟಿ ವಾರ್ಡ್ ಪಾರ್ಲಿಮೆಂಟ್ ಎಂಬ ಸಂಸ್ಥೆ ಇಂದು ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೆ ಅದೂ ಮಾದೇಗೌಡರ ಪರಿಶ್ರಮದ ಫಲವೇ. ಬಹುವರ್ಷಗಳಿಂದ ಉಪೇಕ್ಷೆಗೆ ಒಳಗಾಗಿ ಜನರ ದೃಷ್ಟಿ ಹಾಗೂ ಕಾಳಜಿಯಿಂದ ಶಿಥಿಲಗೊಳ್ಳುತ್ತಿದ್ದ ಪುರಾಣ ಪ್ರಸಿದ್ಧ ಹೆಬ್ಬಾಳು ಶ್ರೀ ಲಕ್ಷ್ಮೀಕಾಂತ ದೇವಸ್ಥಾನ ಮಾದರಿ ಎನ್ನುವ ರೀತಿಯಲ್ಲಿ ಜೀರ್ಣೋದ್ಧಾರಗೊಂಡು, ಇಂದು ಅತ್ಯಾಕರ್ಷಕ ಧಾರ್ಮಿಕ ಕೇಂದ್ರವಾಗಿ ಜನರನ್ನು ತನ್ನತ್ತ ಸೆಳೆಯುತ್ತಿದ್ದರೆ ಅದಕ್ಕೆ ಕಾರಣವೇ ಮಾದೇಗೌಡರ ಭಗೀರಥ ಪ್ರಯತ್ನ.

ತಮ್ಮ ತಂದೆ ದೊಡ್ಡತಮ್ಮಯ್ಯನವರಿಂದ ಬಂದ ಜನಸೇವಾ ಪ್ರೇರಣೆಯ ಬಳುವಳಿಯನ್ನು ಹೆಗಲ ಮೇಲೆ ಹೊತ್ತು ಸಮಾಜಕ್ಕಾಗಿ, ಊರಿಗಾಗಿ, ನಾಡಿಗಾಗಿ, ದೇಶಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ಮೈಸೂರಿನ ರಾಜಕೀಯ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ತಮ್ಮ ಶಾಶ್ವತ ಹೆಜ್ಜೆ ಗುರುತುಗಳನ್ನು ಪಡಿಮೂಡಿಸಿದ್ದಾರೆ.

83ರ ವಯಸ್ಸಿನಲ್ಲೂ ಕ್ರಿಯಾಶೀಲರಾಗಿರುವುದರ ಹಿಂದಿನ ಗುಟ್ಟು ಮಾನಸಿಕ ಪರಿಶುದ್ಧತೆ ಹಾಗೂ ಶಿಸ್ತಿನ ಜೀವನ ಶೈಲಿ ಎನ್ನುವ ಮಾದೇಗೌಡರು ನಮ್ಮ ನಿಮ್ಮ ನಡುವೆ ನೂರ್ಕಾಲ ಇರಬೇಕು. ಇಂದು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಸ್ವೀಕರಿಸುತ್ತಿರುವ ಅವರಿಗೆ ಇನ್ನಷ್ಟು ಪ್ರಶಸ್ತಿಗಳು ಹರಿದು ಬಂದರೆ ಅವರಿಗೆ ಸಲ್ಲುವ ಗೌರವವಷ್ಟೇ ಅಲ್ಲ, ಅವರಂತೆ ಸಮಾಜ ಕಾರ್ಯದಲ್ಲಿ ತೊಡಗಬೇಕೆನ್ನುವ ಅದೆಷ್ಟೋ ಜನರಿಗೆ ಪ್ರೇರಣೆಯಾಗಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ನಗರದಲ್ಲಿ ಈಗ ಕಸದ್ದೇ ಕಾರುಬಾರು!

●ಪಾಲಿಕೆಯ ಪ್ರಯತ್ನದ ಫಲವಾಗಿ 'ಸ್ವಚ್ಛ ದಸರಾ' ಆಚರಣೆ ●ಬೆನ್ನಹಿಂದೆಯೇ ಬಹುತೇಕ ಕಡೆ ರಾರಾಜಿಸುತ್ತಿದೆ ಕಸದ ರಾಶಿ ●ಹಲವೆಡೆ ದಸರಾ, ಆಯುಧ ಪೂಜೆ ಕಸ ಕೊಳೆತು ದುರ್ವಾಸನೆ ●ಜನರ ಬೇಜವಾಬ್ದಾರಿಯಿಂದಲೂ ಈ ದುಸ್ಥಿತಿ; ಪಾಲಿಕೆ ಸಿಬ್ಬಂದಿ ಬೇಸರ

ಮೈಸೂರು, ಅ.7(ಎಂಕೆ)– 'ಬರ್ತಾ ಬರ್ತಾ ರಾಂಪುರ ಕುದುರೆ ಕತ್ತೆ ಯಾಯ್ತು...' ಎಂಬಂತಾಗಿದೆ ಮೈಸೂರು ಮಹಾನಗರಪಾಲಿಕೆ ಆಡಳಿತ...!

ಕೆಲ ತಿಂಗಳ ಹಿಂದೆಯಷ್ಟೇ ಸ್ವಚ್ಛ ನಗರಗಳ ಸಾಲಿನಲ್ಲಿ ಮೂರನೇ ಸ್ಥಾನ ಪಡೆದಿದ್ದ ಕ್ಲೀನ್ ಅಂಡ್ ಕಲ್ಚರಲ್ ಸಿಟಿ ಮೈಸೂರು... ಮತ್ತೆ ಗಾರ್ಬೇಜ್ ಸಿಟಿ ಆಗಿ ಮಾರ್ಪಟ್ಟಿದ್ದು, ಮೊನ್ನೆಯಷ್ಟೇ ಯಶಸ್ವಿಯಾಗಿ ಸಂಪನ್ನಗೊಂಡ ನಾಡಹಬ್ಬ ದಸರಾ ಮಹೋತ್ಸವ ನೋಡಿ ಆನಂದಿಸಿ, ವಾಪಸ್ ತೆರಳುತ್ತಿದ್ದ ಪ್ರವಾಸಿಗರಿಗೆ ದುರ್ವಾಸನೆ ಜೊತೆಗೆ ಕಂಡಲ್ಲಿ ಕಸ ದರ್ಶನದ ಭರ್ಜರಿ ಗಿಫ್ಟ್ ನೀಡಿ ಬೀಳ್ಕೊಡುತ್ತಿದೆ...!

ಮಳೆ ನಿಂತು ಹೋದ ಮೇಲೆ ಮಣ್ಣಿನ ರಸ್ತೆಯಲ್ಲಿ ಬೊಗ್ಗಡದ ನೀರು ನಿಂತಂತೆ, ದಸರಾ ಸಂಭ್ರಮದಲ್ಲಿ ಸ್ವಚ್ಛತೆಯಿಂದ ಕೂಡಿದ್ದ ರಸ್ತೆಗಳು, ದಸರಾ ಮುಗಿದ ಬಳಿಕ ಕಸದ ರಾಶಿಯಿಂದ ತುಂಬಿ ತುಳುಕಾಡುತ್ತಿವೆ. ಮೈಸೂರಿನ ಹೃದಯ ಭಾಗದಲ್ಲಿರುವ ಬಹುತೇಕ ರಸ್ತೆ ಬದಿಯಲ್ಲಿ, ಹಲವು ಬಡಾವಣೆಗಳ ಗಲ್ಲಿ ಗಲ್ಲಿಗಳಲ್ಲಿಯೂ ಕಸದ ರಾಶಿ ಕಣ್ಣಿಗೆ ರಾಚುತ್ತಿದೆ. ಅಷ್ಟು ಮಾತ್ರವಲ್ಲದೆ ಹಲವೆಡೆ ಯುಜಿಡಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದು ಮೂಗು ಮುಚ್ಚಿಕೊಂಡು ತಿರುಗಾಡುವ ದುಸ್ಥಿತಿ ನಿರ್ಮಾಣವಾಗಿದೆ.

ಹೂವಿನ ಹಾರಗಳು, ಕೊಳೆತ ಬಾಳೆ ಹಣ್ಣು, ಎಲೆ ಮತ್ತು ದಿಂಡು, ಆಹಾರ ಪದಾರ್ಥ, ಪ್ಲಾಸ್ಟಿಕ್ ವಸ್ತುಗಳು, ಚೀಲ ಮತ್ತು ಪ್ಲಾಸ್ಟಿಕ್ ಬುಟ್ಟಿಗಳು, ಥರ್ಮೋಕೋಲ್, ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳು, ರಟ್ಟಿನ ಚೂರುಗಳು, ಒಡೆದ ಗಾಜುಗಳು, ಬಳಸಿದ ಟೀ ಕಪ್‌ಗಳು ಮತ್ತು ತ್ಯಜಿಸಿದ ಪ್ಯಾಕೇಜಿಂಗ್‌ಗಳ ರಾಶಿ ಸೇರಿದಂತೆ ಇನ್ನಿತರೆ ತ್ಯಾಜ್ಯ ಎಲ್ಲೆಂದರಲ್ಲಿ ಬಿದ್ದಿದೆ. ಸ್ವಚ್ಛ ದಸರಾ ಮಾಡುವಲ್ಲಿ ಸೈ ಎನಿಸಿಕೊಂಡ ಪಾಲಿಕೆ, ದಸರಾ ಮುಗಿದ ಬಳಿಕ ಕಸ ವಿಲೇವಾರಿಯಲ್ಲಿ ಮತ್ತೆ ಎಡವಿದ್ದು, ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ವಿನೋಬ ರಸ್ತೆ, ಚೆಲುವಾಂಬ ಅಗ್ರಹಾರದ ಸೀತಾ ವಿಲಾಸ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಎಂ.ಜಿ.ರಸ್ತೆ ಮಾರುಕಟ್ಟೆ, ನೀಲಕಂಠಸ್ವಾಮಿ ಮಠದ ಬಳಿ, ಹಳೆ ಸಂತೇಪೇಟೆ, ಮೈಸೂರು ಅರಮನೆ ಸುತ್ತಮುತ್ತ, ಜಗನ್ಮೋಹನ ಅರಮನೆ ಬಳಿ, ಜೋಡಿ ತೆಂಗಿನಮರ ರಸ್ತೆ, ಬನ್ನಿ ಮಂಟಪ ಮತ್ತು ಚಾಮರಾಜ ಜೋಡಿ ರಸ್ತೆ ಸೇರಿದಂತೆ ಹಲವೆಡೆ ಕಸದ ರಾಶಿ ಬಿದ್ದಿದ್ದರೆ, ರಿಂಗ್‌ರಸ್ತೆಯಲ್ಲಿರುವ ಮಾನಸಿನಗರ ಹಾಗೂ ಮತ್ತಿತರ ಕಡೆಗಳಲ್ಲಿ ಯುಜಿಡಿ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿದೆ. ಆಯುಧ ಪೂಜೆ ಹಬ್ಬದ ಹಿನ್ನೆಲೆ ಮಾರಾಟಕ್ಕೆ ಲೋಡ್‌ಗಟ್ಟಲೆ ತಂದಿದ್ದ ಬೂದುಕುಂಬಳ ಕಾಯಿ ಮತ್ತು ಬಾಳೆದಿಂಡಿನ ಉಳಿಕೆಯನ್ನು ರಸ್ತೆ ಬದಿಗಳಲ್ಲಿ ಬಿಸಾಡಿದ್ದು, ಅವುಗಳೀಗ ಕೊಳೆತು ನಾರುತ್ತಿವೆ. 11 ದಿನಗಳ ದಸರಾ ಮಹೋತ್ಸವದಲ್ಲಿ 1000ಕ್ಕೂ ಅಧಿಕ ಟನ್ ಕಸ ಸಂಗ್ರಹಣೆ ಮಾಡಿದ್ದೇವೆ ಎಂದು ಹೇಳುತ್ತಿರುವ ಪಾಲಿಕೆ, ಇನ್ನೂ ವ್ಯವಸ್ಥಿತವಾಗಿ ಕಸ ವಿಲೇವಾರಿ ಮಾಡಿದ್ದರೆ 2000 ಟನ್‌ಗೂ ಅಧಿಕವಾಗುತ್ತಿತ್ತು ಎಂದು ಮೈಸೂರಿನ ಜನತೆ ಕಿಡಿಕಾರಿದ್ದಾರೆ.

ಕ್ಲೀನ್ ಸಿಟಿ ಗಾರ್ಬೇಜ್ ಸಿಟಿಯಾಗುತ್ತಿದೆ: ದೇಶದಲ್ಲಿ ಕ್ಲೀನ್ ಸಿಟಿ ಎಂಬ ಹೆಗ್ಗಳಿಕೆ ಪಡೆದಿದ್ದ ಮೈಸೂರು ಇದೀಗ ಗಾರ್ಬೇಜ್ ಸಿಟಿಯಾಗುತ್ತಿದೆ. ಕಸದ ನಡುವೆಯೇ ತಿರುಗಾಡುವ, ದುರ್ವಾಸನೆಯನ್ನೇ ಉಸಿರಾಡುವ ದುಸ್ಥಿತಿ ನಿರ್ಮಾಣವಾಗಿದೆ. ಮೈಸೂರು ಮಹಾನಗರಪಾಲಿಕೆ ವ್ಯವಸ್ಥಿತವಾಗಿ ಕಸ ವಿಲೇವಾರಿ ಮಾಡುತ್ತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಯಂತ್ರೋಪಕರಣಗಳ ಅಗತ್ಯ: ಪ್ರತಿನಿತ್ಯ ಕಸ ಸಂಗ್ರಹ ಮತ್ತು ವಿಲೇವಾರಿಗೆ ಪಾಲಿಕೆಯ 1,675 ಮಂದಿ ಪೌರಕಾರ್ಮಿಕರ ಜೊತೆಗೆ ದಸರಾ ಸಂದರ್ಭದಲ್ಲಿ 500 ಮಂದಿ ಕಾರ್ಮಿಕರನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿತ್ತು. ಮೈಸೂರು ಬೆಳೆಯುತ್ತಿದ್ದು, ಜನಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಮಾನವ ಶಕ್ತಿ ಜೊತೆಗೆ ಯಂತ್ರೋಪಕರಣಗಳ ಅಗತ್ಯವಿದೆ ಎಂದು ಪಾಲಿಕೆಯ ಕೆಲ ಅಧಿಕಾರಿಗಳು ತಮ್ಮ ಅಸಹಾಯಕತೆಯನ್ನು 'ಮೈಸೂರು ಮಿತ್ರ'ನಲ್ಲಿ ಹೊರಹಾಕಿದ್ದಾರೆ.

ಜನರು ಕೂಡ ಸಹಕರಿಸುತ್ತಿಲ್ಲ: ಮೈಸೂರಿನ ಜನತೆಯ ಅರ್ಧದಷ್ಟು ಮಂದಿ ಹಸಿ ಕಸ ಮತ್ತು ಒಣ ಕಸ ಬೇರ್ಪಡಿಸುವುದಿಲ್ಲ. ವಿದ್ಯಾವಂತರೇ ಎಲ್ಲೆಂದರಲ್ಲಿ ಕಸ ಬಿಸಾಡುತ್ತಾರೆ. ಎಷ್ಟೇ ಹೇಳಿದರೂ ಕಂಡ ಕಂಡಲ್ಲಿ ಬಿಸಾಡುತ್ತಾರೆ. ನಾವು ಕೂಡ ಎಲ್ಲೆಲ್ಲಿ ಕಸ ವಿಲೇವಾರಿ ಮಾಡೋದು ಹೇಳಿ ಎಂದು ಪಾಲಿಕೆಯ ಪರಿಸರ ಇಂಜಿನಿಯರ್ ಒಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.




ಮೈಸೂರಿನ ಚೆಲುವಾಂಬ ಅಗ್ರಹಾರದ ಸೀತಾ ವಿಲಾಸ ರಸ್ತೆ, ಎಂ.ಜಿ.ರಸ್ತೆ ಸಮೀಪದ ನೀಲಕಂಠ ಸ್ವಾಮಿ ಮಠದ ರಸ್ತೆ ಬದಿಯಲ್ಲಿ ಕಸದ ರಾಶಿ ಬಿದ್ದಿರುವುದನ್ನು ಚಿತ್ರದಲ್ಲಿ ಕಾಣಬಹುದು.



ಈ ವರ್ಷದ ದಸರಾದಲ್ಲಿ ನಿರೀಕ್ಷೆಗೂ ಮೀರಿ ಮೈಸೂರಿಗೆ ಪ್ರವಾಸಿಗರು ಬಂದಿದ್ದು, ದಸರಾ ಕಾರ್ಯಕ್ರಮಗಳಲ್ಲಿ ಅಪಾರ ಪ್ರಮಾಣದ ತ್ಯಾಜ್ಯ ಸಂಗ್ರಹವಾಗಿದೆ. ಪೌರಕಾರ್ಮಿಕರು ತಮ್ಮ ಸ್ವಚ್ಛತಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ. ದಸರಾ ಮುಗಿದ ರಾಜಮಾರ್ಗ ಸೇರಿದಂತೆ ಮೈಸೂರಿನ ಹೃದಯ ಭಾಗದಲ್ಲಿ ವಿಲೇವಾರಿಯಾಗದೆ ಉಳಿದಿದ್ದ ಕಸವನ್ನು ತ್ವರಿತವಾಗಿ ವಿಲೇವಾರಿ ಮಾಡಲಾಗುವುದು. ಹಾಗೆಯೇ ಎಂದಿನಂತೆ ಕಸ ಸಂಗ್ರಹ ಮತ್ತು ವಿಲೇವಾರಿಗೆ ಗಮನಹರಿಸಲಾಗುವುದು. **–ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ಮಹಾನಗರಪಾಲಿಕೆ**

ಅರಮನೆ ಆವರಣದ ಪಂಚಕರ್ಮ ಚಿಕಿತ್ಸಾ ಕೇಂದ್ರದಲ್ಲಿ ಗಜಪಡೆ ಪರಿವಾರದ 1012 ಮಂದಿಗೆ ಆರೋಗ್ಯ ಸೇವೆ



ಅರಮನೆಯ ಆವರಣದಲ್ಲಿ ದಸರಾ ಆನೆಗಳ ಮಾವುತರು ಮತ್ತು ಕಾವಾಡಿಗಳಿಗಾಗಿ ತೆರೆದಿದ್ದ ಆಯುರ್ವೇಧ ಚಿಕಿತ್ಸಾ ಕೇಂದ್ರದಲ್ಲಿ ಗಜಪಡೆಯ ಮಾವುತರು, ಕಾವಾಡಿಗಳಿಗೆ ಚಿಕಿತ್ಸೆ ನೀಡುತ್ತಿರುವುದು.

ಮೈಸೂರು, ಅ.7(ಎಂಟಿವೈ)– ದಸರಾ ಗಜಪಡೆ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬದ ಸದಸ್ಯರಿಗಾಗಿ ಆಯುಷ್ ಇಲಾಖೆ ತೆರೆದಿದ್ದ ಪಂಚಕರ್ಮ ಚಿಕಿತ್ಸಾ ಕೇಂದ್ರದಲ್ಲಿ 1012 ಮಂದಿಗೆ ಆರೋಗ್ಯ ಸೇವೆ ಒದಗಿಸಿ, ಅಗತ್ಯ ಔಷಧಿ ನೀಡಲಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ. ರೇಣುಕಾದೇವಿ ತಿಳಿಸಿದ್ದಾರೆ.

ಮೈಸೂರು ಅರಮನೆ ಆವರಣದಲ್ಲಿ ಜಿಲ್ಲಾ ಆಯುಷ್ ಇಲಾಖೆ ಗಜಪಡೆಯ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬ ಸದಸ್ಯರಿಗೆ ಪ್ರತಿ ವರ್ಷದಂತೆ ಈ ಬಾರಿಯೂ ಸ್ಥಾಪಿಸಿದ್ದ ಪಂಚಕರ್ಮ ಚಿಕಿತ್ಸಾ ಕೇಂದ್ರದಲ್ಲಿ ಸೆ.4ರಿಂದ ಅ.4ರವರೆಗೆ 1012 ಮಂದಿ ಹೊರ ರೋಗಿಗಳು ಚಿಕಿತ್ಸಾ ಸೌಲಭ್ಯ ಪಡೆದುಕೊಂಡಿದ್ದಾರೆ. ಅಲ್ಲದೆ ಪಂಚಕರ್ಮ–ಉಪಕರ್ಮ ಚಿಕಿತ್ಸೆಯನ್ನು 25 ಮಹಿಳೆಯರು, 112 ಪುರುಷರು ಸೇರಿದಂತೆ 146 ಮಂದಿ, ರಕ್ತದೊತ್ತಡ, ಮಧುಮೇಹ ಪರೀಕ್ಷೆಗೆ 182 ಮಂದಿ ಒಳಗಾಗಿದ್ದಾರೆ. ಅರಣ್ಯ ಪ್ರದೇಶ ಹಾಗೂ ವಿವಿಧ ಆನೆ ಕ್ಯಾಂಪ್‌ನಲ್ಲಿರುವ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬದ ಸದಸ್ಯರು ಇಂಗ್ಲೀಷ್ ಔಷಧಿ ಸ್ವೀಕರಿಸುವುದಿಲ್ಲ. ಆ ಕಾರಣದಿಂದ ಜಿಲ್ಲಾ ಆಯುಷ್ ಇಲಾಖೆ ಕಳೆದ ಹಲವು ವರ್ಷದಿಂದ ಅರಮನೆ ಆವರಣದಲ್ಲಿ ದಸರಾ ಗಜಪಡೆಯೊಂದಿಗೆ ಬರುವ ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರಿಗಾಗಿ ಪಂಚಕರ್ಮ ಚಿಕಿತ್ಸಾ ಕೇಂದ್ರವನ್ನು ತೆರೆದು ಚಿಕಿತ್ಸೆ ನೀಡಲಾಗಿದೆ ಎಂದರು.

ವಾರದ ಏಳು ದಿನವೂ ದಸರಾ ಗಜಪಡೆಯ ಮಾವುತರು, ಕಾವಾಡಿಗರು ಹಾಗೂ ಕುಟುಂಬದವರು ಆರೋಗ್ಯ ಸೇವೆ ಒದಗಿಸಲು ಪಂಚಕರ್ಮ ಚಿಕಿತ್ಸಾ ಕೇಂದ್ರಕ್ಕೆ ಓರ್ವ ಪುರುಷ ವೈದ್ಯರು, ಆರು ಮಂದಿ ಮಹಿಳಾ ವೈದ್ಯರು, ಇಬ್ಬರು ಸಹಾಯಕರು, ಓರ್ವ ಪುರುಷ, ಒಬ್ಬ ಮಸಾಜ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ವೈದ್ಯರಾದ ಡಾ.ಎಂ.ಸಂದೀಪ್, ಡಾ.ಮಮತಾ, ಡಾ.ಸ್ವರ್ಣಲತಾ, ಡಾ.ಶ್ವೇತಾ, ಡಾ.ರೇಖಾ, ಡಾ.ಪಲ್ಲವಿ, ಡಾ.ದಿವ್ಯಾ, ಡಾ.ರಂಜಿತಾ ಮಾವುತರು, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಪಂಚಕರ್ಮ ಪದ್ಧತಿಯಲ್ಲಿ ಚಿಕಿತ್ಸೆ ನೀಡಿದ್ದಾರೆ.

ಚಿಕಿತ್ಸೆ ಪಡೆದುಕೊಂಡು ಬಹುತೇಕರು ಮಂಡಿ, ಸೊಂಟ, ಕೈ, ಕಾಲು, ಮೊಣಕೈ, ಬೆನ್ನು ನೋವು, ಚರ್ಮ ರೋಗ, ಸಂಧಿವಾತ, ಕೆಮ್ಮು, ಶ್ವಾಶಕೋಶದ ಸಮಸ್ಯೆ, ಜ್ವರ, ಸ್ತ್ರೀರೋಗಗಳು, ಕೆಮ್ಮು ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಪಂಚಕರ್ಮ, ಸ್ವೇದ(ಸ್ಟೀಮ್) ಮತ್ತು ಆಯುರ್ವೇದದ ಮೂಲಕ ಚಿಕಿತ್ಸೆ ನೀಡಲು ಜಿಲ್ಲಾ ಆಯುಷ್ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡು ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡಿ ಉಚಿತವಾಗಿ ಔಷಧಿ ನೀಡಲಾಗಿದೆ ಎಂದರು.

ವೀರೇಂದ್ರ ಹೆಗ್ಗಡೆಯವರ ಬಳಿ ಕ್ಷಮೆ ಕೇಳುತ್ತೇನೆ

ಬೆಂಗಳೂರು: ಧರ್ಮಸ್ಥಳದಲ್ಲಿ ಶವಗಳ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅನನ್ಯಾ ಭಟ್ ಕಟ್ಟುಕತೆ ಕೇಸ್‌ನಲ್ಲಿ ಎಸ್‌ಐಟಿ ತನಿಖೆ ಮುಂದುವರಿಸಿದೆ. ಇದರ ಹಿಂದೆ ಬಹು ಭಾಷಾ ನಟ, ನಿರ್ದೇಶಕನ ಸಹೋದರನ ಕೈವಾಡ ಇರುವ ಶಂಕೆ ವ್ಯಕ್ತವಾಗಿದ್ದು, ಎಸ್‌ಐಟಿ ನೋಟೀಸ್ ನೀಡಲು ಮುಂದಾಗಿದೆ.

ಅನನ್ಯಾ ಭಟ್ ಬಗ್ಗೆ ಕಟ್ಟುಕತೆ ಕಟ್ಟಿ ಸುಜಾತಾ ಭಟ್ ಎಲ್ಲರನ್ನು ನಂಬಿಸುವ ಕೆಲಸ ಮಾಡಿದ್ದರು. ಬಳಿಕ ಇದೆಲ್ಲವನ್ನು ಜಮೀನು ವಿಚಾರವಾಗಿ ಮಾಡಿರುವುದಾಗಿ ಒಪ್ಪಿಕೊಂಡಿದ್ದರು. ಇದೀಗ ಅನನ್ಯಾಭಟ್ ಕೇಸ್ ಮತ್ತೆ ಮುನ್ನೆಲೆಗೆ ಬಂದಿದ್ದು, ಪ್ರಕರಣದ ತನಿಖೆಯನ್ನು ಎಸ್‌ಐಟಿ ಮುಂದುವರಿಸಿದೆ.

ಬಹುಭಾಷಾ ನಟನ ಸೋದರನ ಹೆಸರು: ವಾಸಂತಿ ಕೇಸ್ ಬಗ್ಗೆ ತನಿಖೆಗಿಳಿದಾಗ ಎಸ್‌ಐಟಿಗೆ ಬಹುಭಾಷಾ ನಟನ ಸಹೋದರನ ಹೆಸರು ಕೇಳಿ ಬಂದಿದೆ. ನಟನ ಸಹೋದರ ಕಾಲಿವುಡ್ ನಟನಾಗಿದ್ದು, ವಾಸಂತಿ ಗಂಡನ ಗೆಳೆಯ ಎಂದು ತಿಳಿದುಬಂದಿದೆ. ಸದ್ಯ ಕಾಲಿವುಡ್ ನಟ ಚೆನ್ನೈನಲ್ಲಿ ರುವುದಾಗಿ ಮಾಹಿತಿಯಿದ್ದು, ಆತನ ವಿಳಾಸ ಪತ್ತೆ ಮಾಡುವಲ್ಲಿ ಎಸ್‌ಐಟಿ ಕಾರ್ಯನಿರತವಾಗಿದೆ. ವಿಳಾಸ ಸಿಗದ ಹಿನ್ನೆಲೆಯಲ್ಲಿ ನೋಟಿಸ್ ನೀಡಲು ವಿಳಂಬವಾಗಿದೆ.



ಸುಜಾತಭಟ್

ಸುಜಾತಾ ಭಟ್‌ಗೆ ಪಶ್ಚಾತಾಪ: ಇನ್ನು ಅನನ್ಯಾ ಭಟ್ ಕೇಸಿನಲ್ಲಿ ತಾನು ತಪ್ಪು ಮಾಡಿದ್ದು ಈ ಬಗ್ಗೆ ಕ್ಷಮೆ ಕೇಳುತ್ತೇನೆ. ನನ್ನ 60 ವರ್ಷದ ಜೀವನದಲ್ಲಿ ಇದೊಂದು ನನಗೆ ಕಪ್ಪು ಚುಕ್ಕಿ, ಇನ್ನಾದರೂ ನನಗೆ ಉತ್ತಮ ಜೀವನ ನಡೆಸುವ ಆಸೆಯಿದೆ, ಧರ್ಮಸ್ಥಳಕ್ಕೆ ಹೋಗಿ ತಪ್ಪು ಕಾಣಿಕೆ ಹಾಕುತ್ತೇನೆ, ಧರ್ಮಸ್ಥಳಕ್ಕೆ ಹೋಗಿ ಕಲ್ಲು ಹೊಡೆಯುತ್ತೇನೆ ಎಂದು ಹೇಳಿದ್ದೇನೆ, ನನ್ನಿಂದ ತಪ್ಪಾಗಿದೆ, ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಕ್ಷಮೆ ಕೇಳುತ್ತೇನೆ ಎಂದಿದ್ದಾರೆ. ನಟನ ಸೋದರನಿಗೂ, ನನಗೂ ಯಾವುದೇ ಸಂಬಂಧವಿಲ್ಲ, ನಟನ ಸೋದರನ ಮನೆಯಲ್ಲಿ ವಾಸಂತಿ ಇರಬಹುದು ಎಂಬ ಶಂಕೆ ನನಗಿದೆ. ಅದನ್ನು ಎಸ್ ಐಟಿ ತನಿಖೆ ವೇಳೆ ಹೇಳಿದ್ದೆ, ಅವರು ತನಿಖೆ ಮಾಡಬಹುದು ಎಂದರು.

ಭಾಷೆ ಭಾವನೆಗಳ ವ್ಯಕ್ತಪಡಿಸಲು ಇರುವ ಮಾಧ್ಯಮ

ಕನ್ನಡ ಭಾಷಾ ಬೋಧನೆಯ ಹೊಸ ಸವಾಲುಗಳು, ಸಾಧ್ಯತೆಗಳು ಕಾರ್ಯಾಗಾರದಲ್ಲಿ ಹಿರೇಮಗಳೂರು ಕಣ್ಣನ್ ಅಭಿಮತ



ಮೈಸೂರಿನ ಕ್ರೈಸ್ಟ್ ಕಾಲೇಜಲ್ಲಿ ದಶಮಾನೋತ್ಸವ ಸಂಭ್ರಮಾಚರಣೆ ಪ್ರಯುಕ್ತ ರಾಷ್ಟ್ರಮಟ್ಟದ ಕಾರ್ಯಾಗಾರ ನಡೆಯಿತು.

ಮೈಸೂರು, ಅ.7–ಮೈಸೂರಿನ ಕ್ರೈಸ್ಟ್ ಕಾಲೇಜಿನಲ್ಲಿ ದಶಮಾನೋತ್ಸವ ಸಂಭ್ರಮಾಚರಣೆ ಪ್ರಯುಕ್ತ ಕಾಲೇಜಿನ ಭಾಷಾ ವಿಭಾಗವು 'ಕನ್ನಡ ಭಾಷಾ ಬೋಧನೆಯ ಹೊಸ ಸವಾಲುಗಳು ಮತ್ತು ಸಾಧ್ಯತೆಗಳು' ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ವಿದ್ವಾಂಸ ಹಾಗೂ ವಾಗ್ಮಿ ಹಿರೇಮಗಳೂರು ಕಣ್ಣನ್, ಭಾಷೆ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಮಾಧ್ಯಮ. ಹಾಗಾಗಿ ಪಠ್ಯ ವಿಷಯಗಳನ್ನು ಬೋಧಿಸುವ ಬೋಧಕರು ಭಾವನಾತ್ಮಕವಾಗಿ, ಸೃಜನಶೀಲತೆಯೊಂದಿಗೆ ವಿಷಯವನ್ನು ವಿದ್ಯಾರ್ಥಿಗಳ ಮನಸ್ಸಿಗೆ ಇಳಿಯುವಂತೆ ಬೋಧಿಸಬೇಕು. ಭಾಷಾ ಬೋಧನೆ ಮಾಡುವಾಗ ಜೀವನದ ಮಾನವೀಯ ಮೌಲ್ಯಗಳನ್ನು ತಿಳಿಸಬೇಕು ಹಾಗೂ ನಿರಂತರ ಅಧ್ಯಯನದಲ್ಲಿ ಅಧ್ಯಾಪಕರು ತೊಡಗಬೇಕು ಎಂದು ತಿಳಿಸಿದರು.

ಸಂಚಾಲಕ ವೇದರಾಜ್ ಕೂರಗಲ್ ಪ್ರಾಸ್ತಾವಿಕ ನುಡಿಗಳನ್ನಾಡಿ, ಕ್ರೈಸ್ಟ್ ಕಾಲೇಜು ಈ ಶೈಕ್ಷಣಿಕ ವರ್ಷದಲ್ಲಿ ದಶಮಾನೋತ್ಸವ ಸಂಭ್ರಮವನ್ನು ಆಚರಿಸುತ್ತಿದೆ. ಇದರ ಪ್ರಯುಕ್ತವಾಗಿ ಭಾಷಾ ವಿಭಾಗ ಈ ಕಾರ್ಯಾಗಾರವನ್ನು ಏರ್ಪಡಿಸಿದೆ. ಇತ್ತೀಚೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಕನ್ನಡವೆಂದರೆ ಮೂಗು ಮುರಿಯುವ ಪರಿಸ್ಥಿತಿ ಇರುವಾಗ ಕ್ರೈಸ್ಟ್ ಕಾಲೇಜು ಎಲ್ಲ ಭಾಷೆಗಳಿಗೂ ಸಮಾನವಾದ ಅವಕಾಶ ನೀಡುತ್ತಿದೆ. ಅದರಲ್ಲೂ ಕನ್ನಡ ಭಾಷೆಗೆ ವಿಶೇಷ ಅವಕಾಶಗಳನ್ನು ನೀಡುವ ಮೂಲಕ ಇಂತಹ ಕಾರ್ಯಕ್ರಮಗಳನ್ನು ರೂಪಿಸಲು ಪ್ರೋತ್ಸಾಹ ನೀಡುತ್ತಿದೆ ಎಂದು ಪ್ರಶಂಸಿಸಿದರು.

ಗೋಷ್ಠಿ–1ರ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಬೇಲೂರು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಹಿರಿಯ ಶ್ರೇಣಿ ಉಪನ್ಯಾಸಕಿ ನಾಗಶ್ರೀ ತ್ಯಾಗರಾಜ್ ಮಾತನಾಡಿ, ಬೋಧಕರಿಗೆ ತಂತ್ರಜ್ಞಾನದ ಕೊರತೆ, ತರಬೇತಿ ನಿರಂತರವಾಗಿ ಇಲ್ಲದಿರುವುದು, ಇಂದಿನ ವಿದ್ಯಾರ್ಥಿಗಳ ಮನಸ್ಸನ್ನು ತಮ್ಮ ಕಡೆಗೆ ಸೆಳೆಯಲು ಸಾಧ್ಯವಾಗದಿರುವುದು, ಸಾಮಾಜಿಕ ಮಾಧ್ಯಮಗಳ ಅರ್ಭಟ ಹೀಗೆ ಹಲವಾರು ಹೊಸ ಸವಾಲುಗಳನ್ನು ಎದುರಿಸುತ್ತಿದ್ದೇವೆ ಎಂದರು.

ಗೋಷ್ಠಿ–2ರ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮದರಾಸು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ರಂಗಸ್ವಾಮಿ, ಸರ್ಕಾರ ಮತ್ತು ಸಂಸ್ಥೆಗಳು ಬೋಧಕರಿಗೆ ನಿರಂತರ ತರಬೇತಿ ನೀಡುವ ಮೂಲಕ ಪ್ರಸ್ತುತ ಕಾಲಘಟ್ಟದ ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯಕ್ಕೆ ತಕ್ಕಂತೆ ಬೋಧಿಸಲು ಅನುವು ಮಾಡಿಕೊಡಬೇಕು. ಬೋಧಕರು ತಂತ್ರಜ್ಞಾನ ಬಳಸುವುದರ ಜೊತೆಗೆ ಸ್ಮಾರ್ಟ್ ತರಗತಿ ಕೊಠಡಿಗಳನ್ನು ಬಳಸಬೇಕು ಎಂದರು.

ಸಮಾರೋಪ ಸಮಾರಂಭದಲ್ಲಿ ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ಪಿ.ಸಿದ್ದಾಶ್ರಮ ಮಾತನಾಡಿ, ಬೋಧಕರು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳನ್ನು ಬೋಧಿಸುವಾಗ ಆಯಾ ಕಾಲಘಟ್ಟದ ವಾಸ್ತವ ಸ್ಥಿತಿಗತಿಗಳನ್ನು ವಿದ್ಯಾರ್ಥಿಗಳಿಗೆ ಅರ್ಥೈಸಬೇಕು. ಭಾಷಾ ಬೋಧಕರು ಸಾಹಿತ್ಯವನ್ನು ಬೋಧಿಸುವುದರಿಂದ ಪುಣ್ಯವಂತರು. ಕನ್ನಡ ಭಾಷೆಗೆ ಕ್ರೈಸ್ತ ಮಿಷನರಿಗಳು ಅಪಾರ ಕೊಡುಗೆ ನೀಡಿವೆ ಎಂದರು. ಕಾಲೇಜಿನ ಉಪಪ್ರಾಂಶುಪಾಲರಾದ ಫಾದರ್ ರೆಜೋ ಜೆಕಬ್, ಭಾಷಾ ವಿಭಾಗದ ಅಧ್ಯಾಪಕರಾದ ಲಕ್ಷ್ಮಿ, ರಂಜಿತಾ, ಸೌಬಿಯಾ, ವಿಜಯಾ, ಮಿಸ್ಬಾ ಪಹರಿನ್, ಅನಿನಾ ಹಾಗೂ ಅಧ್ಯಾಪಕ ವೃಂದ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕೆಮ್ಮಿನ ಸಿರಪ್‌ನಿಂದ ಮಕ್ಕಳ ಸಾವು: ಪಂಜಾಬ್, ಹಿಮಾಚಲದಲ್ಲಿ ಕೋಲ್ಡ್ರಿಫ್ ನಿಷೇಧ



ಚಂಡೀಗಢ: ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ 14 ಮಕ್ಕಳ ಸಾವಿಗೆ ಕಾರಣ ಎಂದು ಶಂಕಿಸಲಾದ ಕೋಲ್ಡ್ರಿಫ್ ಕೆಮ್ಮಿನ ಸಿರಪ್ ಮಾರಾಟ ಮತ್ತು ವಿತರಣೆಯನ್ನು ಇದೀಗ ಪಂಜಾಬ್ ಮತ್ತು ಹಿಮಾಚಲಪ್ರದೇಶದಲ್ಲೂ ನಿಷೇಧಿಸಲಾಗಿದೆ. ಪಂಜಾಬ್ ಆಹಾರ ಮತ್ತು ಔಷಧ ಆಡಳಿತ ಹೊರಡಿಸಿದ ಆದೇಶದಲ್ಲಿ, ಕೋಲ್ಡ್ರಿಫ್ ಸಿರಪ್ ಅನ್ನು ಸರ್ಕಾರಿ ವಿಶ್ಲೇಷಕರು, ಔಷಧ ಪರೀಕ್ಷಾ ಪ್ರಯೋಗಾಲಯ ಮತ್ತು ಮಧ್ಯಪ್ರದೇಶದ ಎಫ್‌ಡಿಎ ಗುಣಮಟ್ಟದ್ದಾಗಿಲ್ಲ ಎಂದು ಘೋಷಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ಔಷಧಿಯಲ್ಲಿ ಕಲಬೆರಕೆಯಾಗಿದೆ ಎಂದು ವರದಿಯಾಗಿದೆ. ಏಕೆಂದರೆ ಇದು ಡೈಥಿಲೀನ್ ಗ್ಲೈಕಾಲ್ (ಶೇ.46.28 w/v) ಅನ್ನು ಹೊಂದಿದೆ. ಇದು ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಹೀಗಾಗಿ ಈ ಉತ್ಪನ್ನವನ್ನು ಸಾರ್ವಜನಿಕ ಹಿತಾಸಕ್ತಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಪಂಜಾಬ್ ರಾಜ್ಯದಲ್ಲಿ ಮಾರಾಟ, ವಿತರಣೆ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ತಿಳಿಸಿದೆ.

ಲೇಖನಗಳ ಆಹ್ವಾನ

ಮೈಸೂರು, ಅ7–ಹಿರಿಯ ಸಾಹಿತಿಗಳ ಬರಹದ ಹಿನ್ನೋಟ, ಸದ್ಯ ಬರೆಯುತ್ತಿರುವ–ಪ್ರಕಟಿಸುತ್ತಿರುವ ಮಹಿಳೆಯರು, ಯುವಜನರ ಅನುಭವ, ಅನಿಸಿಕೆ ದಾಖಲು ಮಾಡಲು ರಾಜ್ಯಮಟ್ಟದ ಈ ತಲೆಮಾರಿನ ಕವಿಗಳು, ನಾಟಕಕಾರರು, ಲೇಖಕರ ಬರಹದ ಹೆಜ್ಜೆಗಳನ್ನು ಒಂದೆಡೆ ದಾಖಲಿಸಲು ಅಭಿರುಚಿ ಬಳಗ ನಾನೇಕೆ ಬರೆಯುತ್ತೇನೆ? ವಿಷಯದ ಬಗ್ಗೆ ಒಂದೆರಡು ಪುಟಗಳಲ್ಲಿ ಲೇಖನ ಬರೆದು ಅ.14ರೊಳಗೆ ಕಳಿಸಬೇಕೆಂದು ಬಳಗದ ಅಧ್ಯಕ್ಷ ಎನ್.ವಿ. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಮೊ: 98455 65238.

ದೇಶ – ವಿದೇಶ

ಬಟ್ಟೆ ಒಗೆಯಲು ಹೋಗಿದ್ದ ಮಹಿಳೆ ಎಳೆದೊಯ್ದ ಮೊಸಳೆ



ಬಿಂಜಾರ್ಪುರ: ಒಡಿಶಾದ ಜಾಜ್ಪುರ ಜಿಲ್ಲೆಯ ಬಾರಿ ಬ್ಲಾಕ್‌ನ ಬೋಡುವಾ ಪಂಚಾಯತ್‌ನ ಕಾಂಟಿಯಾ ಗ್ರಾಮದ ಬಳಿ ಖರಸ್ರೋಟ ನದಿಗೆ ಬಟ್ಟೆ ಒಗೆಯಲು ಹೋಗಿದ್ದ ಮಹಿಳೆಯೊಬ್ಬರನ್ನು ಮೊಸಳೆ ಎಳೆದೊಯ್ದ ಘಟನೆ ನಡೆದಿದೆ. ಮೃತಳನ್ನು ಕಾಂಟಿಯಾ ಗ್ರಾಮದ ಸುಕ್ದೇವ್ ಮಹಾಲಾ ಅವರ ಪತ್ನಿ 55 ವರ್ಷದ ಸೌದಾಮಿನಿ ಮಹಾಲಾ ಎಂದು ಗುರುತಿಸಲಾಗಿದೆ. ಸ್ಥಳೀಯರ ಪ್ರಕಾರ, ನದಿ ದಂಡೆಯಲ್ಲಿದ್ದ ಮೊಸಳೆ ಇದ್ದಕ್ಕಿದ್ದಂತೆ ಆಕೆ ಮೇಲೆ ಹಾರಿ ನೀರಿನೊಳಕ್ಕೆ ಎಳೆದೊಯ್ದಿದೆ. ಆಕೆಯ ಕಿರುಚಾಟ ಕೇಳಿ ಸ್ಥಳಕ್ಕೆ ಗ್ರಾಮಸ್ಥರು ಧಾವಿಸಿದ್ದರು. ಅಷ್ಟರಲ್ಲಾಗಲೇ ಮೊಸಳೆ ಆಕೆಯನ್ನು ನದಿಯೊಳಗೆ ಎಳೆದೊಯ್ದಿತ್ತು. ಇದನ್ನು ವ್ಯಕ್ತಿಯೊಬ್ಬರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಶೋಧ ಕಾರ್ಯಾಚರಣೆ ಆರಂಭಿಸಿದರು. ಆದರೆ ಮಹಿಳೆ ಮೃತದೇಹ ಪತ್ತೆಯಾಗಲಿಲ್ಲ. ಬಿಂಜಾರ್ಪುರ ಮತ್ತು ಬರಿ ಪ್ರದೇಶಗಳಲ್ಲಿ ನದಿಯ ಎರಡೂ ದಡಗಳಲ್ಲಿರುವ ನಿವಾಸಿಗಳು ಭಯದಿಂದ ಬದುಕುತ್ತಿದ್ದಾರೆ. ತಿಂಗಳ ಹಿಂದೆ ಮೊಸಳೆಯೊಂದು ಅದೇ ನದಿ ದಂಡೆಯಲ್ಲಿ ಹಸು ಎಳೆದೊಯ್ದಿತ್ತು.

ಭೌತಶಾಸ್ತ್ರ ವಿಭಾಗದಲ್ಲಿ ಮೂವರು ವಿಜ್ಞಾನಿಗಳಿಗೆ ನೊಬೆಲ್ ಪ್ರಶಸ್ತಿ



ಸ್ಟಾಕ್‌ಹೋಮ್: ಭೌತಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ ಘೋಷಣೆಯಾಗಿದ್ದು, ಜಾನ್ ಕ್ಲಾರ್ಕ್, ಮೈಕೆಲ್ ಎಚ್. ಡೆವೊರೆಟ್ ಮತ್ತು ಜಾನ್ ಎಂ. ಮಾರ್ಟಿನಿಸ್ ಎಂಬ ಮೂವರು ವಿಜ್ಞಾನಿಗಳು ಪ್ರಶಸ್ತಿಗೆ ಅರ್ಹರಾಗಿದ್ದಾರೆ. ನೊಬೆಲ್ ಪ್ರಶಸ್ತಿಯ ಸ್ಥಾಪಕ ಆಲ್ಫ್ರೆಡ್ ನೊಬೆಲ್ ಅವರ ಪುಣ್ಯತಿಥಿಯಾದ ಡಿ.10ರಂದು ಪ್ರಶಸ್ತಿ ವಿತರಣಾ ಸಮಾರಂಭ ನಡೆಯಲಿದೆ. ಕಳೆದ ವರ್ಷ ಜಾನ್ ಹಾಪ್‌ಫೀಲ್ಡ್ ಮತ್ತು ಜೆಫ್ರಿ ಹಿಂಟರ್ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಜಯಿಸಿದ್ದರು. ರೋಗನಿರೋಧಕ ಶಕ್ತಿ ಹೆಚ್ಚಳಕ್ಕೆ ಸಂಬಂಧಿಸಿದ ಸಂಶೋಧನೆಗಾಗಿ ವಿಜ್ಞಾನಿಗಳಾದ ಅಮೆರಿಕದ ಮೇರಿ ಈ.ಬ್ರಂಕೊ, ಫ್ರೆಡ್ ರಾಮ್ಸ್‌ಡೆಲ್ ಹಾಗೂ ಜಪಾನ್‌ನ ಶಿಮೋನ್ ಸಕಾಗುಚಿ ಅವರು 2025ನೇ ಸಾಲಿನ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಬುಧವಾರ ರಸಾಯನಶಾಸ್ತ್ರ ಹಾಗೂ ಗುರುವಾರ ಸಾಹಿತ್ಯ ವಿಭಾಗದ ಪ್ರಶಸ್ತಿಗಳ ಘೋಷಣೆಯಾಗಲಿದೆ. ಶುಕ್ರವಾರದಂದು ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾಗಲಿದೆ. ಅ.13ರಂದು ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ಪ್ರಕಟವಾಗಲಿದೆ.

60 ಕೋಟಿ ವಂಚನೆ: ವಿಚಾರಣೆ ಎದುರಿಸಿದ ಶಿಲ್ಪಾಶೆಟ್ಟಿ, ರಾಜ್ ದಂಪತಿ



ಮುಂಬೈ: 60 ಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಹಾಗೂ ಅವರ ಪತಿ ರಾಜ್ ಕುಂದ್ರಾ ಅವರು ಮುಂಬೈ ಪೊಲೀಸ್‌ನ ಆರ್ಥಿಕ ಅಪರಾಧಗಳ ಘಟಕದ ಎದುರು ವಿಚಾರಣೆಗೆ ಹಾಜರಾಗಿದ್ದಾರೆ. ಪ್ರಕರಣ ಸಂಬಂಧ ಶಿಲ್ಪಾ ಶೆಟ್ಟಿ, ರಾಜ್ ಕುಂದ್ರಾ ಸೇರಿದಂತೆ ಐವರನ್ನು ಸುಮಾರು ನಾಲ್ಕೂವರೆ ಗಂಟೆಗಳ ಕಾಲ ವಿಚಾರಣೆ ನಡೆಸಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಕರಣ ಸಂಬಂಧ ಸೆ.5ರಂದು ಮುಂಬೈ ಪೊಲೀಸರು ಶಿಲ್ಪಾ ಶೆಟ್ಟಿ ಅವರಿಗೆ ಲುಕ್‌ಔಟ್ ನೋಟಿಸ್ ನೀಡಿದ್ದರು. ಶಿಲ್ಪಾ ಮತ್ತು ರಾಜ್ ದಂಪತಿ ಆಗಾಗ್ಗೆ ಅಂತರರಾಷ್ಟ್ರೀಯ ಪ್ರವಾಸ ಮಾಡುತ್ತಿದ್ದರಿಂದ ನಗರ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗವು ನೋಟಿಸ್ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಸಾಲ ಮತ್ತು ಹೂಡಿಕೆ ಒಪ್ಪಂದದಲ್ಲಿ ಉದ್ಯಮಿಯೊಬ್ಬರಿಗೆ 60 ಕೋಟಿ ವಂಚಿಸಿದ್ದಾರೆ ಎಂಬ ಆರೋಪದ ಮೇಲೆ ಜುಹು ಠಾಣೆಯಲ್ಲಿ ದಂಪತಿ ವಿರುದ್ಧ ಆಗಸ್ಟ್ 14ರಂದು ಪ್ರಕರಣ ದಾಖಲಾಗಿತ್ತು.

ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಭೀಕರ ಬಾಂಬ್ ದಾಳಿ



ಇಸ್ಲಾಮಾಬಾದ್: ಪಾಕಿಸ್ತಾನದ ಜಾಫರ್ ಎಕ್ಸ್‌ಪ್ರೆಸ್‌ನಲ್ಲಿ ಮತ್ತೊಮ್ಮೆ ಭೀಕರ ಸ್ಫೋಟ ಸಂಭವಿಸಿದೆ ಬಲೂಚಿಸ್ತಾನ್ ಪ್ರಾಂತ್ಯದ ಸಮೀಪದ ಸುಲ್ತಾನ್‌ಕೋಟ್ ಪ್ರದೇಶದಲ್ಲಿ ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಹಳಿಗಳ ಮೇಲೆ ಅಳವಡಿಸಿದ್ದ ಸ್ಫೋಟಕ ಸಾಧನ ಸ್ಫೋಟಿಸಿ, ಕ್ವೆಟ್ಟಾದಿಂದ ಪೇಶಾವರ್‌ಗೆ ಹೊರಟಿದ್ದ ರೈಲಿನ ಮೇಲೆ ದಾಳಿ ಮಾಡಲಾಗಿದೆ. ಇದರಿಂದ ರೈಲಿನ ಹಲವು ಬೋಗಿಗಳು ಹಳಿತಪ್ಪಿ ದೊಡ್ಡ ದುರಂತ ಸಂಭವಿಸಿದೆ. ಬಲೂಚ್ ಬಂಡುಕೋರ ಗುಂಪು, ಬಲೂಚ್ ರಿಪಬ್ಲಿಕ್ ಗಾರ್ಡ್ಸ್, ದಾಳಿಯ ಹೊಣೆಯನ್ನು ಹೊತ್ತುಕೊಂಡಿದ್ದು, ಪಾಕಿಸ್ತಾನಿ ಸೇನೆಯ ಸಿಬ್ಬಂದಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದರಿಂದ ಇದನ್ನು ಗುರಿಯಾಗಿಸಲಾಗಿತ್ತು. ಸ್ಫೋಟದಿಂದ ಹಲವು ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿವೆ. ಸದ್ಯ ಯಾವುದೇ ಸಾವಿನ ವರದಿಗಳ ಬಗ್ಗೆ ಮಾಹಿತಿ ಬಂದಿಲ್ಲ. ರಕ್ಷಣಾ ತಂಡಗಳು ಮತ್ತು ಭದ್ರತಾ ಪಡೆಗಳು ಕಾರ್ಯಾಚರಣೆ ಆರಂಭಿಸಿವೆ. ವೈದ್ಯಕೀಯ ಸಿಬ್ಬಂದಿ ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಬಲೂಚಿಸ್ತಾನ್ ರಿಪಬ್ಲಿಕನ್ ಗಾರ್ಡ್ಸ್ ಸಂಘಟನೆ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳ ಸಾವು ಪ್ರಕರಣ: ಸುಪ್ರೀಂಗೆ ಪಿಐಎಲ್ ಸಲ್ಲಿಕೆ



ನವದೆಹಲಿ: ಮಧ್ಯಪ್ರದೇಶದಲ್ಲಿ ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಸುಪ್ರೀಂಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ಪಿಐಎಲ್‌ನಲ್ಲಿ, ಕಲುಷಿತ ಕೆಮ್ಮಿನ ಸಿರಪ್ ತಯಾರಿಕೆ, ಪರೀಕ್ಷೆ ಮತ್ತು ವಿತರಣೆಯ ಬಗ್ಗೆ ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕೆಂದು ಎಂದು ಒತ್ತಾಯಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯಪ್ರದೇಶದಲ್ಲಿ ಡಾ.ಪ್ರವೀಣ್ ಸೋನಿ ಅವರನ್ನು ಬಂಧಿಸಲಾಗಿದೆ. ಕೆಮ್ಮಿನ ಸಿರಪ್ ತಯಾರಿಸಿದ ಕಂಪನಿಯ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಾರೆ ಮತ್ತು ಔಷಧ ನಿಯಂತ್ರಕರನ್ನು ವರ್ಗಾಯಿಸಿದ್ದಾರೆ. ತನಿಖೆಗಾಗಿ ಪೊಲೀಸರು 12 ಸದಸ್ಯರ ವಿಶೇಷ ತನಿಖಾ ತಂಡ ರಚಿಸಿದೆ. ಔಷಧ ನಿರೀಕ್ಷಕ ಚಿಂದ್ವಾರ ಗೌರವ್ ಶರ್ಮಾ, ಔಷಧ ನಿರೀಕ್ಷಕ ಜಬಲ್ಪುರ ಶರದ್ ಕುಮಾರ್ ಜೈನ್, ಆಹಾರ ಮತ್ತು ಔಷಧ ಆಡಳಿತದ ಉಪ ನಿರ್ದೇಶಕ ಶೋಭಿತ್ ಕೋಸ್ಟಾ ಅವರನ್ನು ಅಮಾನತುಗೊಳಿಸಲಾಗಿದೆ. ಐಎಎಸ್ ಅಧಿಕಾರಿ ಔಷಧ ನಿಯಂತ್ರಕ ದಿನೇಶ್ ಮೌರ್ಯ ಅವರನ್ನು ಬೇರೆಡೆಗೆ ವರ್ಗಾಯಿಸಲಾಗಿದೆ

ಚೆಲುವನ ಭಕ್ತರಿಗೆ ಕಸದ ದರ್ಶನ!





ದೇವಸ್ಥಾನ ಮುಂದೆ ಮತ್ತು ಪಕ್ಕದಲ್ಲಿ ಕಸದ ರಾಶಿ ಮತ್ತು ಭಕ್ತರು ಎಸೆದು ಹೋದ ನೀರಿನ ಬಾಟಲಿಗಳು.

ಮೇಲುಕೋಟೆ: ಚೆಲುವನ ದರ್ಶನಕ್ಕೆ ಬರುವ ಭಕ್ತರಿಗೆ ಗಬ್ಬೆದ್ದು ನಾರುತ್ತಿರುವ ಕಸಗಳ ದರ್ಶನ. ಬಸ್ ಇಳಿದ ಕೂಡಲೇ ಭಕ್ತಾದಿಗಳನ್ನು ತೋರಣದಂತೆ ಸ್ವಾಗತಿಸುವ ರಸ್ತೆಯ ಎರಡೂ ಬದಿಯ ಕಸದ ರಾಶಿ. ಭಕ್ತಿಯಿಂದ ಕೈ ಮುಗಿದುಕೊಂಡು ಹೋಗೋಣವೆಂದರೆ ಇಲ್ಲ ಮೂಗು ಮುಚ್ಚಿಕೊಂಡು ಹೋಗಿ ಎಂದು ದುರ್ವಾಸನೆ ಮೂಗಿಗೆ ಬೀರುತ್ತಿರುವ ದುರ್ನಾತ. ಸಾಕಪ್ಪಾ ಸಾಕು ಇದು ಮೇಲುಕೋಟೆ ಅಲ್ಲ ಕಸದ ರಾಶಿಯ ಕೋಟೆ ಎಂದು ಶಪಿಸುತ್ತಿರುವ ಭಕ್ತವೃಂದ.

ಇದು ಐತಿಹಾಸಿಕ ತಾಣವೆನಿಸಿರುವ ಮೇಲುಕೋಟೆಯ ದಿವ್ಯದರ್ಶನ. ಆದರೆ ಈ ದರ್ಶನ ಮಾತ್ರ ಅಲ್ಲಿನ ಆಡಳಿತ ಮಂಡಲಿಗಾಗಲೀ ಪಂಚಾಯಿತಿಗಾಗಲೀ ಕಾಣುವುದೇ ಇಲ್ಲ ಯಾಕಪ್ಪಾ ಅಂದ್ರೆ ಅವರಿಗೆ ಇದು ನಮ್ಮ ಊರು ಊರನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂಬ ಪರಿಕಲ್ಪನೆಯೇ ಇಲ್ಲವಲ್ಲ.

ಮೇಲುಕೋಟೆ ಪ್ರಖ್ಯಾತ ಪ್ರವಾಸಿ ತಾಣವಾಗಿದ್ದರೂ ಈವರೆಗೆ ಸ್ವಚ್ಛತೆಯ ಕಡೆಗೆ ಅಧಿಕಾರಿಗಳು ನಿಗಾನೇ ವಹಿಸಿಲ್ಲ ಬೀದಿಬೀದಿಗಳ ಚರಂಡಿಗಳು ಗಬ್ಬೆದ್ದು ನಾರುತ್ತಿದ್ದು, ಕಸದರಾಶಿ ಪ್ರತಿಬೀದಿಗಳಲ್ಲೂ ಚೆಲ್ಲಾಡುತ್ತಿವೆ. ಪ್ರಮುಖ ಬೀದಿಗಳಲ್ಲಿ ಗಿಡ ಗಂಟಿಗಳು ಹೇರಳವಾಗಿ ಬೆಳೆದಿದ್ದು ಸೊಳ್ಳೆ, ಹಾವು ಚೇಳುಗಳ ಆವಾಸ ಸ್ಥಾನವಾಗಿದೆ. ಇವುಗಳ ಹಾವಳಿಯಿಂದ ಸಾಂಕ್ರಾಮಿಕ ರೋಗಗಳು ಹರಡುತ್ತಿವೆ ಚೆಲುವ ನಾರಾಯಣಸ್ವಾಮಿ ಮತ್ತು ಯೋಗಾನರ ಸಿಂಹಸ್ವಾಮಿ ದೇವಾಲಯ ಸ್ಮಾರಕಗಳ ಬಳಿ ಭಕ್ತರು ಬಿಸಾಡಿ ಹೋದ ತ್ಯಾಜ್ಯಗಳು ಹೇರಳವಾಗಿ ಬಿದ್ದು ಚೆಲ್ಲಾಡುತ್ತಿವೆ ಅಷ್ಟೇ ಏಕೆ ಗ್ರಾಪಂಗೆ ಹೋಗುವ ದಾರಿಯಲ್ಲೇ ಕಸದ ರಾಶಿ ರಸ್ತೆಯಲ್ಲಿ ಚೆಲ್ಲಾಡಿವೆ. ಪಂಚಾಯಿತಿ ಪಿಡಿಒ ಕನಿಷ್ಟ ಸ್ವಚ್ಛತೆಗೆ ಸಮರ್ಪಕ ವ್ಯವಸ್ಥೆ ಮಾಡದಿರುವುದೇ ಇಂತಹ ಅವ್ಯವಸ್ಥೆಗೆ ಕಾರಣವಾಗಿದೆ ಎಂಬ ಆರೋಪ ಊರಿನ ನಾಗರಿಕರದು.

ಕ್ಷೇತ್ರಕ್ಕೆ ಬರುವ ಭಕ್ತರ ವಾಹನಗಳಿಂದ ಶುಲ್ಕ ಪಡೆಯುವ ಗ್ರಾಪಂ ವಾರ್ಷಿಕ ಲಕ್ಷಾಂತರ ಆದಾಯ ಗಳಿಸುತ್ತಿದ್ದರೂ ಸ್ವಚ್ಛತೆಯ ಕಡೆ ಗಮನಹರಿಸದಿ ರುವುದು ದುರದೃಷ್ಟಕರ ಬೆಳವಣಿಗೆ ಎಂದು ನಾಗರೀಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ

ಕಡಿಮೆ ಕೂಲಿ ನೀಡಿ ಹೆಚ್ಚು ಕೆಲಸ ಮಾಡಿಸುತ್ತಾರೆ. ಸೇವಾಭದ್ರತೆ ನೀಡುವಂತೆ ಮನವಿ ಮಾಡಿದರೂ ಸೂಕ್ತ ಪ್ರತಿಕ್ರಿಯೆ ಸಿಕ್ಕಿಲ್ಲ ಬೇರೆ ಪಂಚಾಯಿತಿಯ ನೌಕರರಿಗೆ ಹೆಚ್ಚು ಕೂಲಿ ನೀಡಿ ಕೆಲಸಮಾಡಿಸಿ ನಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ ಅದಕ್ಕೆ ನಾವು ಕೆಲಸಮಾಡುತ್ತಿಲ್ಲ ಎಂದು ಹೆಸರೇಳಲಿಚ್ಛಿಸದ ಹಂಗಾಮಿ ಪೌರಕಾರ್ಮಿಕ 'ಮೈಸೂರು ಮಿತ್ರ'ನ ಬಳಿ ಆರೋಪಿಸಿದರು. ಈ ಬಗ್ಗೆ ಪಿಡಿಓ ರಾಜೇಶ್ವರ್‌ರನ್ನು ಸಂಪರ್ಕಿಸಿದಾಗ ಜನಸಂಖ್ಯೆಗೆ ಅನುಗುಣವಾಗಿ ಒಬ್ಬ ಪೌರ ಕಾರ್ಮಿಕನನ್ನು ಮಾತ್ರ ನೇಮಕ ಮಾಡಿದ್ದಾರೆ. ಇದೀಗ ಅವರಿಗೂ ಶಕ್ತಿಯಿಲ್ಲದೆ ಕೆಲಸ ಮಾಡಲು ಆಗುತ್ತಿಲ್ಲ. ಮನರೇಗ ಯೋಜನೆಯಡಿ ಕೂಲಿ ನೀಡಿ ಏಳು ಮಂದಿಯನ್ನು ನೇಮಕ ಮಾಡಿಕೊಂಡಿದ್ದೆವು ಆದರೆ ಅವರು ಸಮರ್ಪಕವಾಗಿ ಸ್ವಚ್ಛತೆ ನಿರ್ವಹಿಸುತ್ತಿರಲಿಲ್ಲ ಪದೇ ಪದೇ ಕೆಲಸಕ್ಕೆ ಬೇಕೆಂತಲೇ ಗೈರು ಹಾಜರಾಗಿ ಕೆಟ್ಟ ಹೆಸರು ತರುತ್ತಿದ್ದಾರೆ ಹೊರಗಡೆಯಿಂದ ಪೌರಕಾರ್ಮಿಕರನ್ನು ಕರೆಸಿ ಸ್ವಚ್ಛಮಾಡಿಸುತ್ತೇನೆ ದೇವಾಲಯದಲ್ಲೂ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಹೇಳುತ್ತೇನೆ ಎಂದರು. ಆದರೆ ಪಂಚಾಯಿತಿ ಮತ್ತು ನೌಕರರ ನಡುವಿನ ಜಗಳದಿಂದ ಹೈರಣವಾಗುತ್ತಿರುವವರು ಮಾತ್ರ ಪ್ರವಾಸಿಗರು, ಭಕ್ತಾದಿಗಳು.

ಅಭಿವೃದ್ಧಿ ಸಹಿಸಲಾಗದೆ ನನ್ನ ವಿರುದ್ಧ ಕುಮ್ಮಕ್ಕು

ವಿಪಕ್ಷಗಳ ವಿರುದ್ಧ ಮದ್ದೂರು ಶಾಸಕ ಉದಯ್ ಆಕ್ರೋಶ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಉದಯ್ ಭೂಮಿ ಪೂಜೆ ನೆರವೇರಿಸಿದರು

ಮದ್ದೂರು, ಅ.7–ಕ್ಷೇತ್ರದಲ್ಲಿ ಕ್ಷಿಪ್ರವಾಗಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯ ಸಹಿಸದೆ ವಿಪಕ್ಷದ ನಾಯಕರು ಪ್ರತಿಭಟನೆಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಶಾಸಕ ಕೆ.ಎಂ.ಉದಯ್ ಆರೋಪಿಸಿದರು.

ತಾಲೂಕಿನ ಹೆಮ್ಮನಹಳ್ಳಿ, ಬೆಸಗರಹಳ್ಳಿ ಗ್ರಾಮಗಳಲ್ಲಿ ಪರಿಶಿಷ್ಟ ಸ್ಮಶಾನಗಳ ಅಭಿವೃದ್ಧಿ ಹಾಗೂ ಚಾಮನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಭೂಮಿ ಪೂಜೆ ನೆರವೇರಿಸಿ, ನಾನು ಶಾಸಕನಾದ ಕೇವಲ 2 ವರ್ಷಗಳಲ್ಲಿ ಹಿಂದೆಂದೂ ಕಾಣದಷ್ಟು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುತ್ತಿದೆ. ಕ್ಷೇತ್ರ ಅಭಿವೃದ್ಧಿ ವಿಷಯದಲ್ಲಿ 25 ವರ್ಷದಷ್ಟು ಹಿಂದೆ ಉಳಿದಿದೆ. ಅದನ್ನು ಮನಗಂಡು ಸರ್ಕಾರದಿಂದ ವಿಶೇಷ ಅನುದಾನ ತಂದು ಸಮಗ್ರ ಅಭಿವೃದ್ಧಿ ಮಾಡುತ್ತಿದ್ದೇನೆ ಎಂಬ ಅಸೂಯೆಯಿಂದ ವಿರೋಧ ಪಕ್ಷಗಳು ಗೊಂದಲಗಳನ್ನು ಸೃಷ್ಟಿಸುತ್ತಿವೆ ಎಂದು ಆಪಾದಿಸಿದರು.

ಮದ್ದೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸೋಮನಹಳ್ಳಿ, ಚಾಮನಹಳ್ಳಿ, ಗೆಜ್ಜಲಗೆರೆ ಹಾಗೂ ಗೊರವನಹಳ್ಳಿ ಗ್ರಾಪಂ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅನಂತರವೇ ಮದ್ದೂರು ಪುರಸಭೆಯನ್ನು, ರಾಜ್ಯ ಸರ್ಕಾರ ಮೇಲ್ದರ್ಜೆಗೇರಿಸಿ ಅಧಿಸೂಚನೆ ಹೊರಡಿಸಿದೆ. ಇದರಲ್ಲಿ ಬಲವಂತದ ಪ್ರಕ್ರಿಯೆ ಏನೂ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ನಗರಸಭೆ ಮಾಡುವಂತೆ ಹಲವಾರು ಶಾಸಕರು ಪ್ರಸ್ತಾವನೆ ಸಲ್ಲಿಸಿದ್ದರೂ ರಾಜ್ಯದಲ್ಲಿ 2 ತಾಲೂಕುಗಳನ್ನು ಮಾತ್ರ ನಗರಸಭೆಯನ್ನಾಗಿ ಮಾಡಲು ಅನುಮತಿ ನೀಡಿದೆ. ಇದಕ್ಕೆ ನಾನು ಸಾಕಷ್ಟು ಶ್ರಮ ಹಾಕಿದ್ದೇನೆ. ನಗರಸಭೆಯಾದರೆ ಹೆಚ್ಚಿನ ಅನುದಾನ ಬಂದು ಅಭಿವೃದ್ಧಿಯಾಗುತ್ತದೆ ಎಂಬ ಉದ್ದೇಶದಿಂದ ಈ ಕ್ರಮ ಕೈಗೊಂಡಿದ್ದೇನೆ ಎಂದರು.

ನನಗೆ ಕ್ಷೇತ್ರದ ಅಭಿವೃದ್ಧಿಯಷ್ಟೆ ಮುಖ್ಯ ಯಾರು ವಿರೋಧ ಮಾಡಿದರೂ ನಮ್ಮ ಕೆಲಸ ನಿರಂತರವಾಗಿ ನಡೆಯಲಿದೆ. ಈಗಾಗಲೇ ನಗರಸಭೆ ವ್ಯಾಪ್ತಿಯ ಅಭಿವೃದ್ಧಿಗೆ ರೂಪುರೇಷೆ ಸಿದ್ಧವಾಗಿದ್ದು, ವಿವಿಧ ಇಲಾಖೆಗಳ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ತಂದು ತಾಲೂಕನ್ನು ಸಮಗ್ರ ಅಭಿವೃದ್ಧಿ ಮಾಡಲು ರೂಪುರೇಷೆ ಮಾಡಿದ್ದೇನೆ ಎಂದರು.

ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ಮೋಹನ್‌ಕುಮಾರ್, ಗ್ರಾಪಂ ಸದಸ್ಯರಾದ ಅನಂತು, ಮೂರ್ತಿ, ಪ್ರಸನ್ನ, ಮುರುಳಿಧರ, ಗುತ್ತಿಗೆದಾರ ಶರತ್, ಧನಂಜಯ, ಮಂಜುನಾಥ್, ಅಡ್ಡರಸ್ತೆಗೋಪಿ, ಸತ್ಯಪ್ಪ, ವಸಂತರಾಜ್, ಅಶೋಕ್ ಇದ್ದರು.

ಉತ್ತಮ ಸಮಾಜಕ್ಕಾಗಿ ಎಲ್ಲರೂ ಕೈ ಜೋಡಿಸಿ



ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಅ.7–ರಾಮಾಯಣದಲ್ಲಿ ಬರುವ ಒಳ್ಳೆಯ ಸಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಿಸಲು ನಾವೆಲ್ಲರೂ ಕೈಜೋಡಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಪಟ್ಟಣದ ಶತಮಾನದ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಅಧ್ಯಕ್ಷತೆ ವಹಿಸಿದ್ದ ಅವರು, ಪ್ರತಿಯೊಬ್ಬರೂ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳನ್ನು ಓದುವ ಮೂಲಕ ಎರಡೂ ಮಹಾಕಾವ್ಯಗಳಲ್ಲಿ ಒಳ್ಳೆಯ ಸಾರವನ್ನು ಬದುಕಿನಲ್ಲಿ ಅಳವಡಿಸಿಕೊಂಡು ತಾವೂ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುವ ಜೊತೆಗೆ ಉತ್ತಮ ಸಮಾಜವನ್ನು ನಿರ್ಮಿಸಬಹುದು ಎಂದರು.

ಪ್ರಾಧ್ಯಾಪಕ ಡಾ.ಜಿ.ಎಸ್.ಪ್ರೇಮಕುಮಾರ್ ಪ್ರಧಾನ ಉಪನ್ಯಾಸ ಮಾಡಿದರು. ಪುರಸಭಾ ಅಧ್ಯಕ್ಷೆ ಪಂಕಜಾ ಪ್ರಕಾಶ್ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಜಿಲ್ಲಾ ದಿಶಾ ಸಮಿತಿ ಸದಸ್ಯ ನರಸನಾಯಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಉಪಾಧ್ಯಕ್ಷೆ ಸೌಭಾಗ್ಯ ಉಮೇಶ್, ಸದಸ್ಯರಾದ ಡಿ.ಪ್ರೇಮಕುಮಾರ್, ನಟರಾಜ್, ಮಹಾದೇವಿ ನಂಜುಂಡ, ಅಕ್ಕಿಹೆಬ್ಬಾಳು ಎ.ಆರ್.ರಘು, ಜಿಲ್ಲಾ ನಾಯಕ ಸಂಘದ ಅಧ್ಯಕ್ಷ ಆರ್.ಜಗದೀಶ್, ಜಿ.ಪಿ.ರಾಜು, ಕೆ.ಎಸ್.ರಾಜು, ಜಿ.ಪಂ.ಮಾಜಿ ಉಪಾಧ್ಯಕ್ಷೆ ಗಾಯಿತ್ರಿ ರೇವಣ್ಣ, ರಾಮದಾಸ್ ಇದ್ದರು.

ರಾಮಾಯಣ ಆದರ್ಶಪ್ರಾಯ ಸಮಾಜದ ಪ್ರತಿಬಿಂಬ



ತಾಲೂಕು ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ಪಾಂಡವಪುರ, ಅ.7– ಮಹರ್ಷಿ ವಾಲ್ಮೀಕಿ ಬರೆದಿರುವ ರಾಮಾಯಣ ಕೃತಿಯೂ ಆದರ್ಶಪ್ರಾಯ ಸಮಾಜದ ಪ್ರತಿ ಬಿಂಬವಾಗಿದೆ ಎಂದು ತಹಸೀಲ್ದಾರ್ ಬಸವರೆಡ್ಡಪ್ಪರೋಣದ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿಯ ಅಧ್ಯಕ್ಷತೆ ವಹಿಸಿದ್ದ ಅವರು, ಒಬ್ಬ ಬೇಡನಾಗಿದ್ದ ವಾಲ್ಮೀಕಿ ಮನ ಪರಿವರ್ತನೆಗೊಂಡು ತಪಸ್ವಿಯಾಗಿ ನಂತರ ಕವಿಯಾದರು. ಅವರು ರಚಿಸಿದ ಕೃತಿಯಲ್ಲಿ ಅವರೇ ಪಾತ್ರಧಾರಿಯಾದ ಮೊದಲ ಕವಿ ಇವರು. ವಾಲ್ಮೀಕಿ ರಚಿಸಿದ ರಾಮಾಯಣ ಕೃತಿಯೂ ಸಮಾಜಕ್ಕೆ ಮಾದರಿಯಾಗಿದೆ. ಇವರು ಕೇವಲ ವಾಲ್ಮೀಕಿ ಜನಾಂಗಕ್ಕೆ ಮಾತ್ರ ಸೀಮಿತವಾದವರಲ್ಲ ಸಮಾಜದ ಆಸ್ತಿಯಾಗಿದ್ದಾರೆ ಎಂದು ಬಣ್ಣಿಸಿದರು.

ತಾಪಂ ಇಓ ವೀಣಾ ಮಾತನಾಡಿ, ದೇಶದ ಶ್ರೇಷ್ಠ ಕೃತಿಯಾದ ರಾಮಾಯಣ ರಚಿಸಿ ವಾಲ್ಮೀಕಿ ಮಹರ್ಷಿಗಳು ಕವಿಗಳಾಗಿದ್ದಾರೆ. ಸಮಾಜದಲ್ಲಿ ಕೆಟ್ಟ ವ್ಯಕ್ತಿ ಜೀವನದಲ್ಲಿ ಮನಪರಿವರ್ತನೆಗೊಂಡು ಸಮಾಜ ಉತ್ತುಂಗ ಸ್ಥಿತಿಗೆ ಏರಬಹುದು ಎನ್ನುವುದಕ್ಕೆ ಅವರು ಮಾದರಿಯಾಗಿದ್ದಾರೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಹಲವಾರು ದುಶ್ಚಟಗಳಿಗೆ ಒಳಗಾಗಿ ತಮ್ಮ ಜೀವನವನ್ನೇ ನಾಶಮಾಡಿಕೊಳ್ಳುತ್ತಿರುವ ಯುವ ಜನಾಂಗಕ್ಕೆ ಮಹರ್ಷಿ ವಾಲ್ಮೀಕಿ ಜೀವನ ಚರಿತ್ರೆ ಬಗ್ಗೆ ಅರಿವು ಮೂಡಿಸಿ ಬದಲಾವಣೆಯತ್ತ ಕರೆತರಬೇಕಾಗಿದೆ ಎಂದು ಅಭಿಪ್ರಾಯ ಪಟ್ಟರು. ಪ್ರಧಾನ ಭಾಷಣ ಮಾಡಿದ ನಿವೃತ್ತ ಶಿಕ್ಷಕ ಚಂದ್ರಶೇಖರಯ್ಯರನ್ನು ಸನ್ಮಾನಿಸಲಾಯಿತು

ಸಮಾರಂಭದಲ್ಲಿ ಸಂತೋಷಕುಮಾರ್, ಪುರಸಭೆ ಮುಖ್ಯಾಧಿಕಾರಿ ಸತೀಶ್, ಸಿಡಿಪಿಓ ಪೂರ್ಣಿಮಾ, ಎಡಿಎಲ್ ಆರ್ ಮೂಡಲಗಿರಿಗೌಡ, ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಕೋಮಲ, ಲೋಕೇಶ್, ಟಿಎಪಿಸಿಎಂಎಸ್ ನಿರ್ದೇಶಕ ಪಿ.ಎಲ್.ಆದರ್ಶ, ಟಿ.ಎಸ್.ಹಾಳಯ್ಯ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ರಮೇಶ್, ಸಬ್ ಇನ್ಸ್‌ಪೆಕ್ಟರ್ ಧರ್ಮಪಾಲ್, ದಲಿತ ಮುಖಂಡರಾದ ದೇವರಾಜು, ಅಂಕಯ್ಯ, ರಾಮಯ್ಯ, ಮರಿದೇವಯ್ಯ, ವಾಲ್ಮೀಕಿ ಸಂಘದ ಅಧ್ಯಕ್ಷ ದೇವಾನಂದ್, ಪ್ರಸನ್ನ, ಹಂಸವೇಣಿ, ಮೊದಲಾದವರು ಇದ್ದರು.

ಸಮಷ್ಟಿಯ ಬೆಳಕು ಮಹರ್ಷಿ ವಾಲ್ಮೀಕಿ

ಕಿಕ್ಕೇರಿ, ಅ.7–ಜಾತಿ–ಧರ್ಮದ ಸಂಕೋಲೆ ದೂರ ಮಾಡಿ ಜ್ಞಾನದ ಬೆಳಕನ್ನು ರಾಮಾಯಣದ ಮೂಲಕ ತಿಳಿಸಿದ ವಾಲ್ಮೀಕಿ ಸಮಾಜ ಸುಧಾರಕ ಮಹರ್ಷಿಗಳು ಎಂದು ಗ್ರಾಪಂ ಅಧ್ಯಕ್ಷ ಕೆ.ಬಿ.ಚಂದ್ರಶೇಖರ್ ತಿಳಿಸಿದರು.

ಇಲ್ಲಿನ ಗ್ರಾಪಂ ಕಛೇರಿಯಲ್ಲಿ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡುತ್ತ, ಅನಕ್ಷರತೆಯ ಅಂಧಕಾರದಲ್ಲಿ ಬದುಕಿಗಾಗಿ ಸಿಕ್ಕ ಪ್ರಾಣಿ ಕೊಂದು, ಹಣ, ಸಂಪತ್ತಿಗಾಗಿ ದರೋಡೆ ಮಾಡುತ್ತಿದ್ದ ಬೇಡನಾಗಿದ್ದವನು ರತ್ನಾಕರ. ನಾರದ ಮುನಿಗಳಿಂದ ಪರಿವರ್ತನೆಯಾಗಿ ಶ್ರೇಷ್ಠನಾಗಿ ಮಹರ್ಷಿಯಾಗಿ ಬದಲಾದರು ಎಂದರು.

ಪಿಡಿಒ ಸಿ.ಚಲುವರಾಜು ಮಾತನಾಡಿ, ವಾಲ್ಮೀಕಿಯನ್ನು ಒಂದು ಸಮುದಾಯಕ್ಕೆ ಗುರುತಿಸದೆ ವಿಶ್ವ ಸಮುದಾಯದವರು ಎನ್ನಬೇಕಿದೆ. ಜಾತಿ, ಧರ್ಮಗಳ ಸಂಕೋಲೆಯಿಂದ ಹೊರಬಂದಲ್ಲಿ ಮಾತ್ರ ವ್ಯಕಿತ್ವದ ವಿಕಸನವಾಗಲಿದೆ.

ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಸ್ಮರಿಸಲಾಯಿತು. ಕಾರ್ಯದರ್ಶಿ ಪಾಪೇಗೌಡ, ಲೆಕ್ಕ ಸಹಾಯಕ ವಾಸು, ಸದಸ್ಯರಾದ ಕೆ.ಜಿ. ಪುಟ್ಟರಾಜು, ರೇಣುಕಾ, ಮುಖಂಡ ಅರುಣಿ. ಶ್ರೀಕಾಂತ್, ಪೌರಕಾರ್ಮಿಕರು ಉಪಸ್ಥಿತರಿದ್ದರು.

ಜಯಮ್ಮ ಬಿ.ಸಿ. ಚನ್ನೇಗೌಡ ನಿಧನ



ಕೆ.ಆರ್.ಪೇಟೆ, ಅ.7–ಶಿಕ್ಷಣ ಇಲಾಖೆಯ ನಿವೃತ್ತ ಶಾಲಾ ತನಿಖಾಧಿಕಾರಿ ದಿ.ಬಿ.ಸಿ. ಚನ್ನೇಗೌಡರ ಧರ್ಮಪತ್ನಿ ಜಯಮ್ಮ(74)ಹೇಮಾವತಿ ಬಡಾವಣೆಯಲ್ಲಿರುವ ಪುತ್ರನ ನಿವಾಸದಲ್ಲಿ ಮಂಗಳವಾರ ಸಂಜೆ ನಿಧನ ಹೊಂದಿದ್ದಾರೆ. ಮೃತರು ಪ್ರಗತಿಪರ ರೈತ ಬಿ.ಸಿ.ಪುರುಷೋತ್ತಮ್ ಸೇರಿದಂತೆ ಇಬ್ಬರು ಪುತ್ರರು, ನ್ಯಾಯಾಂಗ ಇಲಾಖೆಯ ನಿವೃತ್ತ ಅಧಿಕಾರಿ ಬಿ.ಸಿ.ಪ್ರೇಮನಾಗರಾಜು ಸೇರಿದಂತೆ ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಅ.8ರ ಬೆಳಿಗ್ಗೆ 11 ಗಂಟೆಗೆ ಗುಡ್ಡೇನಹಳ್ಳಿ ಗ್ರಾಮದ ಬಳಿ ಇರುವ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ದಸರಾ ರಜೆ ವಿಸ್ತರಣೆ

ಈ ಮನವಿ ಆಧಾರದ ಮೇಲೆ ಅಕ್ಟೋಬರ್ 18 ರವರೆಗೆ ರಜೆಯನ್ನು ವಿಸ್ತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಪರೀಕ್ಷೆಯಲ್ಲಿ ತೊಡಗಿಸಿಕೊಂಡವರಿಗೆ ವಿನಾಯ್ತಿ: ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿದ್ದು, ಪರೀಕ್ಷೆಯಲ್ಲಿ ತೊಡಗಿಸಿಕೊಂಡವರು ಸಮೀಕ್ಷೆಯಲ್ಲಿ ಭಾಗವಹಿಸುವಂತಿಲ್ಲ. ರಜೆ ವಿಸ್ತರಣೆಯಿಂದ 12 ದಿನಗಳು ಸಿಗಲಿದ್ದು, ಅಕ್ಟೋಬರ್ 18 ರೊಳಗೆ ಪೂರ್ಣ ಪ್ರಮಾಣದಲ್ಲಿ ಸಮೀಕ್ಷೆ ಮುಗಿಸಬೇಕು. ಸಮೀಕ್ಷೆಯಲ್ಲಿ ತೊಡಗಿಸಿಕೊಂಡ ಶಿಕ್ಷಕರಿಗೆ 8 ವರ್ಕಿಂಗ್ ರಜೆ, ಇತರ ಸರ್ಕಾರಿ ರಜೆಗಳು ಸಿಗಲಿವೆ. ಸಮೀಕ್ಷೆ ಕಾರ್ಯಕ್ಕೆ ಹಿಂದೇಟು ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮೃತರ ಕುಟುಂಬಕ್ಕೆ ರೂ.20 ಲಕ್ಷ ಪರಿಹಾರ: ಸರ್ವೆ ಕಾರ್ಯದಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಅವರ ಕುಟುಂಬಕ್ಕೆ ರೂ. 20 ಲಕ್ಷ ಪರಿಹಾರ ಕೊಡುತ್ತೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಬೆಂಗಳೂರಿನಲ್ಲಿ 6,700 ಶಿಕ್ಷಕರು: ಬೆಂಗಳೂರಿನಲ್ಲಿ 46 ಲಕ್ಷ ಮನೆಗಳಿದ್ದು, 6,700 ಶಿಕ್ಷಕರನ್ನು ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ. ಒಟ್ಟು, 27,000 ಗಣತಿದಾರರನ್ನು ನಿಯೋಜಿಸಲಾಗಿದೆ. ದಿನಕ್ಕೆ 10 –15 ಮನೆಗಳ ಸಮೀಕ್ಷೆ ನಡೆಸುವ ಗುರಿ ನೀಡಲಾಗಿದೆ.

ಬೆಂಗಳೂರಿನಲ್ಲಿ ನರಕ ಚತುರ್ದಷಿ ಒಳಗೆ ಸಮೀಕ್ಷೆ ಮುಗಿಸಲು ಸೂಚಿಸಲಾಗಿದೆ. ಶಿಕ್ಷಕರು ಕೂಡ ಇಷ್ಟರೊಳಗೆ ಸಮೀಕ್ಷೆ ಮುಗಿಸುವ ಭರವಸೆ ನೀಡಿದ್ದಾರೆ ಎಂದು ಸಿಎಂ ತಿಳಿಸಿದರು.

ವ್ಯಕ್ತಿಯ ಕೊಚ್ಚಿ ಕೊಲೆ

ಮಾದರಿಯಲ್ಲಿ ಕೊಲೆಯಾಗಿದ್ದ ರೌಡಿಶೀಟರ್ ಕಾರ್ತಿಕ್ ಜೊತೆ ವೆಂಕಟೇಶ್ ಗುರ್ತಿಸಿಕೊಂಡಿದ್ದು, ಆದರೆ ಇಬ್ಬರ ನಡುವೆಯೂ ಹಣಕಾಸು ವಿಚಾರದಲ್ಲಿ ವೈಷಮ್ಯ ಉಂಟಾಗಿತ್ತು ಎಂದು ಹೇಳಲಾಗಿದೆ. ಹತ್ಯೆಯಾದ ವೆಂಕಟೇಶ್ ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಹೊಂಚು ಹಾಕಿದ್ದರು: ಇಂದು ಹತ್ಯೆಗೈದ ವ್ಯಕ್ತಿಗಳು ಹಲವು ದಿನಗಳಿಂದ ವೆಂಕಟೇಶ್ ಚಲನ–ವಲನಗಳನ್ನು ಗಮನಿಸುತ್ತಾ, ಹತ್ಯೆಗೆ ಹೊಂಚುಹಾಕುತ್ತಿದ್ದರು ಎಂದು ಆತ ಪೊಲೀಸರಿಗೆ ಮಾಹಿತಿ ನೀಡಿದ್ದ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಲೆಗೆ ಯತ್ನ ನಡೆದಿತ್ತು: ಈ ಹಿಂದೆಯೇ ಎರಡು ಬಾರಿ ವೆಂಕಟೇಶ್ ಕೊಲೆಗೆ ಯತ್ನ ನಡೆದಿತ್ತು. ಆದರೆ ಇದೀಗ ಮೂರನೇ ಬಾರಿಗೆ ಜನ ಹಾಗೂ ವಾಹನ ದಟ್ಟಣೆ ಪ್ರದೇಶದಲ್ಲೇ ದಾಳಿಮಾಡಿ ಆತನನ್ನು ಹತ್ಯೆಗೈಯುವಲ್ಲಿ ಗುಂಪು ಯಶಸ್ವಿಯಾಗಿದೆ. ತನ್ನ ಜೀವಕ್ಕೆ ಅಪಾಯ ಇರುವ ಬಗ್ಗೆಯೂ ವೆಂಕಟೇಶ್ ಪೊಲೀಸರಿಗೆ ದೂರು ನೀಡಿದ್ದರು ಎಂದೂ ಕುಟುಂಬ ಸದಸ್ಯರು ಮಾಧ್ಯಮದವರಿಗೆ ತಿಳಿಸಿದ್ದಾರೆ.

ಫೋಟೋ ತೆಗೆದ ಸಾರ್ವಜನಿಕರು: ಘಟನೆ ನಡೆದ ಸ್ಥಳದಲ್ಲಿ ಕಾರು ಅಡ್ಡಗಟ್ಟಿ ವೆಂಕಟೇಶ್‌ನ ಅದರಿಂದ ಹೊರಕ್ಕೆಳೆದು ಮಚ್ಚು–ಲಾಂಗ್‌ಗಳಿಂದ ಕೊಚ್ಚಿ ಕೊಲೆಗೈದ ದೃಶ್ಯವನ್ನು ಸುತ್ತಮುತ್ತ ಇದ್ದವರು ಹಾಗೂ ದಾರಿಹೋಕರು ತಮ್ಮ ಮೊಬೈಲ್‌ಗಳಲ್ಲಿ ಫೋಟೋ ತೆಗೆದು ಸಾಮಾಜಿಕ ಜಾಲತಾಣಗಳಿಗೆ ಹರಿಯಬಿಟ್ಟಿದ್ದಾರೆ. ಕೆಲವರು ವೀಡಿಯೋ ಮಾಡಲು ಯತ್ನಿಸಿದರಾದರೂ ದುಷ್ಕರ್ಮಿಗಳು ಅವರತ್ತ ಲಾಂಗ್ ತೋರಿದ್ದರಿಂದ ಹೆದರಿ, ಅಲ್ಲಿಂದ ದೂರ ಸರಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಧಾವಿಸಿದ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್.ಬಿಂಧುಮಣಿ, ಕೆ.ಎಸ್.ಸುಂದರರಾಜ್, ದೇವರಾಜ ಉಪ ವಿಭಾಗದ ಎಸಿಪಿ ಕೆ. ರಾಜೇಂದ್ರ, ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ದೇವರಾಜ ಠಾಣೆ ಇನ್ಸ್‌ಪೆಕ್ಟರ್ ರಘು, ಸಿಸಿಬಿ ಇನ್ಸ್‌ಪೆಕ್ಟರ್ ಲೇಪಾಕ್ಷಿ, ಶ್ವಾನದಳ ಮತ್ತು ನಗರ ಬೆರಳಚ್ಚು ಮುದ್ರೆ ವಿಭಾಗದ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಪ್ರಕರಣ ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ಸ್ಥಳ ಮಹಜರು ನಡೆಸಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಿದರು.

ಘಟನಾ ಸ್ಥಳದಲ್ಲಿ ಸಾರ್ವಜನಿಕರು ತೆಗೆದಿರುವ ಫೋಟೋ ಹಾಗೂ ಆ ಮಾರ್ಗದಲ್ಲಿರುವ ಸಿಸಿ ಕ್ಯಾಮರಗಳ ಫುಟೇಜ್‌ಗಳ ಸುಳಿವಿನ ಜಾಡು ಹಿಡಿದಿರುವ ಪೊಲೀಸರು ಕೊಲೆಗಾರರ ಪತ್ತೆಗಾಗಿ ಎರಡು ತಂಡಗಳನ್ನು ರಚಿಸಲಾಗಿದೆ. ಈಗಾಗಲೇ ಆರೋಪಿಗಳ ಬಗ್ಗೆ ಕೆಲ ಮಾಹಿತಿಗಳನ್ನು ಕಲೆಹಾಕಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಭಿವೃದ್ಧಿ ನೀಲನಕ್ಷೆ ರೆಡಿ ಮಾಡಿ

ಇಂದಿನ ಸಭೆಯಲ್ಲಿ ಮುಖ್ಯಮಂತ್ರಿ, ಕಳೆದ ಎರಡು ವರ್ಷಗಳ ಆಡಳಿತಾವಧಿಯಲ್ಲಿ ಏನು ನಡೆದಿದೆಯೋ ಅದು ಅಂತ್ಯಗೊಂಡಿದೆ. ನನ್ನಿಂದಲೂ ಕೆಲವು ತಪ್ಪು–ಒಪ್ಪು ಆಗಿರಬಹುದು. ಮುಂದಿನ ಆಡಳಿತ ದಿನಗಳಲ್ಲಿ ನಾನು ಇದಕ್ಕೆ ಎಡೆ ಮಾಡಿಕೊಡುವುದಿಲ್ಲ. ಕೆಲವು ಇಲಾಖಾ ವಿಷಯಗಳಲ್ಲಿ ನೀವೇ ಸ್ವಯಂ ಪ್ರೇರಿತರಾಗಿ ಆಡಳಿತಾತ್ಮಕ ತೀರ್ಮಾನಗಳನ್ನು ಕೈಗೊಂಡಿದ್ದೀರಿ. ಇನ್ನು ಮುಂದೆ ಬೆಂಗಳೂರು ಸೇರಿದಂತೆ ಯಾವುದೇ ಆಡಳಿತಾತ್ಮಕ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವ ಮುನ್ನ ನನ್ನ ಗಮನಕ್ಕೆ ತರಬೇಕು ಎಂದು ಕಟ್ಟಾದೇಶ ಮಾಡಿದ್ದಾರೆ.

ಯಾವುದೇ ಸಚಿವರು, ಯಾರು ಏನೇ ಹೇಳಲಿ, ಪ್ರಮುಖ ವಿಷಯಗಳು ನನ್ನ ಕಚೇರಿ ಅನುಮತಿ ಪಡೆದೇ ಮುಂದುವರೆಯಬೇಕು. ಬೆಂಗಳೂರಿನಲ್ಲಿ ಗುಂಡಿ, ಕಸ, ಮಳೆ, ನೀರಿನ ಸಮಸ್ಯೆ, ಅಭಿವೃದ್ಧಿ ಕಾರ್ಯ ಕುಂಠಿತ ವಿಷಯಗಳನ್ನು ಕಾಲಾನುಕಾಲಕ್ಕೆ ನನ್ನ ಗಮನಕ್ಕೆ ಏಕೆ ತರಲಿಲ್ಲ? ಎಂದು ಮುಖ್ಯ ಕಾರ್ಯದರ್ಶಿ ಅವರನ್ನು ಪ್ರಶ್ನಿಸಿದ್ದಾರೆ.

ಈ ವಿಷಯವೂ ಸೇರಿದಂತೆ ರಾಜ್ಯಾದ್ಯಂತ ಅಭಿವೃದ್ಧಿ ಕಾರ್ಯಗಳಿಗೆ ತಕ್ಷಣ ಹಣ ಬಿಡುಗಡೆ ಮಾಡುವಂತೆ ಇಲಾಖಾ ಕಾರ್ಯದರ್ಶಿಗೆ ಸ್ಥಳದಲ್ಲೇ ಆದೇಶ ಮಾಡಿದ್ದಾರೆ. ಬೆಂಗಳೂರು ಸಮಸ್ಯೆ ನಿವಾರಿಸಲು ನೀವು ಕ್ರಮ ತೆಗೆದುಕೊಳ್ಳಿ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿ, ಕೆಲವು ಸಲಹೆ ನೀಡಿದ ನಂತರ ನೀಲಿ ನಕಾಶೆ ಸಿದ್ಧಪಡಿಸುವಂತೆ ತಿಳಿಸಿದರು.

ಈಗಾಗಲೇ ಸಂಪುಟದ ಬಹುತೇಕ ಸಚಿವರು, ಅಧಿಕಾರಿಗಳ ವರ್ತನೆ ಬಗ್ಗೆ ಮುಖ್ಯಮಂತ್ರಿ ಗಮನಕ್ಕೆ ತಂದಿರುವರಲ್ಲದೆ, ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡು ಸಾರ್ವಜನಿಕ ಟೀಕೆಗೆ ಒಳಗಾಗಿದ್ದೇವೆ ಎಂಬ ಮಾಹಿತಿಯನ್ನು ನೀಡಿದ್ದರು.

ಸಚಿವರಷ್ಟೇ ಅಲ್ಲದೆ, ಶಾಸಕರೂ ಸಹ ಪ್ರತಿಯೊಂದು ವಿಷಯಕ್ಕೂ ಮುಖ್ಯಮಂತ್ರಿ ಸಹಿಗಾಗಿ ಇಲ್ಲವೇ ಅಧಿಕಾರಿಗಳಿಗೆ ಆದೇಶ ಕೊಡಿಸಲು ಕಾಯಬೇಕಾಗಿತ್ತು. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಸಿದ್ದರಾಮಯ್ಯ ಮೈಸೂರಿನಲ್ಲಿ, ಐದು ವರ್ಷ ಪೂರ್ಣ ಆಡಳಿತ ನಡೆಸುತ್ತೇನೆ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದರು.

ಇದಾದ ನಂತರ ಆಡಳಿತ ಪಕ್ಷದಲ್ಲೇ ಪರ–ವಿರೋಧ ಚರ್ಚೆಗಳೂ ಬಂದವು. ಇದರ ಮಧ್ಯೆ ಪಕ್ಷದ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಬಂದು ಹೋಗಿದ್ದರು.

ಬಿಗ್ ಬಾಸ್ ಸ್ಪರ್ಧಿಗಳ ಸ್ಥಳಾಂತರ



ಸ್ಪರ್ಧಿಗಳು ಹೊರ ಬರುತ್ತಿರುವುದು.

ಜಾಲಿವುಡ್ ಒಳಗೆ ಪರಿಶೀಲನೆ ನಡೆಸಿದರು. ನೋಟಿಸ್ ತೆಗೆದುಕೊಳ್ಳಲು ಜಾಲಿವುಡ್ ಆಡಳಿತ ಮಂಡಳಿ ನಿರಾಕರಿಸಿತ್ತು. ಆಗ ಜಾಲಿವುಡ್ ಸ್ಟುಡಿಯೋಸ್ ಸಿಬ್ಬಂದಿಯನ್ನು ತಹಶೀಲ್ದಾರ್ ತರಾಟೆಗೆ ತೆಗೆದುಕೊಂಡರು. ನೋಟಿಸ್ ಸ್ವೀಕರಿಸೋದಕ್ಕೆ ಬರಲು ಅರ್ಧ ಗಂಟೆ ಬೇಕಾ ಎಂದು ಗರಂ ಆದರು. ಕೂಡಲೇ ನೋಟೀಸ್ ತೆಗೆದುಕೊಳ್ಳಿ. ಅಧಿಕೃತವಾಗಿ ಇಂದು ಸೀಜ್ ಮಾಡ್ತೀವಿ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಸಂಜೆ 7 ಗಂಟೆವರೆಗೂ ಎಕ್ಸಿಟ್ ಗೇಟ್ ಓಪನ್ ಮಾಡಿಕೊಳ್ಳಿ, ಕೂಡಲೇ ಜಾಲಿವುಡ್ ಸ್ಟುಡಿಯೋ ಕ್ಲೋಸ್ ಮಾಡುವಂತೆ ಸೂಚನೆ ನೀಡಿದರು. ಕೊನೆಗೆ ಜಾಲಿವುಡ್ ಆಡಳಿತ ಮಂಡಳಿ ನೋಟಿಸ್ ಸ್ವೀಕರಿಸಿತು. ನಾಳೆಯಿಂದ ಜಾಲಿವುಡ್ ಸ್ಟುಡಿಯೋಸ್ ಯಾವುದೇ ಕಾರ್ಯಾಚರಣೆ ಮಾಡಬಾರದು. ಎಲ್ಲಾ ರೀತಿಯ ಕಾರ್ಯಚಟುವಟಿಕೆ ಸ್ಥಗಿತ ಮಾಡುವಂತೆ ಸೂಚನೆ ನೀಡಲಾಯಿತು. ಸ್ಟುಡಿಯೋಸ್ ಸ್ವತಃ ತಾವೇ ನಿಂತು ತಹಶೀಲ್ದಾರ್ ಬೀಗ ಹಾಕಿದರು. ಬಿಗ್ ಬಾಸ್ ಸ್ಥಗಿತಕ್ಕೂ ಸೂಚನೆ ನೀಡಿದರು.

ಬಿಗ್ ಬಾಸ್‌ನಿಂದ ಹೊರ ಬಂದ ಸ್ಪರ್ಧಿಗಳು: ಸೀಲ್‌ಡೌನ್ ಆಗುತ್ತಿದ್ದಂತೆ ಬಿಗ್ ಬಾಸ್ ಸ್ಪರ್ಧಿಗಳನ್ನು ಸ್ಥಳಾಂತರ ಮಾಡಲಾಯಿತು. ಅವರುಗಳಿಗೆ ಬಿಡದಿ ಬಳಿಯಿರುವ ಈಗಲ್ ಟನ್ ರೆಸಾರ್ಟ್‌ನಲ್ಲಿ 12 ಕೊಠಡಿಗಳನ್ನು ಕಾಯ್ದಿರಿಸಿ, ಅಲ್ಲಿಗೆ ಸ್ಥಳಾಂತರ ಮಾಡಲಾಗಿದ್ದು, ಇದೀಗ ಬಿಗ್‌ಬಾಸ್ ಶೋ ಸದ್ಯಕ್ಕೆ ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

ಪರಿಶಿಷ್ಟ ಜಾತಿಯವರು ಬೌದ್ಧ ಧರ್ಮಕ್ಕೆ ಮತಾಂತರವಾದರೂ 'ಎಸ್‌ಸಿ' ಪ್ರಮಾಣಪತ್ರ

ಬೆಂಗಳೂರು, ಅ.7– ಪರಿಶಿಷ್ಟ ಜಾತಿಗೆ ಸೇರಿದವರು ಬೌದ್ಧ ಧರ್ಮಕ್ಕೆ ಮತಾಂತರಗೊಂಡರೂ ಅವರಿಗೆ ಎಸ್‌ಸಿ ಜಾತಿ ಪ್ರಮಾಣಪತ್ರ ನೀಡಲು ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. 101 ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಯಾರೇ ಆದರೂ ಬೌದ್ಧ ಧರ್ಮಕ್ಕೆ ಮತಾಂತರಗೊಂಡರೂ ಇದು ಅನ್ವಯವಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ತನ್ನ ಆದೇಶದಲ್ಲಿ ತಿಳಿಸಿದೆ.

ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಇತ್ಯಾದಿಗಳಲ್ಲಿ ಮೀಸಲಾತಿ) ಕಾಯ್ದೆ 1990, 2024ರ ತಿದ್ದುಪಡಿ ಕಾಯ್ದೆ ಮತ್ತು 1992ರ ನಿಯಮದಂತೆ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಪರಿಶಿಷ್ಟ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ನೀಡಲು ಆಕ್ಟೋಬರ್ 6ರಂದು ಹೊರಡಿಸಿದ ಆದೇಶದಲ್ಲಿ ಹೇಳಲಾಗಿದೆ.

ರಾಜ್ಯ ಸರ್ಕಾರದ ಆದೇಶ

ಧರ್ಮದ ಕಾಲಂನಲ್ಲಿ ಬೌದ್ಧ ಧರ್ಮಕ್ಕೂ ಅವಕಾಶ: ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳ ಅರ್ಜಿಗಳ ಧರ್ಮದ ಕಾಲಂನಲ್ಲಿ 'ಬೌದ್ಧ ಧರ್ಮ' ಎಂದು ನಮೂದಿಸಲು ಆದೇಶವು ಅವಕಾಶ ನೀಡುತ್ತದೆ.

ಶೈಕ್ಷಣಿಕ ದಾಖಲೆಗಳಲ್ಲಿ ಬೌದ್ಧ ಧರ್ಮ ಸೇರಿಸಲು ಅವಕಾಶ: ಅಲ್ಲದೆ, ಅರ್ಜಿದಾರರು, ಪೋಷಕರು ಅವರು ಬಯಸಿದಲ್ಲಿ ಸರ್ಕಾರಿ ಶಾಲೆ, ಖಾಸಗಿ ಶಾಲೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲಾ ಇತರ ಶಿಕ್ಷಣ ಸಂಸ್ಥೆಗಳ ದಾಖಲೆಗಳಲ್ಲಿ ಧರ್ಮದ ಕಾಲಂನಲ್ಲಿ ಬೌದ್ಧಧರ್ಮವನ್ನು ನಮೂದಿಸಲು ಅವಕಾಶ ನೀಡುತ್ತದೆ. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳು, ಮಂಡಳಿಗಳು ಮತ್ತು ನಿಗಮಗಳು, ಇತರ ಸಂಸ್ಥೆಗಳು ಆದೇಶದಂತೆ ಕಾರ್ಯನಿರ್ವಹಿಸುತ್ತವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರ 1990ರಲ್ಲಿ ಬರೆದಿದ್ದ ಪತ್ರದ ಆಧಾರದ ಮೇಲೆ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟ ಜಾತಿಯವರಿಗೆ ಎಸ್‌ಸಿ ಪ್ರಮಾಣ ಪತ್ರ ನೀಡಲು ರಾಜ್ಯಸರ್ಕಾರ 2013ರಲ್ಲಿ ಸುತ್ತೋಲೆಯೊಂದನ್ನು ಹೊರಡಿಸಿತ್ತು.

2016 ರಲ್ಲಿ ಬೌದ್ಧರಾಗುವ ಪರಿಶಿಷ್ಟ ಜಾತಿಯ ಜನರು ಎಸ್‌ಸಿ ಪ್ರಮಾಣಪತ್ರಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವಂತೆ ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಕೇಂದ್ರ ಸರ್ಕಾರ ಸೂಚಿಸಿತ್ತು 'ಸುತ್ತೋಲೆ ಹೊರಡಿಸಿದ್ದರೂ ಈ ಕುರಿತು ಸ್ಪಷ್ಟನೆ ಹಾಗೂ ಸೂಕ್ತ ಆದೇಶ ಕೋರಿ ಹಲವು ಸಂಘಟನೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿವೆ ಎಂದು ಸಮಾಜ ಕಲ್ಯಾಣ ಇಲಾಖೆ ತಿಳಿಸಿದೆ. ಕರ್ನಾಟಕದಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು, ಪಾರ್ಸಿಗಳು ಮತ್ತು ಜೈನರೊಂದಿಗೆ ಬೌದ್ಧರು ಧಾರ್ಮಿಕ ಅಲ್ಪಸಂಖ್ಯಾತರ ಪಟ್ಟಿಗೆ ಬರುತ್ತಾರೆ.

ಸಿಜೆಐ ಮೇಲೆ ಶೂ ಎಸೆದವರು ಮನುವಾದಿಗಳು



ಬೆಂಗಳೂರು, ಅ.7– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆದವರು ಸನಾತನವಾದಿಗಳು, ಮನುವಾದಿಗಳು ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿದ್ದಾರೆ.

ಏನಿದು ಘಟನೆ: ಸುಪ್ರೀಂಕೋರ್ಟ್ ಹಿರಿಯ ವಕೀಲರೊಬ್ಬರು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಮುಂದಾದ ಘಟನೆ ಸೋಮವಾರ (ಅ.6) ನಡೆದಿತ್ತು. ಮಧ್ಯಪ್ರದೇಶದ ಖಜುರಾಹೊ ದೇವಾಲಯ ಸಂಕೀರ್ಣದಲ್ಲಿ ವಿಷ್ಣುವಿನ ವಿಗ್ರಹವನ್ನು ಪುನಃಸ್ಥಾಪಿಸಲು ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ನ್ಯಾ. ಬಿ.ಆರ್.ಗವಾಯಿ ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಸಿಟ್ಟಾಗಿ 71 ವರ್ಷದ ಕಿಶೋರ್ ರಾಕೇಶ್ ಶೂ ಎಸೆಯಲು ಮುಂದಾಗಿದ್ದರು.

ಕೋರ್ಟ್ ಹಾಲ್‌ನಲ್ಲಿ ಕಿಶೋರ್ ರಾಕೇಶ್ ಶೂ ತೆಗೆಯುತ್ತಿದ್ದಾಗ ಅಲ್ಲಿದ್ದ ಭದ್ರತಾ ಸಿಬ್ಬಂದಿ ಮಧ್ಯಪ್ರವೇಶಿಸಿ ವಕೀಲರನ್ನು ತಡೆದು ಹೊರಗೆ ಕರೆದುಕೊಂಡು ಹೋಗಿದ್ದರು. ಕರೆದುಕೊಂಡು ಹೋಗುವಾಗ ಸನಾತನ ಧರ್ಮಕ್ಕೆ ಅವಮಾನ ಮಾಡುವುದನ್ನು ನಾನು ಸಹಿಸುವುದಿಲ್ಲ ಎಂದು ಕೂಗಿಕೊಂಡಿದ್ದರು.

ಗಾಂಧಿ ಜಯಂತಿ ಆಚರಣೆ...



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಚಾರ್ಯ ಡಾ.ಎಂ.ಪ್ರಭು, ಕಾಲೇಜಿನ ಅಧ್ಯಾಪಕ ಮತ್ತು ಅಧ್ಯಾಪಕೇತರರು ಉಪಸ್ಥಿತರಿದ್ದರು.

ಕೊಪ್ಪಳ ಕಾಂಗ್ರೆಸ್‌ನಲ್ಲಿ ಭುಗಿಲೆದ್ದ ಭಿನ್ನಮತ

ಸ್ವಪಕ್ಷೀಯರ ವಿರುದ್ಧವೇ ಸಿಡಿದೆದ್ದ ಇಕ್ಬಾಲ್ ಅನ್ಸಾರಿ



ಕೊಪ್ಪಳ, ಅ.7– ಕಾಂಗ್ರೆಸ್‌ನ ಒಳ ರಾಜಕೀಯದ ಬಗ್ಗೆ ಮತ್ತೊಬ್ಬ ಮುಸ್ಲಿಂ ಮುಖಂಡ ಇಕ್ಬಾಲ್ ಅನ್ಸಾರಿ ಸಿಡಿದೆದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಳಗದ ಮುಖಂಡರ ವಿರುದ್ಧ ಕೆಂಡ ಕಾರಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಸಂಸದ ರಾಜಶೇಖರ ಹಿಟ್ನಾಳ್, ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಮತ್ತು ಯಲಬುರ್ಗಾ ಶಾಸಕ ಹಾಗೂ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಮೋಸಗಾರರು, ಕಾಂಗ್ರೆಸ್ ಹೈಕಮಾಂಡ್ ಮುಂದೆ ಸುಳ್ಳು ಹೇಳಿ ಜನತೆಗೆ ಮತ್ತು ತನಗೆ ಮೋಸ ಮಾಡಿದ್ದಾರೆ ಎಂದು ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಆರೋಪಿಸಿದ್ದಾರೆ. ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಅವರದ್ದು ಎನ್ನಲಾದ ಆಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಮುಖ್ಯಮಂತ್ರಿ ಕೊಪ್ಪಳಕ್ಕೆ ಆಗಮಿಸುವ ದಿನವೇ ಜಿಲ್ಲೆಯ ಕಾಂಗ್ರೆಸ್ ನಾಯಕರು ಮತ್ತು ಜನಪ್ರತಿನಿಧಿಗಳ ಬಗ್ಗೆ ಅಸಮಾಧಾನ ಹೊರ ಹೊರಹಾಕಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ನಡೆದ ಮುಖ್ಯಮಂತ್ರಿ ಅವರ ಕಾರ್ಯಕ್ರಮಕ್ಕೆ ನನಗೆ ಆಹ್ವಾನವಿಲ್ಲ. ಮಾಜಿ ಸಚಿವನಾಗಿದ್ದರೂ, ಮುಸ್ಲಿಂ ಎಂಬ ಕಾರಣಕ್ಕಾಗಿ ನನ್ನನ್ನು ದೂರ ಇಟ್ಟಿದ್ದಾರೆ. ಪಕ್ಷದ ನಾಯಕರೂ ಕೂಡ ಕಡೆಗಣಿಸಿದ್ದಾರೆ ಎಂದು ಆಡಿಯೋ ಸಂದೇಶದಲ್ಲಿ ಇಕ್ಬಾಲ್ ಅನ್ಸಾರಿ ಅಳಲು ತೋಡಿಕೊಂಡಿದ್ದಾರೆ.

ವಿವಿಧೆಡೆ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ....



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್, ಜಿಲ್ಲಾ ಗ್ರಾಮಾಂತರ ಮೀನುಗಾರರ ಪ್ರಕೋಷ್ಠದ ಸಂಚಾಲಕ ಡಿ.ಮಹೇಶ ನಾಯಕ, ಎಸ್‌ಸಿ ಮೋರ್ಚಾ ಅಧ್ಯಕ್ಷ ಅನಿಲ್‌ಕುಮಾರ್, ಕೃಷ್ಣನಾಯಕ, ವಕೀಲರಾದ ಶಿವರಾಜ್, ನಾರಾಯಣ, ರಘು, ಹನುಮಂತೇಗೌಡ, ಮಂಜು, ಭಾನುಪ್ರಕಾಶ್ ಇತರರು ಉಪಸ್ಥಿತರಿದ್ದರು.



ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಭಾಗ್ಯವತಿ, ಕೃಷ್ಣಪ್ಪ, ಮಹಿಳಾ ಅಧ್ಯಕ್ಷೆ ಪ್ರೇಮಾಶಂಕರೇಗೌಡ, ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಎಸ್‌ಸಿ/ಎಸ್‌ಟಿ ಅಧ್ಯಕ್ಷ ಮಧುವನ ಚಂದ್ರು, ಮಂಜು, ರಮಣಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನ್ಯಾಯಾಲಯದ ಮುಂಭಾಗದಲ್ಲಿರುವ ಉದ್ಯಾನವನದಲ್ಲಿ ಚಾಮುಂಡೇಶ್ವರಿ ಯುವ ಬಳಗದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಜಿ.ರಾಘವೇಂದ್ರ, ಪಾಂಡವಪುರ ದಿನೇಶ್, ಹಿಂದುಳಿದ ವರ್ಗದ ಉಪಾಧ್ಯಕ್ಷ ರಮೇಶ್, ಲೋಕೇಶ್, ಸೇವಾದಳ ಮೋಹನ್‌ಕುಮಾರ್, ದಿನೇಶ್, ಪರಿಸರ ಬಳಗದ ಕೃಷ್ಣಪ್ಪ (ಗಂಟಯ್ಯ), ಎಸ್‌ಎನ್ ರಾಜೇಶ್, ರವಿಚಂದ್ರ, ನಿತೀಶ್, ಕೆ.ಜಿ.ಕೊಪ್ಪಲ್ ಗುಂಡಪ್ಪ ಇನ್ನಿತರರು ಉಪಸ್ಥಿತರಿದ್ದರು.



ನಂಜನಗೂಡಿನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಭೌತಶಾಸ್ತ್ರ ಉಪನ್ಯಾಸಕ ಎಂ.ಎಸ್.ರಾಮನುಜ, ಕಾಲೇಜಿನ ಪ್ರಾಂಶುಪಾಲ ಸಿ.ಆರ್.ದಿನೇಶ್, ಕನ್ನಡ ಭಾಷಾ ಉಪನ್ಯಾಸಕಿ ಡಾ.ಎ.ಮಾಲತಿ, ಉಪನ್ಯಾಸಕರಾದ ಎಸ್.ಲಿಂಗಣ್ಣಸ್ವಾಮಿ, ರಂಗಸ್ವಾಮಿ, ದಿನೇಶ್, ಎನ್ ನಾಗರಾಜ್, ರೂಪ, ಎಚ್.ಕೆ.ಸ್ವಾಮಿಗೌಡ, ಭವ್ಯ, ಮೀನಾ, ಸುಲಕ್ಷಣ, ಅಂಬಿಕಾ, ಪದ್ಮಾವತಿ, ವತ್ಸಲ, ಟಿ.ಕೆ.ರವಿ, ನಾಗರಾಜ ರೆಡ್ಡಿ, ಹರೀಶ್, ಮಿಲ್ಟನ್, ಮಹದೇವಸ್ವಾಮಿ, ದಿವ್ಯ ಉಪಸ್ಥಿತರಿದ್ದರು.



ಸಾಲಿಗ್ರಾಮ ತಾಲೂಕು ತಂದ್ರೆ ಗ್ರಾಮ ಪಂಚಾಯಿತಿಯಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಪಿಡಿಓ ಮಹದೇವ್, ಗ್ರಾಪಂ ಅಧ್ಯಕ್ಷೆ ರೇಣುಕಾ, ಉಪಾಧ್ಯಕ್ಷ ಮಹಾದೇವಪ್ಪ, ಗ್ರಾಪಂ ಸದಸ್ಯರು, ಗ್ರಾಮಸ್ಥರು, ಪಂಚಾಯಿತಿ ನೌಕರರು ಇದ್ದರು.



ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಶಾಲೆಯ ಹಿರಿಯ ಪ್ರಾಚಾರ್ಯ ಗೋಪಾಲಸ್ವಾಮಿ, ಪ್ರಾಚಾರ್ಯ ಎ.ಕುಮಾರ್, ಕಾಲೇಜು ವಿಭಾಗದ ಪ್ರಾಚಾರ್ಯ ಮಹದೇವಸ್ವಾಮಿ, ಆಡಳಿತಾಧಿಕಾರಿ ಶ್ರೀಮತಿ ಪ್ರಿಯಾಂಕ, ಸಂಯೋಜಕ ಶೇಷಾದ್ರಿ, ಶ್ರೀಮತಿ ಅನಿತಾ ಉಪಸ್ಥಿತರಿದ್ದರು.



ಮೈಸೂರಿನ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಆಚರಿಸಲಾದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಕ್ಷದ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಚಾಮರಾಜ ಕ್ಷೇತ್ರದ ಪಕ್ಷದ ಅಧ್ಯಕ್ಷ ಮಂಜುನಾಥ್, ನಗರ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಕಾರ್ಯಾಧ್ಯಕ್ಷ ಪ್ರಿಯದರ್ಶಿನಿ ಪ್ರಕಾಶ್, ಎನ್.ಆರ್ ಕ್ಷೇತ್ರದ ಅಧ್ಯಕ್ಷ ಎಂ.ಎನ್.ರಾಮು, ನಿಖಿಲ್ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಪ್ರಕಾಶ್ ಇನ್ನಿತರ ಮುಖಂಡರು ಭಾಗವಹಿಸಿದ್ದರು.



ಸರ್.ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಪ್ರಕಾಶ್, ಉಪಾಧ್ಯಕ್ಷ ಸುರೇಶ್‌ಕುಮಾರ್ ಎಂ.ಎಸ್, ನಿರ್ದೇಶಕರಾದ ಚಂದ್ರೇಗೌಡ, ಶಿವರಾಜ್, ರುದ್ರಸ್ವಾಮಿ, ಸಂತೋಷ್‌ಕುಮಾರ್, ಕುಮಾರ್, ಯೋಗೇಶ್ ಜಯನಗರ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಜಾತಿರಹಿತ ಸಮಾಜಕ್ಕೆ ಪ್ರೇರಣೆಯಾದ ಮಹನೀಯರು ವಾಲ್ಮೀಕಿ; ಸಚಿವ ಹೆಚ್.ಸಿ.ಮಹದೇವಪ್ಪ ಸ್ಮರಣೆ





ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ 'ಶ್ರೀ ಮಹರ್ಷಿ ವಾಲ್ಮೀಕಿ' ಜಯಂತಿ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ ಸಿ.ಎನ್.ಮಂಜೇಗೌಡ, ಕೆ.ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಅ.7(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತಾಶ್ರಯದಲ್ಲಿ 'ಶ್ರೀ ಮಹರ್ಷಿ ವಾಲ್ಮೀಕಿ' ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಬಡತನದಲ್ಲಿ ಹುಟ್ಟಿದ ಮಹರ್ಷಿ ವಾಲ್ಮೀಕಿ ಅವರು ತಪಸ್ಸು ಮತ್ತು ಅಸಾಧಾರಣವಾದ ಬುದ್ಧಿ ಶಕ್ತಿಯ ಮೂಲಕ ಇಡೀ ಪ್ರಪಂಚಕ್ಕೆ ಧರ್ಮದ ಮೌಲ್ಯ ಮತ್ತು ನೈತಿಕತೆ ತಿಳಿಸಿದ್ದಾರೆ ಎಂದರು.

ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನನ್ನು ಸೃಷ್ಟಿಸಿ, ಧರ್ಮ ಪಾಲನೆ ಮಾಡಿದವರು. ಸಾಮಾಜಿಕ ಆರ್ಥಿಕ, ಸಮಾನತೆಯ ಮೂಲಕ ಪ್ರಜಾಸತ್ತಾತ್ಮಕ ಮೌಲ್ಯವನ್ನು ಬಿತ್ತಿದವರು. ಮೂಢ ನಂಬಿಕೆಗೆ ಒಳಗಾಗದೆ, ಎಲ್ಲರೂ ಸಮಾನವಾಗಿ ಬದುಕಬೇಕು, ಜಾತಿ ರಹಿತವಾದಂತಹ ಸಮಾಜವನ್ನು ಕಟ್ಟಬೇಕು ಎಂದವರು. ಮಹರ್ಷಿ ವಾಲ್ಮೀಕಿ ಅವರ ಸಮಸಮಾಜ ವಾಣಿಯನ್ನು ಅರ್ಥ ಮಾಡಿಕೊಂಡು ನಾವೆಲ್ಲರೂ ಒಗ್ಗಟ್ಟಿನಿಂದ ಬದುಕಬೇಕು. ವಾಲ್ಮೀಕಿ ಅವರ ಸಿದ್ಧಾಂತವನ್ನು ನಮ್ಮ ಜೀವನದಲ್ಲಿ ಅಳವಡಿಕೊಳ್ಳುವ ಮೂಲಕ ಮೂಢ ನಂಬಿಕೆಯಿಂದ ಹೊರಬರಬೇಕು ಎಂದು ಹೇಳಿದರು.

ಸರ್ಕಾರದ ಯೋಜನೆಗಳನ್ನು ಪಡೆದುಕೊಳ್ಳಿ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಕೆಲವೇ ಜಾತಿ, ಧರ್ಮದ ಆಧಾರದಲ್ಲಿ ಮನುಷ್ಯ ಬದುಕಲು ಸಾಧ್ಯವಿಲ್ಲ. ಶಿಕ್ಷಣ ನಮ್ಮ ಮೂಲ ಮುದ್ರೆಯಾಗಬೇಕು. ಶಿಕ್ಷಣ ಪಡೆದು ಸಮಾಜವನ್ನು ಮುನ್ನಡೆಸಬೇಕು. ಇತಿಹಾಸವನ್ನು ತಿಳಿದು ಬದುಕಿದಾಗ ಸಮುದಾಯವು ಮುಂದೆ ಬರುತ್ತದೆ. ಇದರ ಜೊತೆಗೆ ಸರ್ಕಾರದ ಯೋಜನೆಗಳನ್ನು ಸಮುದಾಯ ಜನರು ಪಡೆದುಕೊಳ್ಳಬೇಕು. ಸಮಾಜದಲ್ಲಿ ಸಮಾನತೆಗಾಗಿ ನಮ್ಮ ಸರಕಾರ ಅನೇಕ ಯೋಜನೆಗಳನ್ನು ನೀಡುತ್ತಿದೆ. ಇದರಲ್ಲಿ ತಮ್ಮ ಏಳಿಗೆಗೆ ಯಾವ್ಯಾವ ಯೋಜನೆಗಳಿವೆ ಎಂಬುದನ್ನು ಅರಿತು ಪಡೆದುಕೊಂಡರೆ ಮಾತ್ರ ಸಮುದಾಯಗಳ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರು.

ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಸದಾಚಾರದಿಂದ ಬದುಕುವಂತಹ ಮನುಕುಲಕ್ಕೆ ರಾಮಾಯಣ ಮಹಾಗ್ರಂಥವನ್ನು ಕೊಟ್ಟಂತಹ ಮಹಾನ್ ವ್ಯಕ್ತಿ ಮಹರ್ಷಿ ವಾಲ್ಮೀಕಿ. ಅವರ ಆದರ್ಶಗಳೇ ನಮಗೆ ಸ್ಫೂರ್ತಿ, ಅವರು ನಡೆದು ಬಂದ ಹಾದಿಯಲ್ಲಿ ನಾವು ಜೀವನವನ್ನು ನಡೆಸೋಣ ಎಂದರು. ಕರ್ನಾಟಕ ರಾಜ್ಯ ಕಾನೂನು ವಿವಿ ಪ್ರಾಧ್ಯಾಪಕ ಡಾ.ಡಿ.ರಂಗ ಸ್ವಾಮಿ ಉಪನ್ಯಾಸ ನೀಡಿದರು. ಬಳಿಕ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪರಿಶಿಷ್ಟ ವರ್ಗದ ಶಾಲೆಗಳ ಪ್ರಾಧ್ಯಾಪಕರನ್ನು ಅಭಿನಂದಿಸಲಾಯಿತು. ಹಿರಿಯ ಶಾಸಕರಾದ ಜಿ.ಟಿ.ದೇವೇ ಗೌಡ, ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಕೆ.ಶಿವಕುಮಾರ್, ಡಿಸಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಎಸ್‌ಪಿ ಎನ್. ವಿಷ್ಣುವರ್ಧನ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಅಧಿಕಾರಿಗಳಾದ ಎಂ.ಕೆ.ಮಲ್ಲೇಶ್, ಸಿ.ಶಿವಕುಮಾರ್ ಹಾಗೂ ಸಮುದಾಯದ ಮುಖಂಡರು ಇದ್ದರು.

ಜಗತ್ತು ಮಾನವೀಯ ಧರ್ಮದಡಿ ಸಾಗಬೇಕೆಂದರು

ಮೈಸೂರು, ಅ.7– ಜಗತ್ತು ಮಾನವೀಯ ಧರ್ಮದ ನಡೆಯಲ್ಲಿ ಸಾಗಬೇಕೆಂದು ಸಾರಿದ ಮಹರ್ಷಿ ವಾಲ್ಮೀಕಿ ಅವರ ಸಂದೇಶ, ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಕಲಾಮಂದಿರದಲ್ಲಿ ಮಂಗಳವಾರ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗತ್ತು ಮೆಚ್ಚುವಂತಹ ಮಹಾನ್ ಕವಿ ಮಹರ್ಷಿ ವಾಲ್ಮೀಕಿ ಅವರು ಬರೆದ ರಾಮಾಯಣವು ಕಷ್ಟದಲ್ಲಿ ಅರಳಿದ ಮಹಾಕಾವ್ಯ. ಜಗತ್ತಿಗೆ ಮಾನವೀಯ ಧರ್ಮದ ಮಹತ್ವ ಸಾರಿದ ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳನ್ನು ಪಾಲಿಸಬೇಕು ಎಂದರು.

ದೇಶಾದ್ಯಂತ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವೈಭವದಿಂದ ಆಚರಿಸಲಾಗುತ್ತಿದೆ. ಅವರೆಂದೂ ಜಗತ್ತು ಮೆಚ್ಚುವಂತಹ ಮಹಾಕವಿ. ಧರ್ಮ ಪಾಲಿಸುವುದರ ಹಿಂದೆ ಲಾಭ-ನಷ್ಟ ಅಡಗಿದೆ ಎಂಬುದನ್ನು ರಾಮಾಯಣದಲ್ಲಿ ಅಡಗಿದೆ. ನಮ್ಮ ಕರ್ಮಕ್ಕೆ ತಕ್ಕ ಫಲ ದೊರಕುತ್ತದೆ ಎಂಬ ಸಂದೇಶವನ್ನು ವಾಲ್ಮೀಕಿಯವರು ತಿಳಿಸಿಕೊಟ್ಟಿದ್ದಾರೆ. ವಾಲ್ಮೀಕಿ ಜಯಂತಿ ಆಚರಿಸಿ ಸುಮ್ಮನಾಗದೆ ಅವರ ವಾಲ್ಮೀಕಿ ಅವರ ಬದುಕು ಹಾಗೂ ರಾಮಾಯಣದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಅರಿತುಕೊಂಡು ತಮ್ಮ ಬದುಕಿನಲ್ಲೂ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಬಹಳಷ್ಟು ಜಯಂತಿ ಕಾರ್ಯಕ್ರಮಗಳಲ್ಲಿ ಆಸನಗಳು ಖಾಲಿ ಇರುತ್ತವೆ. ಆದರೆ ಇಂದು ಸಭಾಂಗಣ ಭರ್ತಿಯಾಗಿರುವುದು ಸಂತಸದ ಸಂಗತಿ. ನಾಯಕ ಸಮಾಜದೊಂದಿಗೆ ನನಗೆ ಆತ್ಮೀಯ ಬಂಧವಿದೆ. ಕ್ಷೇತ್ರದ ಜನ ನಮ್ಮ ಬಗ್ಗೆ ಅಪಾರ ನಂಬಿಕೆ ಇಟ್ಟಿದ್ದಾರೆ. ನಾನೂ ಕೂಡ ಅವರ ವಿಶ್ವಾಸ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದೇನೆ. ಜಗದ ರತ್ನ ಮಹರ್ಷಿ ವಾಲ್ಮೀಕಿ ಅವರ ತತ್ವ-ಸಂದೇಶಗಳನ್ನು ಅರಿತು ಮುನ್ನಡೆಯುವುದರ ಜೊತೆಗೆ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕಲ್ಪಿಸುವುದಕ್ಕೆ ಆದ್ಯತೆ ನೀಡಿ ಎಂದು ಸಲಹೆ ನೀಡಿದರು.

ಶೀಘ್ರ ಪುತ್ಥಳಿ ಅನಾವರಣ: ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣವನ್ನು ಶೀಘ್ರದಲ್ಲೇ ಮಾಡಲಾಗುವುದು. ಈಗಾಗಲೇ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದು, ಕೆತ್ತನೆ ಕೆಲಸ ಶುರುವಾಗಿದೆ. ಈ ಮೂಲಕ ಬಹು ವರ್ಷಗಳ ಬೇಡಿಕೆ ಶೀಘ್ರ ಈಡೇರಲಿದೆ ಎಂದು ಜಿಟಿಡಿ ಇದೇ ವೇಳೆ ತಿಳಿಸಿದರು.

ಅದ್ಧೂರಿ ಮೆರವಣಿಗೆ...



ಮಹರ್ಷಿ ವಾಲ್ಮೀಕಿ ಜಯಂತಿ ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ಅದ್ಧೂರಿ ಮೆರವಣಿಗೆ ನಡೆಸಲಾಯಿತು. ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವುಳ್ಳ ಅಲಂಕೃತ ಬೆಳ್ಳಿ ರಥದೊಂದಿಗೆ ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ, ಪೂಜಾ ಕುಣಿತ, ನಗಾರಿ, ಗಾರುಡಿ ಗೊಂಬೆ ಸೇರಿದಂತೆ ಹತ್ತಾರು ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿ ಸಾಂಸ್ಕೃತಿಕ ಮೆರಗು ನೀಡಿದವು. ಮಹರ್ಷಿ ವಾಲ್ಮೀಕಿ, ಬೇಡರ ಕಣ್ಣಪ್ಪ, ಬಸವಣ್ಣ, ಗಂಡುಗಲಿ ಕುಮಾರರಾಮ ಇನ್ನಿತರ ಮಹನೀಯರ ವೇಷದಲ್ಲಿದ್ದ ಕಲಾವಿದರು ನೋಡುಗರ ಗಮನ ಸೆಳೆದರೆ, ಮಹಿಳೆಯರು, ಮಕ್ಕಳು ಕಳಶ ಹೊತ್ತು ಸಾಗಿದರು. ಮೆರವಣಿಗೆಯುದ್ದಕ್ಕೂ ವಾಲ್ಮೀಕಿ ಮಹಾರಾಜರಿಗೆ ಜೈ ಎನ್ನುವ ಜೈಕಾರ ಮೊಳಗಿತ್ತು.

ಇಂದು ಲೋಕಾಯುಕ್ತ ದೂರು ಸ್ವೀಕಾರ

ಮೈಸೂರು: ಕರ್ನಾಟಕ ಲೋಕಾ ಯುಕ್ತ ಮೈಸೂರು ವಿಭಾಗ ಅಧಿಕಾರಿ ಗಳಿಂದ ಅ.8ರಂದು ಬೆಳಗ್ಗೆ 11 ಗಂಟೆ ಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಪಂಚಾಯತ್ ಸಭಾಂ ಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿ ರುವ ಸಾರ್ವಜನಿಕ/ ಸರ್ಕಾರಿ ಅಧಿ ಕಾರಿ/ ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉದೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಚ್.ಡಿ ಪದವಿ

ಮೈಸೂರು, ಅ. 7– ಪ್ರೊ ನಿರ್ಮಲ ರಾಜು ಅವರ ಮಾರ್ಗದರ್ಶನದಲ್ಲಿ ಆರ್. ಲೋಕೇಶ್ ಮೂರ್ತಿ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಅವಧಿ ವಿಸ್ತರಣೆ

ಮೈಸೂರು: ಮೈಸೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ (ವೃತ್ತಿ ಪರ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳಿಗೆ ಮತ್ತು ಇತರೆ ಜನಾಂಗ ಗಳಿಗೆ ಸೇರಿದ ವಿದ್ಯಾರ್ಥಿ ಗಳಿಂದ 2025-26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಅ.14ರವರೆಗೆ ವಿಸ್ತರಿಸಲಾಗಿದೆ. ಮಾಹಿತಿಗೆ ಸಹಾಯವಾಣಿ ಸಂಖ್ಯೆ 8050770004, 8050770005 ಸಂಪರ್ಕಿಸಬಹುದು.

ಬೂತ್ ಅಭಿಯಾನ, ಸದಸ್ಯತ್ವ ಅಭಿಯಾನ, ಮಹಿಳಾ ಗ್ಯಾರಂಟಿ ಅಭಿಯಾನದ ಮೂಲಕ ಕಾಂಗ್ರೆಸ್ ಪಕ್ಷ ಸಂಘಟಿಸಲು ನಿರ್ಧಾರ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ವಿಶೇಷ ಸಭೆ ನಡೆಯಿತು.

ಮೈಸೂರು,ಅ.7(ಜಿಎ)–ಬೂತ್ ಅಭಿಯಾನ, ಸದಸ್ಯತ್ವ ಅಭಿಯಾನ, ಮಹಿಳಾ ಗ್ಯಾರಂಟಿ ಅಭಿಯಾನ ಮೂಲಕ ಕಾಂಗ್ರೆಸ್ ಪಕ್ಷ ಸಂಘಟಿಸಲು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಹಾಗೂ ಮೈಸೂರು ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಉಸ್ತುವಾರಿಯೂ ಆದ ನೀತಾ ಶೈಲಾ ಡಿಸೋಜಾ ಕರೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಮಹಿಳಾ ಕಾಂಗ್ರೆಸ್ ಘಟಕವನ್ನು ಬಲಪಡಿಸುವ ನಿಟ್ಟಿನಲ್ಲಿ ಎಐಸಿಸಿ ಮತ್ತು ಕೆಪಿಸಿಸಿ ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆ ಕಾರ್ಯಕ್ರಮದ ಪ್ರಾರಂಭದಲ್ಲಿ ಮಹಿಳೆಯರನ್ನು ಪಕ್ಷಕ್ಕೆ ನೋಂದಾಯಿಸಿಕೊಳ್ಳುವ ಕಾರ್ಯಕ್ರಮ ಜರುಗುತ್ತಿದೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಸೌಮ್ಯರೆಡ್ಡಿ ಅವರು ಅಧಿಕಾರ ವಹಿಸಿಕೊಂಡ ಮೇಲೆ ಮೈಸೂರಿನಲ್ಲಿ ಒಂದು ಸಮಾವೇಶ ಮಾಡುವ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ. ಅದನ್ನು ಸಂಪೂರ್ಣವಾಗಿ ಮಹಿಳಾ ಕಾಂಗ್ರೆಸ್ ಯಶಸ್ವಿಗೊಳಿಸಬೇಕು ಎಂದು ಅವರು ಸೂಚನೆ ನೀಡಿದರು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮಹಿಳಾ ಘಟಕವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ರಾಷ್ಟ್ರದಾದ್ಯಂತ ಮತ್ತು ರಾಜ್ಯದಾದ್ಯಂತ ಮಹಿಳೆಯರನ್ನು ಪಕ್ಷ ಸಂಘಟನೆಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಆ ಮೂಲಕ ಮುಂದಿನ ಚುನಾವಣೆಗಳಲ್ಲಿ ಪಕ್ಷಕ್ಕೆ ಶಕ್ತಿ ತುಂಬಲು ಬೂತ್ ಅಭಿಯಾನ, ಹೊಸ ಸದಸ್ಯತ್ವ ಅಭಿಯಾನ, ಮಹಿಳಾ ಗ್ಯಾರಂಟಿ ಅಭಿಯಾನ, ಹೊಸ ಪದಾಧಿಕಾರಿಗಳಿಗೆ ಅವಕಾಶ, ಸಕ್ರಿಯವಲ್ಲದ ಪದಾಧಿಕಾರಿಗಳಿಗೆ ಬದಲಿ ವ್ಯವಸ್ಥೆ ಹೀಗೆ ಇನ್ನಷ್ಟು ಹೊಸ ಆಲೋಚನೆಗಳ ಮೂಲಕ ಮೈಸೂರು ಜಿಲ್ಲೆಯಲ್ಲಿ ಮಹಿಳಾ ಕಾಂಗ್ರೆಸ್ ಅನ್ನು ಮತ್ತಷ್ಟು ಸನ್ನದ್ಧಗೊಳಿಸಲು ಹೊಸ ಕಾರ್ಯಸೂಚಿಗಳ ಬಗ್ಗೆ ಸಭೆಯಲ್ಲಿ ಮಂಡಿಸಿದರು.

ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಅಗ್ರ ಪಾಲನ್ನು ಮಹಿಳಾ ಸಮುದಾಯಕ್ಕೆ ನೀಡಿದ್ದು, ಮುಂದಿನ ದಿನಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇ.50ರಷ್ಟು ಹೆಚ್ಚುಗೊಳಿಸುವ ಹೊಣೆಗಾರಿಕೆ ಪಕ್ಷದ ಮೇಲಿದೆ. ಮುಂಬರುವ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಬಹುಪಾಲು ಮಹಿಳೆಯರ ಪಾತ್ರವೇ ಹೆಚ್ಚಿದ್ದು, ಕಾಂಗ್ರೆಸ್ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ಕೊಟ್ಟಿದೆ ಎಂದು ತಿಳಿಸಿದರು.

ಮಹಿಳಾ ಕಾಂಗ್ರೆಸ್ ಸಭೆಯಲ್ಲಿ ಚರ್ಚೆ

ಪಕ್ಷದ ಒಳಗಿದ್ದುಕೊಂಡು ಪಕ್ಷದ್ರೋಹಿ ಚಟುವಟಿಕೆ ನಡೆಸುವುದನ್ನು ನಾವು ಸಹಿಸುವುದಿಲ್ಲ ಹಾಗೂ ಅಂತವರ ವಿರುದ್ಧ ಶಿಸ್ತು ಕ್ರಮಕ್ಕೆ ಹಿಂಜರಿಯುವುದಿಲ್ಲ ಎಂದ ಅವರು, ಬಿಜೆಪಿಯಲ್ಲಿ ಗೂಢಚಾರಿಕೆ ತಂಡ ಚಾಲ್ತಿಯಲ್ಲಿದ್ದು, ಅದು ನಮ್ಮ ಚಟುವಟಿಕೆಗಳನ್ನು ಸದಾ ಗಮನಿಸುತ್ತಿವೆ. ಹಾಗಾಗಿ ನಾವು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂದು ಕಾರ್ಯಕರ್ತರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಹಿಳಾ ಪದಾಧಿಕಾರಿಗಳಾದ ಶ್ರೀಮತಿ ಸುಧಾ ಮಹದೇವಯ್ಯ, ಶೋಭಾ, ಸುಶೀಲಾ ನಂಜಪ್ಪ, ಮಲ್ಲಳ್ಳಿ ಪುಷ್ಪ, ವಿಜಯಲಕ್ಷ್ಮಿ, ಮನೋನ್ಮಣಿ, ತನುಜಾ ಮಹೇಶ್, ಕೋಮಲ, ಮಂಜುಳಾ, ಜಯಲಕ್ಷ್ಮಿ, ಮಹಾದೇವಮ್ಮ, ಮಾಯಮ್ಮ, ಅಂಜು ಫಾತಿಮಾ ಮತ್ತಿತರರು ಉಪಸ್ಥಿತರಿದ್ದರು.

'ಮುನ್ನೋಟ' ಪುಸ್ತಕ ಬಿಡುಗಡೆ

ನಾಪೋಕ್ಲು: ಕಾಂತೂರು ಮೂರ್ನಾಡು ಗ್ರಾಪಂ ವತಿಯಿಂದ ಪಂಚಾಯ್ತಿಯ ವಿಶೇಷ ಸಾಧನೆ, ಕೆಲಸ ಕಾರ್ಯಗಳ ಮಾಹಿತಿಯನ್ನು ಒಳಗೊಂಡ 'ಮುನ್ನೋಟ' ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಪಂಚಾಯತಿ ಸಭಾಂಗಣದಲ್ಲಿ ಪಂಚಾಯತಿ ಅಧ್ಯಕ್ಷ ಕುಶನ್.ರೈ ಬಿ ಎಸ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಆಯೋಜಿಸಿದ್ದ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಾಮಾನ್ಯ ಸಭೆಯಲ್ಲಿ ಮುನ್ನೋಟ ಪುಸ್ತಕ ಅನಾವರಣಗೊಳಿಸಲಾಯಿತು.

ಸಭೆಯಲ್ಲಿ ಪಿಡಿಓ ಚಂದ್ರಮೌಳಿ ಅವರು ಮಾತನಾಡಿ ಕಳೆದ 2020–21ರಿಂದ 2025–26ನೇ ಸಾಲಿನಲ್ಲಿ ಅತ್ಯುತ್ತಮ ಸಮಾಜಮುಖಿ ಕೆಲಸಗಳು ಉತ್ತಮವಾಗಿ ಕಾರ್ಯರೂಪಕ್ಕೆ ತರಲಾಗಿದೆ ಎಂದರು. ಕೊಡಗಿನ ಪಂಚಾಯಿತಿಗಳಲ್ಲಿ ಇದೇ ಮೊದಲ ಬಾರಿಗೆ ಪಂಚಾಯಿತಿಯ ಐದು ವರ್ಷಗಳ ಸಾಧನೆ ಕಾರ್ಯವನ್ನು ಬರವಣಿಗೆಯ ರೂಪದಲ್ಲಿ 22 ಪುಟಗಳ ಮುನ್ನೋಟ ಪುಸ್ತಕವನ್ನು ಪ್ರಕಟಿಸಲಾಗಿದೆ ಎಂದು ಅವರು ತಿಳಿಸಿದರು.

ಹಿಡುವಳಿದಾರರಿಗೆ ಜಮ್ಮಾ ಬಾಣೆ ಹಕ್ಕುಗಳು

ಕಂದಾಯ ಸಚಿವ ಕೃಷ್ಣ ಬೈರೇಗೌಡರ ನೇತೃತ್ವದ ಸಭೆಯಲ್ಲಿ ಸಮ್ಮತಿ

ಅ.27ಕ್ಕೆ ಮತ್ತೊಂದು ಸುತ್ತಿನ ಸಭೆಗೆ ನಿರ್ಧಾರ



ಕಂದಾಯ ಸಚಿವ ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ ನಡೆದ ಸಭೆ.

ಮಡಿಕೇರಿ, ಅ.7– ಕೊಡಗು ಜಿಲ್ಲೆಗೆ ಸಂಬಂಧಿಸಿದ ಜಮ್ಮಾ ಬಾಣೆ ಸಮಸ್ಯೆಗಳನ್ನು ಬಗೆಹರಿಸಲು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಮೊದಲ ಹಂತದ ಸಭೆ ನಡೆಸಲಾಗಿದ್ದು, ಎಲ್ಲಾ ಸಮಿತಿ ಸದಸ್ಯರು ಕೂಡ ಜಮ್ಮಾ ಬಾಣೆ ಹಕ್ಕುಗಳು ಹಿಡುವಳಿದಾರರಿಗೇ ಸೇರಬೇಕೆಂದು ಒಪ್ಪಿಗೆ ಸೂಚಿಸಿದ್ದಾರೆ.

ಕಂದಾಯ ಕಾಯಿದೆಗೆ ಯಾವ ರೀತಿಯ ತಿದ್ದುಪಡಿ ತರಬೇಕೆಂಬ ಬಗ್ಗೆ ಅ.27ರಂದು ಮತ್ತೊಂದು ಸುತ್ತಿನ ಸಭೆ ನಡೆಯಲಿದ್ದು ಕಂದಾಯ ಕಾಯಿದೆ ತಿದ್ದುಪಡಿಗಳು ಬಹುತೇಕ ಪೂರ್ಣವಾಗಲಿದೆ. ಮುಂದಿನ ಅಧಿವೇಶನದಲ್ಲಿ ಕಂದಾಯ ತಿದ್ದುಪಡಿ ಕಾಯಿದೆ ಸದನದಲ್ಲಿ ಮಂಡನೆಯಾಗಲಿದೆ ಎಂದು ವಿರಾಜಪೇಟೆ ಕ್ಷೇತ್ರ ಶಾಸಕ ಹಾಗೂ ಆಯ್ಕೆ ಸಮಿತಿ ಸದಸ್ಯರಾದ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಮಾಹಿತಿ ನೀಡಿದ್ದಾರೆ.

ಕಳೆದ ಅಧಿವೇಶನದಲ್ಲಿ ಚರ್ಚೆ ನಡೆಸಿ ಆಯ್ಕೆ ಸಮಿತಿ ರಚನೆ ಮಾಡಲಾಗಿತ್ತು ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ವಿಧೇಯಕ ಪರಿಶೀಲನಾ ಸಮಿತಿಯ ಮೊದಲ ಸಭೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದು, ಜಮ್ಮಾ ಬಾಣೆ ಇತಿಹಾಸ, ಜಮ್ಮಾ ಹಿಡುವಳಿದಾರರ ಹಕ್ಕುಗಳು, 1834ರಿಂದ 2025ರವರೆಗಿನ ವಿಚಾರಗಳ ಕುರಿತು ಸ್ಪಷ್ಟ ವಿವರಣೆ ನೀಡಲಾಗಿದೆ. ಈ ಕುರಿತು ಸಮಿತಿ ಸದಸ್ಯರು ಕೂಡ ಒಪ್ಪಿಗೆ ಸೂಚಿಸಿದ್ದಾರೆ ಎಂದು ಪೊನ್ನಣ್ಣ ಹೇಳಿದರು.

ಕಂದಾಯ ಸಮಸ್ಯೆ ಬಗೆಹರಿಕೆಗೆ ಯಾವ ರೀತಿಯ ತಿದ್ದುಪಡಿಗಳನ್ನು ತರಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಅ.27 ರಂದು ತಿದ್ದುಪಡಿ ಮಸೂದೆಗಳ ಬಗ್ಗೆ ಮತ್ತೊಂದು ಸಭೆ ನಡೆಸಿ ಚರ್ಚಿಸಿ ಬಹುತೇಕ ಅಂತಿಮಗೊಳಿಸಲಾಗುತ್ತದೆ. ಮುಂದಿನ ಅಧಿವೇಶನದಲ್ಲಿ ಈ ಮಸೂದೆ ಸದನದಲ್ಲಿ ಮಂಡನೆಯಾಗಲಿದೆ ಎಂದರು.

ಆಯ್ಕೆ ಸಮಿತಿ ಸಭೆಯಲ್ಲಿ ವಿಧಾನ ಸಭೆಯ ಮಾನ್ಯ ಸದಸ್ಯರುಗಳಾದ ಡಾ. ಸಿ.ಎನ್.ಅಶ್ವಥ್ ನಾರಾಯಣ್, ಎಂ.ಟಿ ಕೃಷ್ಣಪ್ಪ, ಅರವಿಂದ ಬೆಲ್ಲದ, ಡಾ. ಶ್ರೀನಿವಾಸ ಎನ್.ಟಿ, ಭೀಮಾಣ್ಣ ಟಿ. ನಾಯ್ಕ, ಪ್ರಾದೇಶಿಕ ಆಯುಕ್ತ ಆದಿತ್ಯ ಆಮ್ಲ ಬಿಸ್ವಾಸ್, ಕೊಡಗು ಜಿಲ್ಲಾಧಿಕಾರಿ ವೆಂಕಟ್ ರಾಜ, ಕಂದಾಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳ ಸಭೆಯ ಸಚಿವಾಲಯದ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಜಗಳ ಬಿಡಿಸಲು ಬಂದ ವ್ಯಕ್ತಿ ಮೇಲೆ ಕತ್ತಿಯಿಂದ ಹಲ್ಲೆ ನಡೆಸಿದ ಪತಿಗೆ ಜೀವಾವಧಿ ಶಿಕ್ಷೆ

ವಿರಾಜಪೇಟೆ, ಅ.7– ಪತಿ ಮತ್ತು ಪತ್ನಿಯರ ನಡುವೆ ಜಗಳ ಬಿಡಿಸಲು ಬಂದ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ ಪತಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 25 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದೆ.

ಪೊನ್ನಂಪೇಟೆ ತಾಲೂಕಿನ ಕುಟ್ಟದ ತೋಟವೊಂದರ ಲೈನ್ ಮನೆಯಲ್ಲಿ ವಾಸ ವಿದ್ದ ಪಂಜರಿ ಎರವರ ಸುಬ್ರಮಣಿ ಅಲಿಯಾಸ್ ಚಂದ ಎಂಬಾತನೇ ಜೀವಾವಧಿ ಶಿಕ್ಷೆಗೆ ಗುರಿಯಾದ ವ್ಯಕ್ತಿ. ಪಂಜರಿ ಎರವರ ಚಾಮಿ ಅಲಿಯಾಸ್ ಬಸವ ಹಲ್ಲೆಗೊಳಗಾದ ವ್ಯಕ್ತಿ.

2022 ಜೂ.30 ರಂದು ಸುಬ್ರಮಣಿ ಅಲಿಯಾಸ್ ಚಂದನು ಹಾಗೂ ಪತ್ನಿ ನಡುವೆ ಜಗಳವಾಗುತ್ತಿದ್ದಾಗ, ಕಲಹವನ್ನು ತಪ್ಪಿಸಲು ಸಮೀಪದ ಲೈನ್ ಮನೆಯಲ್ಲಿದ್ದ ಚಾಮಿ ಅಲಿಯಾಸ್ ಬಸವ ಪ್ರಯತ್ನಿಸಿದ್ದಾನೆ. ಇದರಿಂದ ಕೋಪಗೊಂಡ ಚಂದ ಕತ್ತಿಯಿಂದ ಬಸವನ ಮೇಲೆ ಹಲ್ಲೆ ನಡೆಸಿದಾಗ ಬಸವನ ಕೈ ತುಂಡಾಗಿದೆ. ಕುಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕುಟ್ಟ ಪಿಎಸ್ಐ ಆಗಿದ್ದ ಸಣ್ಣಪ್ಪ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ವಿರಾಜಪೇಟೆಯ 2ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ ನ್ಯಾಯಾಧೀಶರಾದ ಎಸ್. ನಟರಾಜು ಅವರು ಪ್ರಕರಣದ ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ 25 ಸಾವಿರ ರೂ ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 6 ತಿಂಗಳ ಕಾಲ ಹೆಚ್ಚುವರಿ ಶಿಕ್ಷೆ ವಿಧಿಸುವಂತೆ ತೀರ್ಪು ನೀಡಿದ್ದಾರೆ. ಸರಕಾರಿ ಅಭಿಯೋಜಕ ಯಾಸೀನ್ ಅಹಮ್ಮದ್ ಅವರು ವಾದಿಸಿದ್ದರು.

ದಿಡ್ಡಳ್ಳಿ ಹೋರಾಟಗಾರ್ತಿ ಮುತ್ತಮ್ಮರಿಗೆ ಮುಖ್ಯಮಂತ್ರಿಗಳಿಂದ ವಾಲ್ಮೀಕಿ ಪ್ರಶಸ್ತಿ ಪ್ರದಾನ



ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವ ಶಾಸಕ ಪೊನ್ನಣ್ಣ.

ಮಡಿಕೇರಿ, ಅ.7– ದಿಡ್ಡಳ್ಳಿ ನಿರಾಶ್ರಿತರ ಹೋರಾಟಗಾರ್ತಿ ಎಂದೇ ಗುರುತಿಸಿಕೊಂಡಿರುವ ಕೊಡಗಿನ ಜೆ.ಕೆ.ಮುತ್ತಮ್ಮ ಅವರಿಗೆ ಬೆಂಗಳೂರಿನ ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಿದರು.

ರಾಜ್ಯ ಸರ್ಕಾರದಿಂದ ನೀಡಲಾಗುವ ವಾಲ್ಮೀಕಿ ಪ್ರಶಸ್ತಿ ಈ ಬಾರಿ ಸಂಘಟನಾ ಕ್ಷೇತ್ರಕ್ಕೆ ಕೊಡಗಿನ ದಿಡ್ಡಳ್ಳಿ ಹೋರಾಟಗಾರ್ತಿ ಜೆ.ಕೆ ಮುತ್ತಮ್ಮ ಅವರನ್ನು ಪರಿಗಣಿಸಲಾಗಿತ್ತು. ಜೆ.ಕೆ. ಮುತ್ತಮ್ಮ ಈ ಹಿಂದೆ ನಡೆದಿದ್ದ ದಿಡ್ಡಳ್ಳಿ ಜನರ ಪುನರ್ವಸತಿಗಾಗಿ ತೀವ್ರ ಸ್ವರೂಪದ ಹೋರಾಟ ನಡೆಸಿದ್ದರು. ಈ ಹೋರಾಟದ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದ ಮುತ್ತಮ್ಮ ಅಂದಿನ ಸರ್ಕಾರವನ್ನೇ ದಿಡ್ಡಳ್ಳಿ ಕಡೆ ತಿರುಗಿ ನೋಡುವಂತೆ ಮಾಡಿತ್ತು. ಹೋರಾಟಕ್ಕೆ ಮಣಿದ ಸರಕಾರ ಕುಶಾಲನಗರ ಸಮೀಪದ ಬಸವನಹಳ್ಳಿಯಲ್ಲಿ ಪುನರ್ವಸತಿ ಕೇಂದ್ರವನ್ನು ಆರಂಭಿಸಿ ನಿರಾಶ್ರಿತರಿಗೆ ಸಂಪೂರ್ಣ ಸವಲತ್ತುಗಳಿರುವ ನಿವೇಶನ ಹಾಗೂ ಮನೆಯನ್ನು ನಿರ್ಮಿಸಿ ಕೊಟ್ಟಿದೆ.

ಹೋರಾಟಗಾರ್ತಿ ಜೆ.ಕೆ.ಮುತ್ತಮ್ಮ ಹಲವಾರು ಸಂಘ–ಸಂಸ್ಥೆಗಳಲ್ಲಿ ಗುರುತಿಸಿಕೊಂಡು, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಸಂಘಟನಾ ಚಾತುರ್ಯಕ್ಕಾಗಿ ವಾಲ್ಮೀಕಿ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ನೀಡಿದೆ.

ಮಡಿಕೇರಿ ದಸರಾ ಜನೋತ್ಸವದಲ್ಲಿ ಅವಾಂತರ

ದಶಮಂಟಪಗಳ 62 ಮಂದಿ ಸದಸ್ಯರ ವಿರುದ್ಧ ಎಫ್ಐಆರ್ ದಾಖಲು



ಮಡಿಕೇರಿ,ಅ.7– ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆದಿರುವ ನಡುವೆಯೇ ಪೊಲೀಸ್ ಇಲಾಖೆ ದಶ ಮಂಟಪ ಸಮಿತಿ ಪದಾಧಿಕಾರಿಗಳ ಮೇಲೆ ಕೇಸ್ ದಾಖಲಿಸಿದೆ.

ಧ್ವನಿವರ್ಧಕ ಬಳಕೆ ನಿಯಮ ಉಲ್ಲಂಘನೆ ಮಾಡಿರುವ ದಶ ಮಂಟಪಗಳ ಒಟ್ಟು 62 ಮಂದಿ ಸದಸ್ಯರ ವಿರುದ್ಧ ಎಫ್ಐಆರ್ ದಾಖಲಾಗಿದೆ.

ರಾತ್ರಿ 10 ಗಂಟೆ ನಂತರ ಸಾರ್ವಜನಿಕ ಸ್ಥಳದಲ್ಲಿ ಹೆಚ್ಚಿನ ಪ್ರಮಾಣದ ಧ್ವನಿ ಹೊರಸೂಸುವ ಡಿಜೆ ಧ್ವನಿವರ್ಧಕವನ್ನು ಬಳಸಬಾರದೆಂಬ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಅ.2ರಂದು ದಶಮಂಟಪ ಶೋಭಾಯಾತ್ರೆ ವೇಳೆ ಧ್ವನಿವರ್ಧಕ ಬಳಸಲಾಗಿದೆ ಎಂದು ಪೊಲೀಸರು ನೀಡಿದ ಸ್ವಯಂ ಪ್ರೇರಿತ ದೂರಿನಡಿ 10 ಮಂಟಪ ಸಮಿತಿಗಳ ವಿರುದ್ಧವೂ ಪ್ರತ್ಯೇಕ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ.

10 ಮಂಟಪಗಳ ಪದಾಧಿಕಾರಿ ಸೇರಿದಂತೆ ಧ್ವನಿವರ್ಧಕ ಮಾಲೀಕರುಗಳು ಒಳಗೊಂಡಂತೆ ಮಡಿಕೇರಿ ನಗರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಧ್ವನಿವರ್ಧಕ ಬಳಕೆ ಕುರಿತು ಪೂರ್ವಭಾವಿ ಸಭೆಗಳನ್ನು ನಡೆಸಿ ಎಚ್ಚರಿಕೆ ನೀಡಿದ್ದರೂ ಧ್ವನಿವರ್ಧಕ ಬಳಕೆಯಾಗಿದೆ. ಇದನ್ನು ಸ್ಥಗಿತಗೊಳಿಸುವಂತೆ ನೀಡಿದ ಸೂಚನೆಯನ್ನು ಪಾಲಿಸದೆ ಆದೇಶ ಉಲ್ಲಂಘನೆಯೊಂದಿಗೆ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪೇಟೆ ಶ್ರೀರಾಮಮಂದಿರ, ದೇಚೂರು ಶ್ರೀರಾಮ ಮಂದಿರ, ದಂಡಿನ ಮಾರಿಯಮ್ಮ, ಕಂಚಿ ಕಾಮಾಕ್ಷಿ, ಕೋದಂಡರಾಮ ದೇವಾಲಯ ಮಂಟಪ ಸಮಿತಿಗಳ ತಲಾ 6 ಮಂದಿ, ಕರವಲೆ ಭಗವತಿ, ಕೋಟೆ ಮಾರಿಯಮ್ಮ ಮಂಟಪ ಸಮಿತಿಗಳ ತಲಾ 7 ಮಂದಿ, ಕೋಟೆ ಗಣಪತಿಯ 8 ಮಂದಿ, ಚೌಡೇಶ್ವರಿ ಹಾಗೂ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯ ಮಂಟಪ ಸಮಿತಿಯ ತಲಾ 5 ಮಂದಿ ವಿರುದ್ಧ ಇದೀಗ ಸೆಕ್ಷನ್ 37, 109, ಬಿಎನ್ಎಸ್ 292 ಅಡಿ ಪ್ರಕರಣಗಳು ದಾಖಲಾಗಿವೆ. ಈ ಕುರಿತು ಎಲ್ಲಾ ಮಂಟಪ ಸಮಿತಿಗಳಿಗೆ ಪೊಲೀಸ್ ಇಲಾಖೆಯಿಂದ ನೋಟೀಸ್ ನೀಡಲಾಗಿದ್ದು, ಈ ಕ್ರಮಕ್ಕೆ ದಶ ಮಂಟಪ ಸಮಿತಿ ಅಸಮಾಧಾನ ವ್ಯಕ್ತಪಡಿಸಿವೆ.

ರಾಷ್ಟ್ರಪ್ರಶಸ್ತಿ ಪುರಸ್ಕೃತೆ ಕಂದಿಲು ನಿರ್ದೇಶಕರಿಗೆ ಸನ್ಮಾನ



ಕಂದಿಲು ಚಿತ್ರದ ನಿರ್ದೇಶಕಿ ಕತ್ತೀರ ಯಶೋಧ ಪ್ರಕಾಶ್‌ರನ್ನು ಸನ್ಮಾನಿಸುತ್ತಿರುವುದು.

ವಿರಾಜಪೇಟೆ, ಅ.7– ನಾವು ಇಂದು ಎಲ್ಲದರಲ್ಲಿಯೂ ಸ್ವದೇಶಿ ಮಾರ್ಗದಲ್ಲಿ ಸಾಗಬೇಕು. ಕಲೆಯನ್ನು ಸಹ ಸ್ವದೇಶಿಯಾಗಿ ಬೆಳೆಸಬೇಕು. ಯಾವುದೇ ವಿದೇಶಿಯ ನೆರಳಿಲ್ಲದೆ ನಾವೇ ಎಲ್ಲದರ ಪ್ರಾಯೋಜಕರಾಗಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದರು.

ಕೊಡವ ಸಮಾಜದಲ್ಲಿ ಕೊಡಗೂ ಕಲಾವಿದರ ಸಂಘ ಮತ್ತು ಗೋಣಿಕೊಪ್ಪ ಪೊಮ್ಮಕ್ಕಡ ಕೂಟದ ಸಹಯೋಗದಲ್ಲಿ 'ಕಂದೀಲು' ಕನ್ನಡ ಚಲನಚಿತ್ರಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದ ನಿರ್ದೇಶಕಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಅವರನ್ನು ಸನ್ಮಾನಿಸಿ ಮಾತನಾಡಿ, ಜೀವನದ ನಿಜವಾದ ಅರ್ಥ ಮತ್ತು ಸದಭಿರುಚಿ ಕಲೆಯಿಂದ ಬರುತ್ತದೆ. ಈ ಕಲೆಯಲ್ಲಿ ಸಾಧನೆ ಮಾಡಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗೆ ಬಾಜನರಾದವರಿಗೆ ನಾವು ಬೆಂಬಲವಾಗಿ ನಿಲ್ಲುವುದು ಪ್ರಮುಖ ವಿಚಾರವಾಗಿದೆ. ಚಲನಚಿತ್ರ ರಂಗದಲ್ಲಿ ಹಾಲಿಹುಡ್ ಬಾಲಿಹುಡ್ ಹೀಗೆ ಅನೇಕ ದೊಡ್ಡ ದೊಡ್ಡ ಚಲನಚಿತ್ರ ತಯಾರಕರಿದ್ದಾರೆ. ಆದರೆ ಸ್ಥಳಿಯವಾಗಿ ತಯಾರಾಗುವ ಸಿನಿಮಾಗಳನ್ನು ಕೆಲವರು ಮಾತ್ರ ನಿರ್ಮಿಸುತ್ತಾರೆ ಹಾಗೂ ಕೆಲವೇ ಜನರು ಪ್ರೋತ್ಸಾಹಿಸುತ್ತಾರೆ. ಆದರೆ ಕೊಡಗಿನಲ್ಲಿ ಚಲನಚಿತ್ರಕ್ಕೆ ಉತ್ತಮ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ಭಾರತ ದೇಶದ ಪ್ರತಿ ಗ್ರಾಮದಲ್ಲಿ ಸಿನಿಮಾ ತಯಾರಿಸಲು ಆಗತ್ಯವಾದ ಕಥೆಗಳಿರುತ್ತದೆ ಅದನ್ನು ಹೊರತರುವುದು ಉತ್ತಮ ಕೆಲಸವಾಗಿರುತ್ತದೆ. ಇಂತಹ ಉತ್ತಮ ಕಥೆ ಹಂದರವಿರುವ ಚಿತ್ರಗಳಿಗೆ ರಾಜ್ಯ ರಾಷ್ಟ್ರ ಮಟ್ಟದಲ್ಲಿ ಪ್ರೋತ್ಸಾಹ ನೀಡು ವುದು ನಮ್ಮ ಅದ್ಯ ಕರ್ತವ್ಯವಾಗಿದೆ ಎಂದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಮಾತನಾಡಿ 'ಕಂದೀಲು' ಎನ್ನುವುದಕ್ಕೆ ಕೆಲವು ಅರ್ಥಗಳಿವೆ. ಅದರಲ್ಲಿ ಬಡತನವನ್ನು ಬಿಂಬಿಸಬಹುದು. ಜೊತೆಗೆ ರೈತನ ದುಡಿಮೆ ಬದುಕು ಇರುತ್ತದೆ. ನಮ್ಮ ಬದುಕು ಸಹ ಅದೇ ಕಂದೀಲಿನ ಬೆಳಕಿನಿಂದ ಅರಂಭವಾಗಿದೆ. ದೀಪವೇ ಗ್ರಾಮಾಂತರ ಬದುಕಿನ ಸೊಗಡನ್ನು ಸಾರುತ್ತದೆ. ನಿರ್ದೇಶಕ ಎ ಟಿ ರಘು ಅವರನ್ನು ಈ ಸಂದರ್ಭ ಸ್ಮರಿಸಿ ಅವರ ಸಾಧನೆಯನ್ನು ಪ್ರಶಂಸಿಸಿದರು. ಇಂದು ಶೇ 62 ರಷ್ಟಿರುವ ರೈತರು 140 ಕೋಟಿ ಜನರಿಗೆ ಉಣ್ಣ ಬಡಿಸುವುದು ಹಿರಿಮೆ. ಕೊಡಗಿನಲ್ಲಿ ರೈತರು ತಮ್ಮ ಕೃಷಿಯೊಂದಿಗೆ ಪ್ರಕೃತಿಯನ್ನು ಸಹ ಸುಂದರವಾಗಿ ಉಳಿಸಿಕೊಂಡು ಬಂದಿದ್ದಾರೆ ಎಂದು.

ವಿಧಾನಪರಿಷತ್ ಸದಸ್ಯರಾದ ಮಂಡೇಪಂಡ ಸುಜಾ ಕುಶಾಲಪ್ಪ, ಗೋಣಿಕೊಪ್ಪ ಕಾವೇರಿ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಕೊಟ್ಟಂಗಡ ವಿಜುದೇವಯ್ಯ, ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚೆರಿಯ ಪಂಡ ಸುರೇಶ್ ನಂಜಪ್ಪ, ಕಲಾವಿದ ಸಂಘದ ಸಂಚಾಲಕ ನೆರವಂಡ ಉಮೇಶ್ ಕಾರ್ಯಕ್ರಮದ ಕುರಿತು ಮಾತನಾಡಿದರು.

ಸಭೆಯಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಕಂದೀಲು ಚಲನ ಚಿತ್ರ ನಿರ್ದೇಶಕಿ ಕೊಟ್ಟುಕತ್ತಿರ ಯಶೋಧ ಪ್ರಕಾಶ್ ಸನ್ಮಾನ ಸ್ವಿಕರಿಸಿ ತಮ್ಮ ಬದುಕಿನ ಸಾಧನೆಯ ಹಾದಿಯನ್ನು ಮೆಲಕು ಹಾಕಿದರು.

ಈ ವೇಳೆ ಬಾಲ ನಟಿ ಕುಶಿ ಕಾವೇರಮ್ಮ ಕ್ರೀಡಾ ಪ್ರಾಧಿಕಾರದ ನೂತನ ಉಪಾಧ್ಯಕ್ಷ ಅರುಣ್ ಮಾಚಯ್ಯ ಬೆಂಗಳೂರು ಕೊಡವ ಸಮಾಜದ ನೂತನ ಅಧ್ಯಕ್ಷ ಚೆರಿಯ ಪಂಡ ಸುರೇಶ್ ನಂಜಪ್ಪ ಕಲಾವಿದೆ ಈರಮಂಡ ಹರಿಣಿ ವಿಜಯರನ್ನು ಸನ್ಮಾನಿಸಲಾಯಿತು.

ಜಿಲ್ಲೆಯಾದ್ಯಂತ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಅದ್ದೂರಿ ಆಚರಣೆ

ಗುಂಡ್ಲುಪೇಟೆಯಲ್ಲೂ ವಾಲ್ಮೀಕಿ ಜಯಂತಿ ಆಚರಣೆ



ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಗುಂಡ್ಲುಪೇಟೆ, ಅ.7– ನಮ್ಮ ದೇಶದ ಆದಿಕವಿ ವಾಲ್ಮೀಕಿ ಮಹರ್ಷಿ ಅವರು ರಚಿಸಿದ ಮಹಾಕಾವ್ಯ ರಾಮಾಯಣ ಇಂದಿಗೂ ಸರ್ವಕಾಲಿಕ ಕಾವ್ಯವಾಗಿದೆ ಎಂದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ತಾಲೂಕು ಆಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಪಟ್ಟಣದ ಗುರುಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಭಾಷಣಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮನೋವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ ಮಂಜುನಾಥ್ ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರು ತಮ್ಮ ರಾಮಾಯಣ ಮಹಾಕಾವ್ಯದ ಮೂಲಕ ನೀಡಿದ ಚಿಂತನೆಗಳು ದಿನೇ ದಿನೇ ಪ್ರಸಿದ್ಧಿಯನ್ನು ಪಡೆದುಕೊಂಡು ಸಮಾಜಕ್ಕೆ ಸರ್ವಕಾಲಕ್ಕೂ ದಾರಿದೀಪವಾಗಿವೆ ಎಂದರು.

ಇದೇ ಸಂದರ್ಭದಲ್ಲಿ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಹಾಗೂ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಪಿ.ಶಶಿಧರ್(ದೀಪು)ಉಪಾಧ್ಯಕ್ಷ ಶ್ರೀನಿವಾಸ್. ಕಣ್ಣಪ್ಪ. ಸದಸ್ಯರಾದ ಪಿ ಗಿರೀಶ್, ಎನ್ ಕುಮಾರ್, ಎಸ್.ಕುಮಾರ್, ಅಣ್ಣಯ್ಯ ಸ್ವಾಮಿ, ಮುಖಂಡರಾದ ಎನ್.ಮಲ್ಲೇಶ್, ಪುರಸಭೆ ಮಾಜಿ ಉಪಾಧ್ಯಕ್ಷ ಕಾರ್ಗಳ್ಳಿ ಸುರೇಶ ಸೇರಿದಂತೆ ಇತರರಿದ್ದರು.



ಚಾಮರಾಜನಗರದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಅ.7– ಜಿಲ್ಲೆಯಾದ್ಯಂತ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭವ್ಯ ಮೆರವಣಿಗೆ ಮತ್ತು ಸಭಾ ಕಾರ್ಯಕ್ರಮಗಳ ಮೂಲಕ ಅದ್ದೂರಿಯಾಗಿ ಅಚರಿಸಲಾಯಿತು.

ಜಿಲ್ಲಾಡಳಿತ, ಜಿಪಂ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಇತರೆ ಗಣ್ಯರು ನಗರದ ಪ್ರವಾಸಿ ಮಂದಿರದಲ್ಲಿ ಬೆಳ್ಳಿರಥದಲ್ಲಿ ಇರಿಸಲಾಗಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮಂಗಳವಾದ್ಯ, ಡೊಳ್ಳುಕುಣಿತ, ಗೊರುಕನ ನೃತ್ಯ, ಗಾರುಡಿಗ ಗೊಂಬೆ, ಕೊಂಬು ಕಹಳೆ, ತಮಟೆ ಹಾಗೂ ಬ್ಯಾಂಡ್‌ಸೆಟ್ ಸೇರಿದಂತೆ ವಿವಿಧ ಆಕರ್ಷಕ ಕಲಾತಂಡಗಳೊಂದಿಗೆ ನಡೆದ ಮರೆವಣಿಗೆಯು ಪ್ರವಾಸಿ ಮಂದಿರದಿಂದ ಆರಂಭಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಭುವನೇಶ್ವರಿ ವೃತ್ತದ ಮೂಲಕ ಪೇಟೆ ಪ್ರೈಮರಿ ಶಾಲೆ ತಲುಪಿತು. ಬಳಿಕ ಪೇಟೆ ಪ್ರೈಮರಿ ಶಾಲಾ ಅವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಜಗತ್ತಿನ ಮಹಾಕಾವ್ಯಗಳಲ್ಲಿ ಒಂದಾಗಿರುವ ರಾಮಾಯಣದಂತಹ ಪವಿತ್ರಗ್ರಂಥ ಸೃಷ್ಟಿಸುವ ಮೂಲಕ ಇಡೀ ಜಗತ್ತಿಗೆ ರಾಮರಾಜ್ಯದ ಪರಿಕಲ್ಪನೆಯನ್ನು ನೀಡಿದವರು ಮಹರ್ಷಿ ವಾಲ್ಮೀಕಿ. ಅವರ ಸುತ್ತಲಿನ ಪರಿಸರದಲ್ಲಿದ್ದ ಋಷಿಗಳ ತಪೋವನದಿಂದ ಜ್ಞಾನ ಸಂಪಾದನೆ ಮಾಡಿದ ವಾಲ್ಮೀಕಿ ಅವರು ಶ್ರೇಷ್ಠ ಋಷಿಗಳೇ ಆಗಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ ಮಹರ್ಷಿ ವಾಲ್ಮೀಕಿಯವರು ರಾಮಾಯಣದ ಮೂಲಕ ಸಮಾಜದಲ್ಲಿ ರಾಜ ಹಾಗೂ ಪ್ರಜೆಗಳ ನಡೆ–ನುಡಿ, ರೀತಿ ನೀತಿ ಹೇಗಿರಬೇಕು ಎಂಬ ಅದರ್ಶ ಪರಿಕಲ್ಪನೆಯನ್ನು ತಿಳಿಸಿಕೊಟ್ಟಿದ್ದಾರೆ. ರಾಮರಾಜ್ಯದಲ್ಲಿ ಪ್ರಜೆಗಳ ಮಾತಿಗೂ ಬೆಲೆ ಇತ್ತು. ಪಿತೃವಾಕ್ಯ ಪರಿಪಾಲನೆಯು ಮುಖ್ಯವಾಗಿತ್ತು. ವಾಲ್ಮೀಕಿ ಅವರ ಮಾರ್ಗದರ್ಶನದಲ್ಲಿ ಎಲ್ಲರೂ ನಡೆಯೋಣ. ಮುಂದಿನ ವರ್ಷದೊಳಗೆ ನಗರದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿಯೂ ನಿರ್ಮಾಣವಾಗಲಿದೆ ಎಂದು ಇದೇ ವೇಳೆ ಹೇಳಿದರು.

ಮುಖ್ಯ ಭಾಷಣ ಮಾಡಿದ ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ಕನ್ನಡ ಬಾರತಿ ಕುವೆಂಪು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಡಾ.ಜಿ.ಪ್ರಶಾಂತನಾಯಕ ಮಾತನಾಡಿದರು. ಇದೇ ವೇಳೆ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಕೊಳ್ಳೇಗಾಲದಲ್ಲಿ ವೈಭವದ ಮೆರವಣಿಗೆ



ಕೊಳ್ಳೇಗಾಲ, ಅ.7– ಕೊಳ್ಳೇಗಾಲ ಪಟ್ಟಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಅಯೋಜಿಸಲಾಗಿದ್ದ ವೈಭವದ ಮೆರವಣಿಗೆಗೆ ವಾಲ್ಮೀಕಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಬೆಳ್ಳಿ ರಥದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವನ್ನಿಟ್ಟು ತೆರಳಿದ ಮೆರವಣಿಗೆಯುದ್ದಕ್ಕೂ ಕಲಾತಂಡಗಳು ಮೆರುಗು ನೀಡಿದವು. ಮಂಗಳವಾದ್ಯಗಳ ಸ್ವಾಗತ, ಯುವಕರು ಮೆರವಣಿಗೆಯುದ್ದಕ್ಕೂ ತಮಟೆ ಸದ್ದಿಗೆ ಕುಣಿದು ಕುಪ್ಪಳಿಸುವ ಮೂಲಕ ಮೆರವಣಿಗೆಗೆ ಕಳೆ ತಂದರು. ಅನೇಕ ಗಣ್ಯರು, ನಾಯಕ ಸಮಾಜದ ಮುಖಂಡರುಗಳು ಮೆರವಣಿಗೆಯುದ್ದಕ್ಕೂ ಸಾಗಿದರು. ಪಟ್ಟಣದ ನಾಯಕರ ಬೀದಿಯಿಂದ ಹೊರಟ ಮೆರವಣಿಗೆ ಕಾವೇರಿ ರಸ್ತೆ, ಚಿಕ್ಕ ನಾಯಕರ ಬೀದಿ, ಚಿನ್ನದ ಅಂಗಡಿ ರಸ್ತೆ, ಮಸೀದಿ ಸರ್ಕಲ್, ಡಾ.ಅಂಬೇಡ್ಕರ್ ರಸ್ತೆ, ಎಡಿಬಿ ಸರ್ಕಲ್, ಐಬಿ ರಸ್ತೆ ಮೂಲಕ ಗುರುಭವನದ ನ್ಯಾಷನಲ್ ಶಾಲಾ ಆವರಣಕ್ಕೆ ಸಾಗಿ ಬಂತು. ಈ ವೇಳೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರುಗಳಾದ ಜಿ.ಎನ್ ನಂಜುಂಡಸ್ವಾಮಿ, ಎಸ್ ಬಾಲರಾಜು, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ರಾಜ್ಯ ಉಪ್ಪಾರ ನಿಗಮ ಮಾಜಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ದತ್ತೇಶ್ ಕುಮಾರ್, ನಾಯಕ ಜನಾಂಗದ ಅಧ್ಯಕ್ಷ ಜಗದೀಶ್ ನಾಯಕ, ನಗರಸಭೆ ಅಧ್ಯಕ್ಷೆ ರೇಖಾ ರಮೇಶ್, ಮಾಜಿ ಅಧ್ಯಕ್ಷರುಗಳಾದ ರಮೇಶ್, ಬಸ್ತಿಪುರ ಶಾಂತರಾಜು, ಸದಸ್ಯರುಗಳಾದ ರಾಘವೇಂದ್ರ, ನಾಗೇಂದ್ರ, ಜಿ.ಎಂ.ಸುರೇಶ್, ಯುವ ಮುಖಂಡ ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ತಹಸೀಲ್ದಾರ್ ಬಸವರಾಜು, ತಾಪಂ ಇಓ ಗುರುಶಾಂತಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳ ಇನ್ನಿತರಿದ್ದರು.

ಯಳಂದೂರು ಕೆರೆಗಳಿಂದ ದೊಡ್ಡ ಬಳ್ಳಾಪುರ ಕೈಗಾರಿಕಾ ಪ್ರದೇಶಕ್ಕೆ ನೀರು ಸರಬರಾಜು ಯೋಜನೆ ಅವೈಜ್ಞಾನಿಕ

ಜಿಲ್ಲೆಯಲ್ಲೇ ನೀರಿನ ಅಭಾವ, ಯೋಜನೆ ಕೈಬಿಡುವಂತೆ ಶಾಸಕ ಎ.ಆರ್.ಕೃಷ್ಣಮೂರ್ತಿ ಮನವಿ



ಚಾಮರಾಜನಗರ: ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಯಳಂದೂರು ತಾಲೂಕಿನ ಅಗರ ಮತ್ತು ಮದ್ದೂರು ಕೆರೆಗಳಿಂದ ದೊಡ್ಡ ಬಳ್ಳಾಪುರ ಕೈಗಾರಿಕಾ ಪ್ರದೇಶಕ್ಕೆ ನೀರು ಒದಗಿಸಲು ರೂಪಿಸಿರುವ ಯೋಜನೆ ಅವೈಜ್ಞಾನಿಕವಾಗಿದ್ದು, ಸರ್ಕಾರ ಈ ಬಗ್ಗೆ ಮರು ಚಿಂತನೆ ನಡೆಸಬೇಕು ಎಂದು ಕೊಳ್ಳೇಗಾಲದ ಶಾಸಕ ಎ.ಆರ್. ಕೃಷ್ಣಮೂರ್ತಿ ಮನವಿ ಮಾಡಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಳ್ಳೇಗಾಲ ತಾಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಆಗರ, ಮದ್ದೂರು ಕೆರೆಗಳಿಗೆ ತುಂಬಿಸಿ ನಂತರ ಈ ಕೆರೆಗಳಿಂದ ಸಂಗ್ರಹವಾಗುವ ನೀರನ್ನು ದೊಡ್ಡ ಬಳ್ಳಾಪುರ ವ್ಯಾಪ್ತಿಯಲ್ಲಿರುವ ಕೈಗಾರಿಕಾ ಪ್ರದೇಶಗಳಿಗೆ ಒದಗಿಸುವ ಯೋಜನೆಯನ್ನು ಜಾರಿಗೆ ತರಲು ಅಧಿಕಾರಿಗಳು ಮುಂದಾಗಿದ್ದಾರೆ. ಈ ಯೋಜನೆಗೆ ಸುಮಾರು 1500 ಕೋಟಿ ರೂ. ವೆಚ್ಚವಾಗುತ್ತದೆ ಎಂದರು.

ಈ ಸಂಬಂಧ ಅಧಿಕಾರಿಗಳ ತಂಡ ಸರ್ವೆ ಮಾಡಲು ಕ್ಷೇತ್ರಕ್ಕೆ ಬರುತ್ತಿರುವ ಬಗ್ಗೆ ಮಾಹಿತಿ ಇದೆ. ಇದೊಂದು ಅವೈಜ್ಞಾನಿಕ ಯೋಜನೆಯಾಗಿದ್ದು, ಸಾವಿರಾರು ಕೋಟಿ ರೂ. ವೆಚ್ಚ ಮಾಡಿ 150 ಕಿ.ಮೀ. ದೂರದಿಂದ ನೀರು ತೆಗೆದು ಹೋಗುವುದು ಅನವಶ್ಯಕವಾಗಿದೆ. ಜೊತೆಗೆ ಚಾಮರಾಜನಗರ ಜಿಲ್ಲೆಯಲ್ಲೇ ನೀರಿಗೆ ಬಹಳ ಅಭಾವ ಇದೆ. ಜಿಲ್ಲಾ ಕೇಂದ್ರ ಚಾ.ನಗರದಲ್ಲಿ 15 ದಿನಕ್ಕೊಮ್ಮೆ ಕಾವೇರಿ ನೀರು ಬಿಡಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಈ ಯೋಜನೆಯ ಬಗ್ಗೆ ಸ್ಥಳೀಯ ಶಾಸಕನಾದ ನನ್ನ ಗಮನಕ್ಕೆ ಅಧಿಕಾರಿಗಳು ತಂದಿಲ್ಲ. ಈ ಬಗ್ಗೆ ವಿಧಾನಸಭಾ ಅಧಿವೇಶನದಲ್ಲಿ ಚರ್ಚಿಸಲು ಅನುಮತಿ ಪಡೆದಿದ್ದೆ. ಆದರೆ ವಿಷಯ ಚರ್ಚೆಗೆ ಬರುವ ಸಂದರ್ಭದಲ್ಲೇ ಅಧಿವೇಶನವನ್ನು ಮುಂದೂಡಲಾಯಿತು. ಹೀಗಾಗಿ ಚರ್ಚೆ ಮಾಡಲು ಸಾಧ್ಯವಾಗಲಿಲ್ಲ ಎಂದರು.

ಈ ಯೋಜನೆಯಿಂದ ಕೆರೆಗಳ ಅಚ್ಚುಕಟ್ಟು ಪ್ರದೇಶದ ಕೊಳವೆ ಮಾರ್ಗದ ಮೂಲಕ ರೈತರು ಫಸಲು ಬೆಳೆಯಲು ತೊಂದರೆಯಾಗಲಿದೆ. ಬೆಂಗಳೂರು ನಗರದ ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳಿಗೆ ನೀರು ಒದಗಿಸಲು ಯೋಜನೆ ರೂಪಿಸಿರುವುದು ಸರಿಯಲ್ಲ ಕಾವೇರಿ ನೀರಾವರಿ ನಿಗಮದ ಇಇ. ಎಇಇ, ಸೂಪರಿಡೆಂಟ್ ಇಂಜಿನಿಯರ್ ಅವರು ಈ ಯೋಜನೆ ಅವೈಜ್ಞಾನಿಕವಾಗಿದೆ ಎಂದು ವರದಿ ನೀಡಿದ್ದಾರೆ. ಎಂದರು.

ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಮಂತ್ರಿ, ಸಂಸದರು, ಹಿರಿಯ ಸಚಿವ ಎಚ್.ಸಿ.ಮಹದೇವಪ್ಪ ನಮ್ಮ ಭಾಗದವರು. ಇವರು ಈ ಅವೈಜ್ಞಾನಿಕ ಯೋಜನೆಯನ್ನು ಗಮನಿಸಿ, ಇದನ್ನು ಸ್ಥಗಿತಗೊಳಿಸಲು ಕ್ರಮ ವಹಿಸಬೇಕು ಎಂದು ಎ.ಆರ್.ಕೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ.ಚಂದ್ರು, ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಯಳಂದೂರು ತಾಲೂಕು ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ಆರ್.ಮಹದೇವ, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

5 ವರ್ಷವೂ ಸಿದ್ದರಾಮಯ್ಯನವರೇ ಸಿಎಂ



ಚಾಮರಾಜನಗರ: ರಾಜ್ಯದಲ್ಲಿ 5 ವರ್ಷವೂ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಮುಂದುವರೆಯಲಿದ್ದಾರೆ ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಸಚಿವ, ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ತಿಳಿಸಿದರು.

ಬಿಜೆಪಿಗರು ನವೆಂಬರ್ ಕ್ರಾಂತಿ ನಡೆಯಲಿದೆ. ಸಿಎಂ ಬದಲಾಗುತ್ತಾರೆ ಎಂದು ಹೇಳುತ್ತಿದ್ದಾರೆ ಎಂಬ ಸುದ್ದಿಗಾರರು ನಗರದಲ್ಲಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಮುಖ್ಯಮಂತ್ರಿಗಳ ಕುರ್ಚಿ ಖಾಲಿ ಇಲ್ಲ. ಹೀಗಾಗಿ ಬದಲಾವಣೆಯ ಪ್ರಶ್ನೆಯೇ ಉದ್ಭವಾಗುವುದಿಲ್ಲ. ಬಿಜೆಪಿಗರು ಸುಮ್ಮನೇ ಬಾಯಿಗೆ ಬಂದ ರೀತಿ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಅವರೇ ಐದು ವರ್ಷವೂ ಮುಖ್ಯಮಂತ್ರಿ ಆಗಬೇಕು ಎಂಬುದು ನನ್ನ ವೈಯಕ್ತಿಕ ಅಭಿಲಾಷೆಯಾಗಿದೆ. ಆದರೆ, ಈ ಬಗ್ಗೆ ಯಾವುದೇ ತೀರ್ಮಾನವನ್ನು ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದರು.

ಇನ್ನು ಸಿದ್ದರಾಮಯ್ಯ ಓಟ್ ಗೋಯಿಂಗ್ ಸಿಎಂ ಎಂಬ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಅಶೋಕ್‌ಗೆ ಏನು ಕೆಲಸ ಇಲ್ಲ. ಹೋದಲ್ಲಿ, ಬಂದಲ್ಲಿ ಹೇಳೋದೆ ಆಯ್ತು. ಧರ್ಮಸ್ಥಳ ಕೇಸ್ನಲ್ಲಿ ಮೆರವಣಿಗೆ ಮಾಡಿದ್ದೇ ಮಾಡಿದ್ದು. ಆಮೇಲೆ ಏನು ಆಯ್ತು. ವೀರೇಂದ್ರ ಹೆಗ್ಗಡೆ ಹೇಳಿದ್ದೇನು. ಸರ್ಕಾರ ಎಸ್ಐಟಿ ರಚನೆ ಮಾಡಿದ್ದು ಒಳ್ಳೆಯದಾಯಿತು ಅಂದರು.

ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿ ಧಾಮವನ್ನು ಹುಲಿ ಸಂರಕ್ಷಿತಾರಣ್ಯವಾಗಿ ಘೋಷಣೆ ಮಾಡುವ ವಿಚಾರವಾಗಿ ಮಾತನಾಡಿ, ಎಂಎಂ ಹಿಲ್ಸ್ ಅನ್ನು ಹುಲಿ ಸಂರಕ್ಷಿತಾರಣ್ಯ ಪ್ರದೇಶವನ್ನಾಗಿ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ ಆದರೆ, ಇದಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿಲ್ಲ ಎಂದು ತಿಳಿಸಿದರು.

ಬೀದಿ ನಾಯಿಗಳ ದಾಳಿಗೆ ಮೇಕೆ ಬಲಿ

ಯಳಂದೂರು, ಅ.7– ತಾಲೂಕಿನ ಅಂಬಳೆ ಗ್ರಾಮದ ರವಿ ಎಂಬುವರೇ ಸೇರಿದ ಮೇಕೆಯನ್ನು ರಾತ್ರಿ ಬೀದಿ ನಾಯಿಗಳ ಗುಂಪು ದಾಳಿ ಮಾಡಿ ಮೇಕೆಯನ್ನು ತಿಂದು ಹೋಗಿರುವ ಘಟನೆ ನಡೆದಿದೆ.

ಗ್ರಾಮದ ನಾಯಕ ಬಡಾವಣೆಯ ಬೀದಿಯಲ್ಲಿ ರವಿ ಅವರು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ ಮೇಕೆಯನ್ನು ಬೀದಿ ನಾಯಿಗಳ ಗುಂಪು ಶನಿವಾರ ರಾತ್ರಿ ವೇಳೆ ದಾಳಿ ಮಾಡಿ ಅರ್ಧಬಂರ್ಧವಾಗಿ ತಿಂದು ಹೋಗಿದೆ, ಜತೆಗೆ ಮತ್ತೊಂದು ಮೇಕೆಯ ಕಾಲನ್ನು ಸಹ ಕಚ್ಚಿ ಗಾಯಗೊಳಿಸಿದೆ. ನಂತರ ಅಕ್ಕಪಕ್ಕದ ನಿವಾಸಿಗಳು ನೋಡಿ ಓಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಗ್ರಾಮದಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ಸಣ್ಣಮಕ್ಕಳು, ಹಿರಿಯ ನಾಗರೀಕರು ಓಡಾಡಲು ಕಷ್ಟ ಪಡಬೇಕಾಗಿದೆ. ಜತೆಗೆ ಮಾಂಸದ ರುಚಿ ನೋಡಿರುವ ನಾಯಿಗಳು ಮತ್ತೆ ದಾಳಿ ಮಾಡುವ ಸಾಧ್ಯತೆ ಹೆಚ್ಚಾಗಿದೆ, ಆದ್ದರಿಂದ ಈ ಬಗ್ಗೆ ಸಂಬಂಧಪಟ್ಟವರು ಕೂಡಲೇ ನಾಯಿಗಳನ್ನು ಹಿಡಿಸುವ ಕಾರ್ಯವನ್ನು ಮಾಡಬೇಕೆಂದು ಆಗ್ರಹಿಸಿದ್ದಾರೆ.

ಮೈಸೂರು ಮಿತ್ರ

ಬುಧವಾರ 8 ಅಕ್ಟೋಬರ್ 2025

ತಮ್ಮದೇ ಸರ್ವಿಸ್ ರಿವಾಲ್ವರ್‌ನಿಂದ ಗುಂಡು ಹಾರಿಸಿಕೊಂಡು ಹರಿಯಾಣ ಎಡಿಜಿಪಿ ಆತ್ಮಹತ್ಯೆ



ಚಂಡೀಗಢ: ಹರಿಯಾಣ ಕೇಡರ್ ಐಪಿಎಸ್ ಅಧಿಕಾರಿ ವೈ. ಪೂರಣ್ ಕುಮಾರ್ ಮೃತದೇಹ ಅವರ ಚಂಡೀಗಢದ ನಿವಾಸದಲ್ಲಿ ಪತ್ತೆಯಾಗಿದೆ. ಸ್ವತಃ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ವರದಿಯಾಗಿದೆ. ಪೂರಣ್ ಕುಮಾರ್ ಹರಿಯಾಣದಲ್ಲಿ ಎಡಿಜಿಪಿ ಹುದ್ದೆಯಲ್ಲಿದ್ದು ಅವರ ಪತ್ನಿ ಅಮ್ನೀತ್ ಪಿ. ಕುಮಾರ್ ಸಹ ಹರಿಯಾಣ ಕೇಡರ್‌ನ ಐಎಎಸ್ ಅಧಿಕಾರಿ. ಅವರು ಪ್ರಸ್ತುತ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ನೇತೃತ್ವದ ನಿಯೋಗದೊಂದಿಗೆ ಜಪಾನ್‌ನಲ್ಲಿದ್ದಾರೆ.

ವೈ. ಪೂರಣ್ ಕುಮಾರ್ ಅವರ ಕುಟುಂಬವು ಚಂಡೀಗಢದ ಸೆಕ್ಟರ್ 11ರಲ್ಲಿ ವಾಸಿಸುತ್ತಿದೆ. ವರದಿಗಳ ಪ್ರಕಾರ, ವೈ. ಪೂರಣ್ ಕುಮಾರ್ ತಮ್ಮ ಸೇವಾ ರಿವಾಲ್ವರ್‌ನಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವೈ. ಪೂರಣ್‌ಕುಮಾರ್ ತಮ್ಮ ಮನೆಯ ನೆಲಮಾಳಿಗೆಯಲ್ಲಿ ಗುಂಡು ಹಾರಿಸಿಕೊಂಡಿದ್ದಾರೆ. ನೆಲಮಾಳಿಗೆಯು ಧ್ವನಿ ನಿರೋಧಕವಾಗಿದ್ದು ಹೀಗಾಗಿ ಗುಂಡೇಟಿನ ಶಬ್ದ ಹೊರಗೆ ಕೇಳಿಸಲಿಲ್ಲ. ಅವರ ಮಗಳು ಕೆಳಗೆ ಹೋದಾಗ, ರಿವಾಲ್ವರ್ ಜೊತೆಗೆ ತನ್ನ ತಂದೆಯ ದೇಹವು ನೆಲದ ಮೇಲೆ ಬಿದ್ದಿರುವುದನ್ನು ಕಂಡ ನಂತರ ಆಕೆ ಪೊಲೀಸರಿಗೆ ಮಾಹಿತಿ ನೀಡಿದರು.

ವೈ. ಪೂರಣ್‌ಕುಮಾರ್ ಹರಿಯಾಣ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದರು. ಅವರು ಪ್ರಸ್ತುತ ಪೊಲೀಸ್ ತರಬೇತಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅವರ ಅಧಿಕಾರಾವಧಿಯಲ್ಲಿ ಅವರು ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರು.

ವೈ. ಪೂರಣ್ ಕುಮಾರ್ ಅವರ ಆತ್ಮಹತ್ಯೆಗೆ ಕಾರಣ ಸ್ಪಷ್ಟವಾಗಿಲ್ಲ. ಎಡಿಜಿಪಿ ಶ್ರೇಣಿಯ ಅಧಿಕಾರಿ ಪೂರಣ್ ಕುಮಾರ್, ಐಪಿಎಸ್ ಅಧಿಕಾರಿಗಳ ಹಿರಿತನವನ್ನು ಪ್ರಶ್ನಿಸುತ್ತಿದ್ದರು ಮತ್ತು ವ್ಯವಸ್ಥೆಯನ್ನು ನಿರಂತರವಾಗಿ ಪ್ರಶ್ನಿಸುತ್ತಿದ್ದರು. ಅವರು ಕಾಲಕಾಲಕ್ಕೆ ಗೃಹ ಸಚಿವ ಅನಿಲ್ ವಿಜ್ ಅವರಿಗೆ ಪತ್ರಗಳನ್ನು ಬರೆದರು. ಹರಿಯಾಣದಲ್ಲಿ ಶಿಕ್ಷಕರ ಹತ್ಯೆಯ ತನಿಖೆ ನಡೆಸುತ್ತಿದ್ದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕರಿಗೆ ಅಧಿಕಾರ ಪುನಃ ಸ್ಥಾಪಿಸಿ ಆದೇಶಿಸಿದ ಸರ್ಕಾರ

ಬೆಂಗಳೂರು: ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸಂಪೂರ್ಣ ಜವಾಬ್ದಾರಿ ಹಾಗೂ ಅಧಿಕಾರವನ್ನು ನಿರ್ದೇಶಕರಿಗೆ ಪುನಃ ಸ್ಥಾಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸಂಸ್ಥೆಯಲ್ಲಿ ನಡೆದಿದ್ದ ಅವ್ಯವಹಾರ ಹಾಗೂ ಅಕ್ರಮಗಳ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆಗೆ ನೇಮಿಸಲಾಗಿದ್ದ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಸರ್ಕಾರ ಕೆಲವು ಮಹತ್ವದ ಬದಲಾವಣೆಗಳನ್ನು ಮಾಡಿ ಆದೇಶ ಹೊರಡಿಸಿದೆ. ಆಡಳಿತಾಧಿಕಾರಿಗಳಾಗಿ ನೇಮಕಗೊಂಡಿದ್ದ ಅಧಿಕಾರಿಗಳಿಗೆ ನೀಡಲಾಗಿದ್ದ ಎಲ್ಲಾ ಜವಾಬ್ದಾರಿಗಳನ್ನು ಹಿಂಪಡೆಯಲು ಸರ್ಕಾರ ಆದೇಶ ಹೊರಡಿಸಿದೆ.

ಆಡಳಿತಾತ್ಮಕ ವಿಷಯ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸಿಬ್ಬಂದಿ ಸೇವಾ ವಿಷಯ, ಹಣಕಾಸು ನಿರ್ವಹಣೆ, ಸಂಗ್ರಹಣೆ, ಖರೀದಿ, ಮಾನವ ಸಂಪನ್ಮೂಲ ನಿರ್ವಹಣೆ ಸೇರಿದಂತೆ ಎಲ್ಲಾ ಪೂರ್ಣ ಜವಾಬ್ದಾರಿಯನ್ನು ಈ ಹಿಂದೆ ಇದ್ದಂತೆ ನಿರ್ದೇಶಕರಿಗೆ ಪುನಃ ಸ್ಥಾಪಿಸಿ ಆದೇಶ ಹೊರಡಿಸಲಾಗಿದೆ.

ದೆಹಲಿಯಲ್ಲಿ ಪತ್ನಿಯೊಂದಿಗೆ 'ಕಾಂತಾರ ಚಾಪ್ಟರ್ 1' ಚಿತ್ರ ವೀಕ್ಷಿಸಿದ ಹೆಚ್‌ಡಿಕೆ...



ನವದೆಹಲಿಯಲ್ಲಿ ಪತ್ನಿ ಅನಿತಾ ಕುಮಾರಸ್ವಾಮಿ ಅವರ ಜೊತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, 'ಕಾಂತಾರ ಚಾಪ್ಟರ್ 1' ಚಿತ್ರ ವೀಕ್ಷಿಸಿದ್ದಾರೆ. ಈ ಕುರಿತು ಕುಮಾರಸ್ವಾಮಿ ಅವರೇ ತಮ್ಮ 'ಎಕ್ಸ್' ಖಾತೆಯಲ್ಲಿ ಫೋಟೋ ಸಹಿತ ಮಾಹಿತಿ ಹಂಚಿಕೊಂಡಿದ್ದಾರೆ. ಚಿತ್ರದಲ್ಲಿ 'ಕನ್ನಡ ಅಸ್ಮಿತೆಯ ಸಮೃದ್ಧ ವೈಭವೀಕರಣ. ಮನ ಮಿಡಿಯುವ ಅಂತಃಕರಣದ ನೈಜ ಹೂರಣ. ತುಳುನಾಡ ಸಾಂಸ್ಕೃತಿಕ ಮತ್ತು ದೈವತ್ವ ಪರಂಪರೆಯ ವಿರಾಟ್ ಅನಾವರಣ ಆಗಿದೆ. ಈ ಚಿತ್ರವು ಪದಗಳಿಗೂ ಮೀರಿದ ಸೃಜನಶೀಲ ಸೃಷ್ಟಿ. ನಿರ್ದೇಶಕ ರಿಷಬ್ ಶೆಟ್ಟಿ, ನಿರ್ಮಾಪಕ ವಿಜಯ್ ಕಿರಗಂದೂರು, ಹೊಂಬಾಳೆ ಫಿಲಂಸ್ ಮತ್ತವರ ತಂಡದ ಪ್ರಯತ್ನಕ್ಕೆ ಹೃದಯಪೂರ್ವಕ ಅಭಿನಂದನೆಗಳು. ಅವರಿಂದ ಇನ್ನಷ್ಟು ಅತ್ಯುತ್ತಮ ಚಿತ್ರಗಳು ಮೂಡಿಬರಲಿ' ಎಂದು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ನಟ ಮೋಹನ್ ಲಾಲ್‌ಗೆ ಸೇನಾ ಮುಖ್ಯಸ್ಥರಿಂದ ಕಮಾಂಡೇಷನ್




ನವದೆಹಲಿ: ನವದೆಹಲಿಯಲ್ಲಿ ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಇತ್ತೀಚೆಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾದ ಮಲಯಾಳಂ ಸೂಪರ್‌ಸ್ಟಾರ್ ಮೋಹನ್ ಲಾಲ್ ಅವರಿಗೆ ಮಂಗಳವಾರ ಕಮಾಂಡೇಷನ್ ಪ್ರಶಂಸಾ ಪದಕ ನೀಡಿ ಗೌರವಿಸಿದರು.

ಪ್ರಾದೇಶಿಕ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಗೌರವ ಶ್ರೇಣಿಯನ್ನು ಹೊಂದಿರುವ ಮೋಹನ್ ಲಾಲ್ ಅವರು, ಸೇನಾ ಮುಖ್ಯಸ್ಥರಿಂದ ಪ್ರಶಂಸೆಯನ್ನು ಪಡೆಯುವುದು 'ಅತ್ಯಂತ ಗೌರವ' ಎಂದು ಹೇಳಿದ್ದಾರೆ.

ಕಾರ್ಯಕ್ರಮದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ನಟ, ಸೇನೆಗಾಗಿ ಮತ್ತು ನಾಗರಿಕರ ಸುಧಾರಣೆಗಾಗಿ ತಮ್ಮಿಂದ ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಪ್ರಾದೇಶಿಕ ಸೇನಾ ಬೆಟಾಲಿಯನ್‌ಗಳಿಗೆ ಹೆಚ್ಚಿನ ದಕ್ಷತೆಯನ್ನು ಹೇಗೆ ತರುವುದು ಮತ್ತು ದೇಶಕ್ಕಾಗಿ ಏನು ಮಾಡಬಹುದು ಎಂಬುದರ ಕುರಿತು ನಾನು ಮತ್ತು ಸೇನಾ ಮುಖ್ಯಸ್ಥರು ಚರ್ಚಿಸಿದ್ದೇವೆ ಎಂದು ಅವರು ಹೇಳಿದರು. ಇದು ಒಂದು ಸಣ್ಣ ಚರ್ಚೆಯಾಗಿತ್ತು. ಆದರೆ ನಮ್ಮ ಮುಂದೆ ದೊಡ್ಡ ಯೋಜನೆಗಳಿವೆ ಎಂದು ಅವರು ಹೇಳಿದರು.

ವಾಲ್ಮೀಕಿ ಜಯಂತಿ ಮೆರವಣಿಗೆ



ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಮೆರವಣಿಗೆಯಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಭಾಗವಹಿಸಿ, ನಾಯಕ ಸಮುದಾಯದವರಿಗೆ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಮುಖಂಡ ಟೆನ್ನಿಸ್ ಗೋಪಿ, ಮೈಸೂರು ತಾಲೂಕು ನಾಯಕ ಸಂಘದ ಅಧ್ಯಕ್ಷ ಮಾದೇವಸ್ವಾಮಿ, ರಂಗಸ್ವಾಮಿ, ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಬಿಷಪ್ ಡಾ. ಫ್ರಾನ್ಸಿಸ್ ಸೆರಾವೋ ವಿಧ್ಯುಕ್ತ ಪದಗ್ರಹಣ





ಮೈಸೂರು ಧರ್ಮಪ್ರಾಂತ್ಯದ ನೂತನ ಬಿಷಪ್ (ಧರ್ಮಾಧ್ಯಕ್ಷ) ಆಗಿ ಡಾ. ಫ್ರಾನ್ಸಿಸ್ ಸೆರಾವೋ ಮಂಗಳವಾರ ಅಧಿಕಾರ ವಹಿಸಿಕೊಂಡರು. ಮತ್ತೊಂದು ಚಿತ್ರದಲ್ಲಿ ಅಭಿಮಾನಿಗಳಿಂದ ಅಭಿನಂದನೆ ಸ್ವೀಕಾರ

ಮೈಸೂರು, ಅ.7(ವಿವಿಹೆಚ್)– ಮೈಸೂರು ಧರ್ಮಪ್ರಾಂತ್ಯದ ನೂತನ ಬಿಷಪ್ (ಧರ್ಮಾಧ್ಯಕ್ಷ) ಆಗಿ ಡಾ. ಫ್ರಾನ್ಸಿಸ್ ಸೆರಾವೋ ಅವರು ಪದಗ್ರಹಣ ಮಾಡಿದರು. ಈ ಮೂಲಕ ಮೈಸೂರು ಡಯಾಸಿಸ್(ಧರ್ಮಪ್ರಾಂತ್ಯ) ಮಂಗಳವಾರ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು.

ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್‌ನಲ್ಲಿ ಮೈಸೂರಿನ ನೂತನ ಬಿಷಪ್ ಆಗಿ ರೆವರೆಂಡ್ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ. ಅವರನ್ನು ಔಪಚಾರಿಕವಾಗಿ ಪ್ರತಿಷ್ಠಾಪಿಸಲಾಯಿತು. ಈ ಕಾರ್ಯವನ್ನು ಬೆಂಗಳೂರಿನ ಆರ್ಚ್ ಬಿಷಪ್ ಡಾ. ಪೀಟರ್ ಮಚಾಡೊ ನೆರವೇರಿಸಿದರು. 14ನೇ ಪೋಪ್ ಲಿಯೋ ಅವರು ಬಿಷಪ್ ಫ್ರಾನ್ಸಿಸ್ ಸೆರಾವೊ.ಎಸ್.ಜೆ. ಅವರನ್ನು ಮೈಸೂರಿನ ನೂತನ ಬಿಷಪ್ ಆಗಿ ನೇಮಿಸಿದ್ದಾರೆ ಎಂದು ಇದೇ ವೇಳೆ ಘೋಷಿಸಿದರು.

ಯೂಕರಿಸ್ಟಿಕ್ (ಬಲಿಪೂಜೆ) ಆಚರಣೆಯ ನಂತರ, ಭಾರತ ಮತ್ತು ನೇಪಾಳದ ಅಪೋಸ್ಟೋಲಿಕ್ ನುನ್ಸಿಯೊ ಡಾ. ಲಿಯೋಪೋಲ್ಡೊ ಗಿರೆಲ್ಲಿ ಅವರ ಅಧ್ಯಕ್ಷತೆಯಲ್ಲಿ ಅಭಿನಂದನಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಜನವರಿ 2023 ರಿಂದ ಡಯಾಸಿಸ್‌ನ ಅಪೋಸ್ಟೋಲಿಕ್ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ ಡಾ. ಬರ್ನಾರ್ಡ್ ಮೊರಾಸ್ ಅವರಿಗೆ ಗೌರವಪೂರ್ವಕ ಬೀಳ್ಕೊಡುಗೆ ನೀಡಲಾಯಿತು.

ಎರಡು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಸಮಾರಂಭದಲ್ಲಿ, ಮೈಸೂರಿನಲ್ಲಿ ಬಿಷಪ್ ಸೆರಾವೋ ಅವರ ಪಾದ್ರಿಯ ನಾಯಕತ್ವದ ಆರಂಭವನ್ನು ಅಧಿಕೃತವಾಗಿ ಗುರುತಿಸುವ ಪಾಪಲ್ ಬುಲ್ ಆಫ್ ನೇಮಕಾತಿಯನ್ನು ಪಠಿಸಲಾಯಿತು. ಪ್ರಮಾಣ ವಚನ ಸ್ವೀಕರಿಸಿದ ನಂತರ, ಬಿಷಪ್ ಸೆರಾವೋ ಅವರನ್ನು ಹಲವಾರು ಬಿಷಪ್‌ಗಳು, ಪಾದ್ರಿಗಳು, ಧಾರ್ಮಿಕ ಮುಖಂಡರು ಮತ್ತು ನೆರೆದಿದ್ದ ನೂರಾರು ಅಭಿಮಾನಿಗಳು ಅಭಿನಂದಿಸಿದರು.

ಅಧಿಕಾರ ಸ್ವೀಕಾರದ ಬಳಿಕ ಅವರು ತಮ್ಮ ಭಾಷಣದಲ್ಲಿ, ಮೈಸೂರು ಡಯಾಸಿಸ್(ಧರ್ಮಪ್ರಾಂತ್ಯ) ಅನ್ನು ಮುನ್ನಡೆಸುವ ಜವಾಬ್ದಾರಿಯನ್ನು ವಹಿಸಿದ್ದಕ್ಕಾಗಿ ಪೋಪ್ ಫ್ರಾನ್ಸಿಸ್ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಜೊತೆಗೆ ಪಾದ್ರಿಗಳು, ಧಾರ್ಮಿಕ ಮುಖಂಡರು ಮತ್ತು ಸಾಮಾನ್ಯ ಜನರ ಸಹಕಾರವನ್ನು ಕೋರಿದರು.

ಅಪೋಸ್ಟೋಲಿಕ್ ಆಡಳಿತಾಧಿಕಾರಿ ಬಿಷಪ್ ಬರ್ನಾರ್ಡ್ ಮೊರಾಸ್, ಅಪೋಸ್ಟೋಲಿಕ್ ನುನ್ಸಿಯೊ ಡಾ. ಲಿಯೋಪೋಲ್ಡೊ ಗಿರೆಲ್ಲಿ, ಮೈಸೂರು ಡಯೋಸಿಸನ್ ಎಜುಕೇಶನಲ್ ಸೊಸೈಟಿಯ ಕಾರ್ಯದರ್ಶಿ ರೆವರೆಂಡ್ ಫಾದರ್ ಎಡ್ವರ್ಡ್ ಸಲ್ಡಾನ್ಹಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಡಾ. ಫ್ರಾನ್ಸಿಸ್ ಸೆರಾವೋ ಕಿರು ಪರಿಚಯ

ಮೈಸೂರು ಬಿಷಪ್ ಆಗಿ ಅಧಿಕಾರ ಸ್ವೀಕರಿಸುತ್ತಿರುವ ಡಾ.ಫ್ರಾನ್ಸಿಸ್ ಸೆರಾವೋ ಅವರು ಆಗಸ್ಟ್ 15, 1959 ರಲ್ಲಿ ಮೂಡಬಿದಿರೆಯಲ್ಲಿ ಜನಿಸಿದರು. ಇವರ ತಂದೆ ತಾಯಿಯ 11 ಮಕ್ಕಳಲ್ಲಿ ಇವರೆ ಕಿರಿಯರಾಗಿದ್ದಾರೆ. 1992, ಏಪ್ರಿಲ್ 30 ರಂದು ಡಾ.ಫ್ರಾನ್ಸಿಸ್ ಸೆರಾವೋ ಅವರು ಗುರುಗಳಾಗಿ ದೀಕ್ಷೆ ಪಡೆದರು. ನಂತರ ಆನೇಕಲ್ (ಬೆಂಗಳೂರು ಆರ್ಚ್ ಡಯಾಸಿಸ್) ಮತ್ತು ಮುಂಡ್ಗೋಡ್ (ಕಾರವಾರ ಡಯಾಸಿಸ್) ನಲ್ಲಿ ದಲಿತ ಮತ್ತು ಬುಡಕಟ್ಟು ಸಮುದಾಯಗಳಿಗೆ ಸೇವೆ ಸಲ್ಲಿಸಲು ತಮ್ಮ ಆರಂಭಿಕ ಸೇವೆಯನ್ನು ಮೀಸಲಿಟ್ಟರು. 69 ವರ್ಷ ವಯಸ್ಸಿನ ರೆವರೆಂಡ್ ಡಾ. ಫ್ರಾನ್ಸಿಸ್ ಸೆರಾವೊ ಎಸ್‌ಜೆ, ಬಿಷಪ್‌ಗೆ ಯಾವುದೇ ನಿಗದಿತ ಅವಧಿ ಇಲ್ಲದ ಕಾರಣ 75 ವರ್ಷ ವಯಸ್ಸಿನವರೆಗೆ ಬಿಷಪ್ ಆಗಿ ಸೇವೆ ಸಲ್ಲಿಸಬಹುದು. ಮಾರ್ಚ್ 19, 2014 ರಂದು ಪೋಪ್ ಫ್ರಾನ್ಸಿಸ್ ಅವರಿಂದ ಶಿವಮೊಗ್ಗದ ಬಿಷಪ್ ಆಗಿ ನೇಮಕಗೊಂಡರು ಮತ್ತು ಮೇ 7, 2014 ರಂದು ದೀಕ್ಷೆ ಪಡೆದ ಅವರು, 'ನಂಬಿಕೆಯ ಸೇವೆ, ಜೀವನದ ಪೂರ್ಣತೆ' ಬಿಷಪ್ ಧ್ಯೇಯವಾಕ್ಯದೊಂದಿಗೆ ಮುನ್ನಡೆಸಿದರು. ಸರಳತೆ, ನಮ್ರತೆ ಮತ್ತು ಸಾಮಾಜಿಕ ಕಾಳಜಿಗೆ ಹೆಸರುವಾಸಿಯಾದ ಬಿಷಪ್ ಸೆರಾವೊ, ಪಾದ್ರಿಯ ಸೇವೆ, ಶಿಕ್ಷಣ ಮತ್ತು ಸಾಮಾಜಿಕ ಸಂಪರ್ಕದಲ್ಲಿ ಅಪಾರ ಅನುಭವವನ್ನು ಹೊಂದಿದ್ದಾರೆ.

ಮಾಜಿ ಶಾಸಕ ಎಂಕೆಎಸ್ ಗೃಹ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ



ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ 'ಜನನಿ' ಗೃಹ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಮೈಸೂರು,ಅ.7–ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ 'ಜನನಿ' ಗೃಹ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಆರ್.ಸಿ.ಜೋಗಿ ಮಹೇಶ್, ಭವ್ಯ, ಇಂದಿರಾ, ನಾಗರತ್ನ ಮಂಜುನಾಥ್, ಭವ್ಯಶ್ರೀ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ನಗರಪಾಲಿಕೆ ಮಾಜಿ ಸದಸ್ಯರಾದ ಲೋಕೇಶ್‌ಪಿಯಾ, ವಿಜಯ್‌ಕುಮಾರ್, ರವಿಶಂಕರ್, ಪಟಾಕಿ ಮಂಜುನಾಥ್, ವಿಶ್ವನಾಥ್, ಶಂಕರ್, ರೂಪೇಶ್, ಎನ್‌ಎಸ್‌ಯುಐ ಅಧ್ಯಕ್ಷ ಮನೋಜ್ ಪೈ, ಪುಟ್ಟಸ್ವಾಮಿ, ಮನು ನಾಯಕ್, ಸತೀಶ್ ನಾಯಕ್, ಶೇಖರ್ ನಾಯಕ್, ವಸಂತ್ ನಾಯಕ್, ನಾಗೇಶ್ ನಾಯಕ್, ರಮೇಶ್ ರಾಮಪ್ಪ, ವೆಂಕಟೇಶ್, ಮಹದೇವೇಗೌಡ, ಮಹೇಂದ್ರ, ಚೇತನ್, ಪುಟ್ಟರಾಜು, ಅರುಣ್ ಗಂಗಾಧರ್, ಶಿವು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವೈದ್ಯನ ಕೊಲೆ, ದರೋಡೆ; ನೇಪಾಳ ಪ್ರಜೆ ಎನ್ಕೌಂಟರ್



ನವದೆಹಲಿ, ಅ.7– ವೈದ್ಯನ ಕೊಲೆ, ಹಲವು ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ನೇಪಾಳ ಪ್ರಜೆ ಪೊಲೀಸರ ಎನ್ಕೌಂಟರ್‌ನಲ್ಲಿ ಸಾವನ್ನಪ್ಪಿದ್ದಾರೆ.

ದೆಹಲಿ ಮತ್ತು ಗುರುಗ್ರಾಮ್ ಪೊಲೀಸರ ಜಂಟಿ ಕಾರ್ಯಾಚರಣೆಯ ಸಂದರ್ಭದಲ್ಲಿ ಆಗ್ನೇಯ ದೆಹಲಿಯ ಅಸ್ತಾ ಕುಂಜ್ ಪಾರ್ಕ್ ಬಳಿ ಎನ್ಕೌಂಟರ್ ನಡೆದಿದೆ.

ಎನ್ಕೌಂಟರ್‌ನಲ್ಲಿ ಸಾವನ್ನಪ್ಪಿದ ವ್ಯಕ್ತಿಯನ್ನು ನೇಪಾಳದ ಲಾಲ್‌ಪುರ ಮೂಲದ ಭೀಮ್ ಮಹಾಬಹಾದ್ದೂರ್ ಜೋರಾ(39) ಎಂದು ಗುರ್ತಿಸಲಾಗಿದೆ. ಈತ ದೆಹಲಿ, ಗುರುಗ್ರಾಮ್, ಗುಜರಾತ್ ಮತ್ತು ಬೆಂಗಳೂರಿನಾದ್ಯಂತ ಹಲವಾರು ಕೊಲೆ, ದರೋಡೆ ಮತ್ತು ಕಳ್ಳತನ ಪ್ರಕರಣಗಳಲ್ಲಿ ಬೇಕಾಗಿದ್ದ.

ಮೇ 2024ರಲ್ಲಿ ಜಂಗ್‌ಪುರ ಮೂಲದ ವೈದ್ಯ ಡಾ. ಯೋಗೇಶ್ ಚಂದರ್ ಪಾಲ್ ಅವರ ಕೊಲೆಗೆ ಸಂಬಂಧಿಸಿದಂತೆ ಈತ ಬೇಕಾಗಿದ್ದ. ಈತನ ಕುರಿತು ಸುಳಿವು ನೀಡಿದವರಿಗೆ ಅಧಿಕಾರಿಗಳು 1 ಲಕ್ಷ ರೂ. ಬಹುಮಾನವನ್ನೂ ಘೋಷಿಸಿದ್ದರು.

ಈ ನಡುವೆ ಸುಳಿವು ದೊರೆತ ಹಿನ್ನೆಲೆಯಲ್ಲಿ, ಗುರುಗ್ರಾಮ ಅಪರಾಧ ನಿಗ್ರಹ ದಳ ಮತ್ತು ದೆಹಲಿ ಪೊಲೀಸರ ವಿಶೇಷ ಪಡೆ ಬೆಳಗಿನ ಜಾವ 12:20ರ ಸುಮಾರಿಗೆ ಆಸ್ತಾ ಕುಂಜ್ ಪಾರ್ಕ್ ಬಳಿ ಆರೋಪಿಯನ್ನು ತಡೆದಿದ್ದಾರೆ. ಆದರೆ, ಆರೋಪಿ ಪೊಲೀಸರ ಮೇಲೆ 6 ಸುತ್ತು ಗುಂಡುಗಳನ್ನು ಹಾರಿಸಿದ್ದು, ಅಧಿಕಾರಿಗಳು ಪ್ರತಿ ದಾಳಿ ನಡೆಸಿದ್ದಾರೆ. ಈ ವೇಳೆ ಗಾಯಗೊಂಡ ಆರೋಪಿ, ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಹಿರಿಯ ಸಾಹಿತಿ ಡಾ.ಮೊಗಳ್ಳಿ ಗಣೇಶ್‌ಗೆ ನುಡಿನಮನ



ಶ್ರೀರಂಗ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಂಗಕರ್ಮಿ ರಾಜಪ್ಪ ದಳವಾಯಿ, ಸಾಹಿತಿ ಡಾ.ಮೊಗಳ್ಳಿ ಗಣೇಶ್‌ರಿಗೆ ನುಡಿನಮನ ಸಲ್ಲಿಸಿದರು.

ಮೈಸೂರು,ಅ.7(ಜಿಎ)–ಮೈಸೂರು ವಿವಿಧ ರಂಗ ಸಂಘಟನೆಗಳ ಒಕ್ಕೂಟ, ಡಾ.ಮೊಗಳ್ಳಿ ಗಣೇಶ್ ಸಾಹಿತ್ಯಾಭಿಮಾನಿ ಬಳಗ, ಮೈಸೂರು ವಿವಿ ಜಾನಪದ ಅಧ್ಯಯನ ವಿಭಾಗದ ಸಹಯೋಗದಲ್ಲಿ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಮೊಗಳ್ಳಿ ಗಣೇಶ್ ಅವರಿಗೆ ಸಾಹಿತಿಗಳು, ಚಿಂತಕರು, ವಿಚಾರವಾದಿಗಳು ನುಡಿನಮನ ಸಲ್ಲಿಸಿದರು.

ವಿಚಾರವಾದಿ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಮೊಗಳ್ಳಿ ಗಣೇಶ್ ನಿಧನ ಅಘಾತಕಾರಿ. ಆತನ ವ್ಯಕ್ತಿತ್ವದಲ್ಲಿ ಹಿಂಜರಿಕೆ ಇತ್ತು. ಸೃಜನಶೀಲ ಮತ್ತು ಓದಿನ ವಿಷಯದಲ್ಲಿ ಮೇಲರಿಮೆ ಇತ್ತು. ತನ್ನ ಅತ್ಯುತ್ತಮ ಕಥೆಗಳನ್ನು ಹರದಲ್ಲಿಯೇ ಬರೆದ ಆತನಿಗೆ ಸಮಾಜದ ಜತೆ ವ್ಯವಹರಿಸಲು ಬರಲಿಲ್ಲ. ಸಣ್ಣಪುಟ್ಟ ಸಂಭ್ರಮದಲ್ಲೂ ಭಾಗಿಯಾಗದೆ ತನ್ಮಯತೆಯಿಂದ ಕತೆಗಳನ್ನು ಬರೆಯುತ್ತಿದ್ದ. ಕತೆಗಾರನಾಗಿ ಗಣೇಶ್ ಸದಾ ಸ್ಮರಣೀಯ ಎಂದರು.

ಹಿರಿಯ ಸಾಹಿತಿ ಜಿ.ಪಿ.ಬಸವರಾಜು ಮಾತನಾಡಿ, ಗಣೇಶ್ ಎರಡು ಗುಣ ಹುಟ್ಟು ಮತ್ತು ಸಿಟ್ಟು, ದಮನಿತರ ದನಿಯಾಗಿ ನೋವು ಅಪಮಾನಗಳನ್ನು ಶೋಷಣೆಯ ನಾನಾ ಮುಖಗಳನ್ನು ಕಂಡು ನೊಂದು ಬೆಂದು ಬರೆಯುತ್ತಿದ್ದರು. ಸಾಹಿತ್ಯ ಗುಂಪುಗಾರಿಕೆ ಪರಂಪರೆ ಬಗ್ಗೆ ಸಿಟ್ಟಿತ್ತು. ಹಾಗೇ ಪರಂಪರೆಯಲ್ಲಿ ಜಾನಪದ ಇಟ್ಟು ನೋಡಿದರು ಎಂದು ತಿಳಿಸಿದರು.

ಪತ್ರಕರ್ತ ರವಿಕುಮಾರ್ ಬಾಗಿ ಮಾತನಾಡಿ, ಮೊಗಳ್ಳಿ ಗಣೇಶ್ ಅವರು ದಲಿತ ತಾತ್ವಿಕತೆ ಮತ್ತು ದಲಿತ ಅಸ್ಮಿತೆಯನ್ನು ಕಟ್ಟಿಕೊಟ್ಟಿದ್ದು ಬಹಳ ಮೌಲಿಕವಾದದ್ದು. ಅವರ ಅಪಾರ ಸಾಹಿತ್ಯ ಕೊಡುಗೆಯನ್ನು ಸಾಹಿತ್ಯ ಲೋಕ ನಿರೀಕ್ಷಿತ ಮಟ್ಟದಲ್ಲಿ ಸ್ಪಂದಿಸಲಿಲ್ಲ. ಸತ್ತ ಮೇಲೆ ಹಪಾಹಪಿಸುತ್ತಿದ್ದಾರೆ. ನಿಷ್ಠುರವಾಗಿ ಬದುಕಿ ಹೋಗಿದ್ದಾರೆ. ಅಷ್ಟು ನಿಷ್ಠುರತೆ ಬೇಕಾಗಿಲ್ಲ. ಯಾವತ್ತೂ ಪ್ರಭುತ್ವ ಒಲೈಕೆ ಮಾಡಲಿಲ್ಲ. ನಿಷ್ಠುರತೆಯಿಂದ ಕಳೆದುಕೊಂಡಿದ್ದಾರೆ. ಕಡು ದುಃಖಿ ಲೇಖಕ ಎಂದು ಸ್ಮರಿಸಿದರು.

ಲೇಖಕ ಡಾ.ನಂಜಯ್ಯ ಹೊಂಗನೂರು ಮಾತನಾಡಿ, ಗುರುಗಳಾದ ಪ್ರೊ.ಮೊಗಳ್ಳಿ ಗಣೇಶ್ ಕನ್ನಡ ಸಾಹಿತ್ಯ ಮತ್ತು ಜಾನಪದ ಪರಂಪರೆಗಳನ್ನು ಸಮರ್ಥವಾಗಿ ಸಮನ್ವಯಗೊಳಿಸಿ ಅದರ ಬೇರು ಬಿಳಲುಗಳನ್ನು ಮುರಿದು ಕಟ್ಟಿದ್ದರು. ದಲಿತ ಸಂವೇದನೆಯ ಸೂಕ್ಷ್ಮತೆಯ ಆಳ ಅಗಲಗಳನ್ನು ತಮ್ಮ ಸೃಜನಶೀಲ ಬರವಣಿಗೆಯಲ್ಲಿ ಸಾಕಷ್ಟು ದುಡಿಸಿಕೊಂಡಿದ್ದರು. ನೆಲಮೂಲದ ಜಾನಪದವನ್ನು ಬಹುಮುಖಿ ನೆಲೆಯಲ್ಲಿ ಶೋಧಿಸಿದರು. ಕುಲ ಶಾಸ್ತ್ರೀಯ ಮತ್ತು ಸಾಮುದಾಯಿಕ ಹಿನ್ನೆಲೆಯಲ್ಲಿ ಜಾನಪದದ ವಿಶ್ಲೇಷಣೆ ಮಾಡುವುದರೊಂದಿಗೆ ಅದನ್ನು ಪ್ರಾಯೋಗಾತ್ಮಕವಾಗಿ ಅನ್ವಯಿಕಗೊಳಿಸಿದ ಅಪರೂಪದ ವ್ಯಕ್ತಿಯಾಗಿದ್ದರು ಎಂದರು.

ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಹಿರಿಯ ಪತ್ರಕರ್ತ ಸ್ವಾಮಿ ಆನಂದ್, ಜಾನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು, ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಈ.ಧನಂಜಯ ಎಲಿಯೂರು, ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ, ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ರಂಗಕರ್ಮಿ ರಾಜಪ್ಪ ದಳವಾಯಿ ಉಪಸ್ಥಿತರಿದ್ದರು.

ನನ್ನ ಹಲವು ಡೀಪ್‌ಫೇಕ್ ವಿಡಿಯೋಗಳು ಎಲ್ಲೆಡೆ ಹರಿದಾಡುತ್ತಿವೆ

ನಿರ್ಮಲಾ ಸೀತಾರಾಮನ್



ನವದೆಹಲಿ, ಅ.7–ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗಳವಾರ ತಮ್ಮ ಹಲವಾರು ಡೀಪ್‌ಫೇಕ್ ವಿಡಿಯೋಗಳನ್ನು ನೋಡಿರುವುದಾಗಿ ಹೇಳಿಕೊಂಡಿದ್ದು, ಜನರ ನಂಬಿಕೆ ಉಳಿಸಿಕೊಳ್ಳಲು ಸೈಬರ್ ಭದ್ರತೆ ಬಲಪಡಿಸುವಂತೆ ಕರೆ ನೀಡಿದ್ದಾರೆ. ಮುಂಬೈನಲ್ಲಿ ನಡೆದ ವಾರ್ಷಿಕ ಗ್ಲೋಬಲ್ ಫಿನ್‌ಟೆಕ್ ಫೆಸ್ಟ್‌ನಲ್ಲಿ ಮಾತನಾಡಿದ ಸೀತಾರಾಮನ್ ಅವರು, ಕೃತಕ ಬುದ್ಧಿಮತ್ತೆ, ಹಣಕಾಸು, ಆಡಳಿತ ಮತ್ತು ದೈನಂದಿನ ಜೀವನವನ್ನು ಪರಿವರ್ತಿಸುತ್ತಿದೆ ಎಂದು ಹೇಳಿದರು.

ಅಂತಹವರ ವಿರುದ್ಧ ನಾವು ನಮ್ಮ ರಕ್ಷಣೆಯನ್ನು ಹೆಚ್ಚಿಸಬೇಕಾದ ತುರ್ತು ಅಗತ್ಯ ಇದೆ. ಫಿನ್‌ಟೆಕ್ ನಾವೀನ್ಯಕಾರರು, ಹೂಡಿಕೆದಾರರು ಮತ್ತು ನಿಯಂತ್ರಕರು ಸೇರಿದಂತೆ ಇಡೀ ಪರಿಸರ ವ್ಯವಸ್ಥೆಯು ಈ ವಿಷಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಹೇಳಿದರು.

ಬಿಡರಾಂ ಕೃಷ್ಣಪ್ಪನವರು ತಮಗೆ ಮನೆ ಕಟ್ಟದಿದ್ದರೂ 'ಪ್ರಸನ್ನ ಸೀತಾರಾಮಮಂದಿರ' ಕಟ್ಟಿದ್ದರು!



'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಆಯುಕ್ತ, ಹಿರಿಯ ರಂಗಕರ್ಮಿ ಎಚ್.ಎಸ್.ಗೋವಿಂದೇಗೌಡ, ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸಂಚಾಲಕ ಜಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರು, ಅ.7(ಎಸ್‌ಪಿಎನ್)– ಶ್ರೀರಾಮನ ಪರಮಭಕ್ತರಾದ ಬಿಡರಾಂಕೃಷ್ಣಪ್ಪನವರು ತಮ್ಮ ವಾಸಕ್ಕೆ ಮನೆ ಕಟ್ಟಿಕೊಳ್ಳದೇ, ಶ್ರೀರಾಮನಿಗಾಗಿ 'ಪ್ರಸನ್ನ ಸೀತಾರಾಮ ಮಂದಿರ' ಕಟ್ಟಿಸಿದ್ದಾರೆ. ಇದಕ್ಕೆ ಅವರ ಹೆಂಡತಿ ತಾಳಿಯನ್ನು ಮಾರಿದ ಹಣವು ಸೇರಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಆಯುಕ್ತ ಹಿರಿಯ ರಂಗಕರ್ಮಿ ಎಚ್.ಎಸ್.ಗೋವಿಂದೇಗೌಡ ಅಚ್ಚರಿ ವಿಚಾರ ಹೊರಹಾಕಿದರು.

ಮೈಸೂರು ರಾಮಕೃಷ್ಣನಗರ ವೃತ್ತದ ನೆಲಮಹಡಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ವೃತ್ತಿರಂಗ ಗೀತೆಗಳ ಗಾಯನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಒಮ್ಮೆ ಬಿಡರಾಂ ಕೃಷ್ಣಪ್ಪನವರ ತಂದೆ ವಿಶ್ವನಾಥಯ್ಯನವರ ಯಕ್ಷಗಾನದ ನಟನೆ ಮತ್ತು ಗಾಯನಕ್ಕೆ ಮಾರುಹೋಗಿ, ಮೈಸೂರು ಅರಮನೆಗೆ ಬಂದು ಕಾರ್ಯಕ್ರಮ ನೀಡುವಂತೆ ಆಹ್ವಾನಿಸಿದರು. ಒಡೆಯರ್ ಅವರ ಸೂಚನೆಯಂತೆ ವಿಶ್ವನಾಥಯ್ಯ ದಂಪತಿ ಅರಮನೆಯಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಮೈಸೂರಿಗೆ ಬಂದು ಬಿಡಾರ ಹೂಡಿದರು.


ವಿಶ್ವನಾಥಯ್ಯನವರು ಧರ್ಮಸ್ಥಳದ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಸ್ತ್ರೀಪಾತ್ರ ನಿರ್ವಹಿಸಿ ಉತ್ತಮ ಹೆಸರು ಗಳಿಸಿದ್ದರು. ಮೈಸೂರಿಗೆ ಬರುವಾಗ ತಮ್ಮ ಮಕ್ಕಳಾದ ಸುಬ್ಬರಾಯಪ್ಪ ಮತ್ತು ಕೃಷ್ಣಪ್ಪನವರನ್ನು ಕರೆದುಕೊಂಡು ಬಂದಿದ್ದರು. ಹೀಗೆ ಒಂದು ದಿನ ವಿಶ್ವನಾಥಯ್ಯನವರ ಹಠಾತ್ ನಿಧನದಿಂದ ಅವರ ಕುಟುಂಬ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿತು. ಲವಕುಶರಂತಿದ್ದ ಸುಬ್ಬರಾಯಪ್ಪ, ಕೃಷ್ಣಪ್ಪನವರು ಅಂದಿನ ಮೈಸೂರು ರಾಜಬೀದಿಗಳ ಸುತ್ತಿ ದೇವರನಾಮ ಹಾಡುತ್ತಾ, ಅದರಿಂದ ಬಂದ ಹಣದಿಂದ ನಿತ್ಯ ಜೀವನ ನಡೆಸುವಂತಹ ಪರಿಸ್ಥಿತಿ ಉಂಟಾದ ಪ್ರಸಂಗವನ್ನು ವಿವರಿಸಿದರು.

ಮುಂದೆ ಸಾಹುಕಾರ್ ತಿಮ್ಮಯ್ಯನವರ ಆರ್ಥಿಕ ಸಹಾಯದಿಂದ ವಿದ್ವಾನ್ ಕರೂರು ರಾಮಸ್ವಾಮಿ ಅವರ ಬಳಿ ಸಂಗೀತ ಶಿಕ್ಷಣ ಕಲಿತ ಬಿಡರಾಂ ಕೃಷ್ಣಪ್ಪನವರು, ಕಠಿಣ ಪರಿಶ್ರಮದಿಂದ ಸಂಗೀತದಲ್ಲಿ ಪರಿಣತಿ ಪಡೆದರು. ಮುಂದೆ ದೇವಸ್ಥಾನದಲ್ಲಿ ದೇವರ ನಾಮ ಹಾಡಿ, ಪ್ರಸಿದ್ಧರಾಗಿದ್ದ ಬಿಡರಾಂ ಕೃಷ್ಣಪ್ಪನವರು ಮುಂದೆ ಶ್ರೀರಾಮನ ಪರಮಭಕ್ತರಾಗಿ ಬೆಳೆದರು. ಕೃಷ್ಣಪ್ಪನವರು ಸ್ವಂತಕ್ಕೆ ಮನೆ ಕಟ್ಟಿಕೊಳ್ಳದೆ, ಶ್ರೀರಾಮನಿಗಾಗಿ ಮಂದಿರ ಕಟ್ಟಲು ತಮ್ಮ ಬಳಿಯಿದ್ದ ದುಡಿದ ಹಣವನ್ನೆಲ್ಲಾ ಕೂಡಿಸಿ, ಆ ಹಣವೂ ಸಾಲದಿದ್ದಾಗ ಹೆಂಡತಿಯ ಚಿನ್ನದ ತಾಳಿಯನ್ನು ಮಾರಿ ಮೈಸೂರಿನ ಶ್ರೀರಾಮಪೇಟೆಯಲ್ಲಿ 'ಪ್ರಸನ್ನ ಸೀತಾರಾಮಮಂದಿರ' ಕಟ್ಟಿಸಿ ಆ ಕಾಲಕ್ಕೆ ಆಸ್ತಿಕರಿಂದ ಸೈ ಎನಿಸಿಕೊಂಡಿದ್ದ ಪ್ರಸಂಗವನ್ನು ವಿವರಿಸಿದರು.

ಬಳಿಕ ಬಿಡರಾಂ ಕೃಷ್ಣಪ್ಪನವರು 'ದಶಾವತಾರ' ನಾಟಕದಲ್ಲಿ ಶ್ರೀರಾಮನ ಕುರಿತಾದ 'ಶ್ರೀರಾಮ ಜಯರಾಮ' ಸೇರಿದಂತೆ ಇತರೆ ರಂಗಗೀತೆಗಳನ್ನು ಹಾಡಿ ಪ್ರೇಕ್ಷಕರಿಂದ ಮೆಚ್ಚುಗೆ ಪಡೆದರು. ವೇದಿಕೆಯಲ್ಲಿ ಶ್ರೀರಾಮಕೃಷ್ಣ ಪರಮಹಂಸ ಸೇವಾ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಎಸ್.ಪುರುಷೋತ್ತಮ್, ಸಂಚಾಲಕ ಜಿ.ಚಂದ್ರಶೇಖರ್ ಉಪಸ್ಥಿತರಿದ್ದರು. ವೃತ್ತಿ ರಂಗಗೀತೆಗಳನ್ನು ಗಾಯಕ ಎಚ್.ಎಸ್.ಗೋವಿಂದೇ ಗೌಡ ಹಾಡಿದರು. ಇವರಿಗೆ ಕಿರಗಸೂರು ರಾಜಪ್ಪ (ಹಾರ್ಮೋನಿಯಂ), ಪುರುಷೋತ್ತಮ್ (ಕೀ ಬೋರ್ಡ್), ಜಯರಾಮ್ ತಬಲ ನುಡಿಸಿ ಕಾರ್ಯಕ್ರಮಕ್ಕೆ ಮೆರಗು ತಂದರು.

ಪ್ರತಿಯೊಬ್ಬರ ಅರ್ಥಪೂರ್ಣ ಬದುಕಿಗೆ ರಾಮಾಯಣ ಸಹಕಾರಿ

ವಾಲ್ಮೀಕಿ ಜಯಂತಿಯಲ್ಲಿ ಶಾಸಕ ದರ್ಶನ್



ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು, ಅ.7– ಮಹರ್ಷಿ ವಾಲ್ಮೀಕಿ ರಚಿಸಿರುವ ರಾಮಾಯಣ ಕೃತಿ ಇಡೀ ವಿಶ್ವಕ್ಕೆ ಪವಿತ್ರಗ್ರಂಥ ಎನಿಸಿದೆ. ರಾಮಾಯಣ ಕೃತಿ ಪ್ರತಿಯೊಬ್ಬರೂ ಹೇಗೆ ಅರ್ಥಪೂರ್ಣವಾಗಿ ಜೀವನ ಸಾಗಿಸಬೇಕು ಎಂಬ ಜೀವನದ ಮೌಲ್ಯಗಳನ್ನು ಸಾರುತ್ತದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ರಾಮಾಯಣ ಗ್ರಂಥದ ಮೂಲಕ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದವರು. ಅವರು ರಚಿಸಿರುವ ರಾಮಾಯಣ ಕೃತಿ ಕೌಟುಂಬಿಕ ಜೀವನದಲ್ಲಿ ತಂದೆ, ತಾಯಿ, ಸಹೋದರರು ಮತ್ತು ಪ್ರಜೆಗಳು ಹೇಗೆ ಅರ್ಥಪೂರ್ಣ ಜೀವನ ಸಾಗಿಸಬೇಕು ಎಂಬ ಜೀವನದ ಪಾಠ ಕಲಿಸುತ್ತದೆ. ಅಲ್ಲದೇ ಜನಸಾಮಾನ್ಯರಿಗೆ ಜೀವನದ ಮೌಲ್ಯಗಳನ್ನು ಉಪದೇಶ ಮಾಡುತ್ತದೆ. ಆದ್ದರಿಂದಲೇ ರಾಮಾಯಣ ಕೇವಲ ಕಥೆಯಲ್ಲ ನಮ್ಮ ಜೀವನದ ಪರಿಪಾಠ. ಮಹರ್ಷಿ ವಾಲ್ಮೀಕಿ ಅವರು ಸಾರಿರುವ ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವುದೇ ನಾವು ಅವರಿಗೆ ಕೊಡುವ ಗೌರವವಾಗಿದೆ. ನಂಜನಗೂಡಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತೋತ್ಸವವನ್ನು ಇಂದು ಸರಳವಾಗಿ ಆಚರಿಸಲಾಗಿದೆ. ಮುಂಬರುವ ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ಆಹ್ವಾನಿಸಿ ದಿನಾಂಕ ನಿಗದಿಪಡಿಸಿ ಅದ್ಧೂರಿಯಾಗಿ ಆಚರಿಸಲಾಗುವುದು ಎಂದರು.

ಮುಖ್ಯ ಭಾಷಣಕಾರ ಬಸವಯೋಗಿ ಅವರು ಮಹರ್ಷಿ ವಾಲ್ಮೀಕಿ ಅವರ ಜೀವನ ಕುರಿತು ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಶ್ರೀಕಂಠ ನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ತಾಲೂಕು ನಾಯಕರ ಸಂಘದ ಅಧ್ಯಕ್ಷ ನಾಗರಾಜು, ಮುಖಂಡರಾದ ಮಹೇಶ್, ರವಿಕುಮಾರ್, ತಗಡೂರು ನಾಯಕ, ಹೊಣಕಾರ ನಾಯಕ, ಬಂಗಾರಸ್ವಾಮಿ, ಶಿವನಂಜ ನಾಯಕ, ರಂಗಸ್ವಾಮಿ, ಮಂಜುನಾಥ್, ಅಬ್ದುಲ್ ಖಾದರ್, ಮುರುಗೇಶ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ಜಿಪಂ ಮಾಜಿ ಸದಸ್ಯ ಚೋಳರಾಜು, ತಾಪಂ ಮಾಜಿ ಅಧ್ಯಕ್ಷ ಚಾಮರಾಜು, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ತಾಲೂಕು ಅಧ್ಯಕ್ಷ ಸತೀಶ್‌ರಾವ್, ದಸಂಸ ಸಂಚಾಲಕರಾದ ನಾರಾಯಣ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್ ಸೇರಿದಂತೆ ಹಲವರಿದ್ದರು.

6 ಬುದ್ಧ, ಬಸವ, ಅಂಬೇಡ್ಕರ್ ಮತ್ತು ವಾಲ್ಮೀಕಿ ಮಹರ್ಷಿಗಳು ಸೇರಿದಂತೆ ದಾರ್ಶನಿಕರು ಕೇವಲ ಒಂದು ಧರ್ಮ, ಜಾತಿಗೆ ಸೀಮಿತರಲ್ಲ. ಅವರು ದೇಶದ ಆಸ್ತಿ. ಮಹರ್ಷಿ ವಾಲ್ಮೀಕಿ ರಾಮಾಯಣ ಕೃತಿಯಲ್ಲಿ 24 ಸಾವಿರ ಸಂಸ್ಕೃತ ಶ್ಲೋಕಗಳನ್ನು ರಚಿಸಿದ್ದಾರೆ. ಈ ಕೃತಿಯು ಸಂಸ್ಕೃತದ ಪ್ರಥಮ ಕೃತಿ ಎನಿಸಿದೆ. ರಾಮಾಯಣ ಕೃತಿ ಪ್ರಸ್ತುತ ನಾಟಕದ ಮೂಲಕ ಜನಸಾಮಾನ್ಯರಿಗೆ ಜೀವನದ ಮೌಲ್ಯಗಳನ್ನು ಬಿತ್ತುವ ಮೂಲಕ ಸಮಾಜಕ್ಕೆ ಸಂದೇಶ ಸಾರಿ ಸಮಾಜ ಪರಿವರ್ತನೆಗೆ ಕಾರಣವಾಗುತ್ತಿದೆ.

– ಎಸ್.ಸಿ.ಬಸವರಾಜು, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ.

ಕೋಟೆಯಲ್ಲಿ ಅದ್ಧೂರಿ ವಾಲ್ಮೀಕಿ ಜಯಂತಿ

ತಾಲೂಕಿನಲ್ಲಿ ನಾಯಕ ಸಮುದಾಯ ಒಗ್ಗಟ್ಟಾಗಿದೆ: ಶಾಸಕ ಅನಿಲ್





ವಾಲ್ಮೀಕಿ ಜಯಂತಿಯನ್ನು ಶಾಸಕ ಅನಿಲ್ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ, ಲವ, ಕುಶರನ್ನು ಸ್ತಬ್ಧ ಚಿತ್ರದಲ್ಲಿ ಕಾಣಬಹುದು.

ಹೆಚ್.ಡಿ.ಕೋಟೆ, ಅ.7– ಪ್ರಪಂಚದ ಯಾವುದೇ ಮೂಲೆಗೆ ಹೋದರೂ ಹಲವು ಪರಂಪರೆಗಳನ್ನು ನೋಡುತ್ತೇವೆ. ಅದರಲ್ಲಿ ಪ್ರಮುಖವಾಗಿ ವಾಲ್ಮೀಕಿಯವರು ಹಾಕಿಕೊಟ್ಟ ಪರಂಪರೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ತಾಲೂಕಿನಲ್ಲಿ ನಾಯಕ ಸಮುದಾಯ ಒಗ್ಗಟ್ಟಾಗಿದೆ ಎಂಬುದಕ್ಕೆ ವಾಲ್ಮೀಕಿ ಜಯಂತಿ ಕಾರ್ಯಕ್ರಮವೇ ಸಾಕ್ಷಿ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕು ನಾಯಕ ಸಮಾಜ ಹಾಗೂ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು, ಚಾಮರಾಜನಗರ ಸೇರಿದಂತೆ ಬೇರೆ ಎಲ್ಲಾ ಜಿಲ್ಲೆಗಳಿಗಿಂತ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವಿಶಿಷ್ಟವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಾರಿ ನಾಯಕ ಸಮುದಾಯದ ಎಲ್ಲಾ ಹಿರಿಯ ಮುಖಂಡರು ಪಕ್ಷಾತೀತವಾಗಿ ಒಗ್ಗೂಡಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿರುವುದು ಹರ್ಷ ತಂದಿದೆ ಎಂದರು.

ತಾಲೂಕಿನ ಕೇಂದ್ರ ಸ್ಥಾನದಲ್ಲಿ ನಿರ್ಮಾಣವಾಗುತ್ತಿರುವ ಹೈಟೆಕ್ ವಾಲ್ಮೀಕಿ ಭವನ ಸದ್ಯದಲ್ಲೇ ಪೂರ್ಣಗೊಳ್ಳಲಿದ್ದು, ಮಾರ್ಚ್‌ನಲ್ಲಿ ಉದ್ಘಾಟಿಸಲು ಮುಖ್ಯಮಂತ್ರಿಗಳನ್ನು ಆಹ್ವಾನಿಸಿ ಅವರ ಸಮ್ಮುಖದಲ್ಲಿ ಸಾಮೂಹಿಕ ವಿವಾಹ ನಡೆಸಲಾಗುವುದು ಎಂದರು.

ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಬರೆಯುವ ಮೂಲಕ ದೊಡ್ಡ ಜ್ಞಾನಿಗಳಾಗಿದ್ದಾರೆ. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಾಲ್ಮೀಕಿ ಜಯಂತಿಯನ್ನು ಸಮಾಜದ ಪ್ರತಿಯೊಬ್ಬರೂ ಒಗ್ಗಟ್ಟಿನಿಂದ ಆಚರಿಸಬೇಕು. ಚುನಾವಣೆ ಸಂದರ್ಭ ರಾಜಕೀಯ ಮಾಡಬೇಕೇ ಹೊರತು ಮಹನೀಯರ ಜಯಂತಿಯಲ್ಲಿ ರಾಜಕೀಯ ಮಾಡಬಾರದು ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ವಾಲ್ಮೀಕಿ ವೃತ್ತದಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಶಾಸಕ ಅನಿಲ್ ಪುಷ್ಪಾರ್ಚನೆ ನೆರವೇರಿಸಿ, ಮೆರವಣಿಗೆಗೆ ಚಾಲನೆ ನೀಡಿದರು. ಬೆಳ್ಳಿರಥದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರ ಮೆರವಣಿಗೆ ಮಂಗಳ ವಾದ್ಯ, ನಂದಿ ಕಂಬ, ಸತ್ತಿಗೆ, ವೀರಗಾಸೆ, ಪೂರ್ಣಕುಂಭ ಕಳಸ, ಚಂಡೆ, ಕಂಸಾಳೆ, ಡೊಳ್ಳು ಕುಣಿತ, ನಗಾರಿ, ಚಿಲಿಪಿಲಿ ಗೊಂಬೆ, ಡಿಜೆ, ವಾಲ್ಮೀಕಿ ಸ್ತಬ್ಧ ಚಿತ್ರಗಳೊಂದಿಗೆ ಪಟ್ಟಣದ ಮೊದಲ ಮುಖ್ಯರಸ್ತೆ ಮೂಲಕ ಸಾಗಿ ಅಂಬೇಡ್ಕರ್ ಭವನದಲ್ಲಿ ಸಮಾವೇಶಗೊಂಡಿತು.

ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಹಾಗೂ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನಾಯಕ ಸಮಾಜದ ತಾಲೂಕು ಅಧ್ಯಕ್ಷರಾದ ಎಂ.ಸಿ.ದೊಡ್ಡ ನಾಯಕ, ಬಸವರಾಜು, ಮಾಜಿ ಅಧ್ಯಕ್ಷ ಶಂಭುಲಿಂಗ ನಾಯಕ, ಪುರಸಭಾಧ್ಯಕ್ಷೆ ಶಿವಮ್ಮ, ಮುಖಂಡರಾದ ಜಯಪ್ರಕಾಶ್ ಚಿಕ್ಕಣ್ಣ, ಚಿಕ್ಕವೀರ ನಾಯಕ, ಕ್ಯಾತನಹಳ್ಳಿ ನಾಗರಾಜು, ಶ್ರೀನಿವಾಸ್, ಉದ್ಯಮಿ ನಿಂಗರಾಜು, ಜಿನ್ನಹಳ್ಳಿ ರಾಜನಾಯಕ, ಜಿಯಾರ ನಾಗ ನಾಯಕ, ಕೃಷ್ಣ, ತಹಸೀಲ್ದಾರ್‌ಗಳಾದ ಶ್ರೀನಿವಾಸ್, ಮೋಹನ್ ಕುಮಾರಿ, ಪ.ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್, ಅಧೀಕ್ಷಕ ನಾಗರಾಜು, ಷಣ್ಮುಖ ಆರಾಧ್ಯ, ಇಓಗಳಾದ ಧರಣೇಶ್, ಪ್ರೇಮ್ ಕುಮಾರ್, ಪುರಸಭಾ ಸದಸ್ಯರಾದ ಮಧುಕುಮಾರ್, ಹೆಚ್.ಸಿ.ನರಸಿಂಹಮೂರ್ತಿ, ನಾಗರಾಜು, ಗೀತಾ, ಶಾಂತಮ್ಮ, ಸುಹಾಸಿನಿ, ಯಶೋಧಮ್ಮ ಅನಿತಾ, ಈರೇಗೌಡ, ರವಿ, ಏಜಾಜ್ ಪಾಷ, ಮಾದಪ್ಪ, ಪ್ರದೀಪ್ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

ರಾಮಾಯಣ ರಚಿಸಿದ ವಾಲ್ಮೀಕಿ ಮಹಾನ್ ದಾರ್ಶನಿಕ

ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಬಣ್ಣನೆ



ಹೆಚ್.ಡಿ.ಕೋಟೆ ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ನಡೆಯಿತು.

ಹೆಚ್.ಡಿ.ಕೋಟೆ, ಅ.7– ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯ ರಚಿಸುವ ಮೂಲಕ ಮಹಾನ್ ದಾರ್ಶನಿಕರಾಗಿದ್ದಾರೆ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಬಣ್ಣಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ವಾಲ್ಮೀಕಿ ಅವರು ರಾಮಾಯಣದಲ್ಲಿ ಸೃಷ್ಟಿಸಿರುವ ಪಾತ್ರಗಳ ಮೂಲಕ ಸಮಾಜಕ್ಕೆ ಸಾಕಷ್ಟು ಸಂದೇಶ ನೀಡಿದ್ದಾರೆ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ನಾಯಕ ಸಮಾಜಕ್ಕೆ ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯ ಮೀಸಲಾತಿ ನೀಡುವ ಮೂಲಕ ಸಮಾಜದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಶ್ರೀವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರನ್ನು ಆಹ್ವಾನಿಸಿ ಪಟ್ಟಣದಲ್ಲಿ ವಿಜೃಂಭಣೆಯಿಂದ ವಾಲ್ಮೀಕಿ ಜಯಂತಿ ಆಚರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ಮಹೇಂದ್ರ, ಶಿವಕುಮಾರ, ಮಹಿಳಾ ಅಧ್ಯಕ್ಷರಾದ ಗಾಯತ್ರಿ, ಸವಿತಾ, ಹೆಚ್.ಡಿ.ಕೋಟೆ, ಸರಗೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷರಾದ ಹರೀಶ್, ಸುಧೀಂದ್ರ, ಮುಖಂಡರಾದ ಹೊಸಮಾಳ ನಿಂಗೇಗೌಡ, ಓ.ಕೆ.ಮಹೇಂದ್ರ, ಪರಶಿವಮೂರ್ತಿ, ಕೃಷ್ಣಾಪುರ ಶಿವಯ್ಯ, ಬೆಟ್ಟನಾಯಕ, ಶಂಕರ್, ಹೆಬ್ಬಲಗುಪ್ಪೆ ಕೃಷ್ಣ, ದೇವಣ್ಣ, ವಾಲ್ಮೀಕಿ ಸಂಘದ ತಾಲೂಕು ಅಧ್ಯಕ್ಷ ಗಣೇಶ, ಅಂಕನಾಥಪುರ ಸ್ವಾಮಿ, ಮಾದಾಪುರ ನಂಜನಾಯ್ಕ, ಹೊಸಕೋಟೆ ಮಹೇಂದ್ರ, ರೈತ ಸಂಘದ ಟೌನ್ ಅಧ್ಯಕ್ಷ ಡಿ.ದೇವನಾಯಕ, ಸಹಕಾರ ಸಂಘದ ಮಾಜಿ ಅಧ್ಯಕ್ಷ ಮರಿನಾಯ್ಕ, ಸೋಗಳ್ಳಿ ಚಿಕ್ಕ ತಿಮ್ಮನಾಯ್ಕ, ಸೋಮನಾಯಕ, ಕ್ಯಾತನಾಯಕ, ನಾಗರಾಜು, ಬಸಾಪುರ ತಿಮ್ಮನಾಯಕ, ವೈಕುಂಠ ನಾಯಕ, ಮಾದಯ್ಯ, ದೇವರಾಜು, ಧನರಾಜ್, ಕದಂಬ, ಪಟೇಲ್ ನಾಗರಾಜ ಶೆಟ್ಟಿ, ಶಂಕರ, ಉದಯ್, ಚಿನ್ನಸ್ವಾಮಿ, ದೇವೇಶ್, ಗೋವಿಂದರಾಜು ಸೇರದಂತೆ ಇನ್ನಿತರರಿದ್ದರು.

ಕಂಪಲಾಪುರದಲ್ಲಿ ವಾಲ್ಮೀಕಿ ಜಯಂತಿ



ಕಂಪಲಾಪುರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ನಡೆಯಿತು. ಗ್ರಾಪಂ ಸದಸ್ಯ ಕೆ.ಎನ್.ಸೋಮಶೇಖರ್, ಮಾಜಿ ಉಪಾಧ್ಯಕ್ಷ ನಾಗ, ರಾಜನಾಯಕ, ರಾಜೇಂದ್ರ, ನಾಗನಾಯಕ, ಗಣೇಶ, ನಟೇಶ, ಮಂಜು ಇತರರಿದ್ದರು.

ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಾಲ್ಮೀಕಿ ಜಯಂತಿ



ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲೆ ವಿಭಾಗದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಪ್ರೌಢಶಾಲೆ ವಿಭಾಗದ ಅಧ್ಯಾಪಕ ವೃಂದ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಜಯಪುರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ಮೈಸೂರು ತಾಲೂಕಿನ ಜಯಪುರ ಗ್ರಾಮದ ವಾಲ್ಮೀಕಿ ಸಂಘದಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಮುಖಂಡರಾದ ಜವರನಾಯಕ, ಮಹದೇವಯ್ಯ, ನಾಗರಾಜು, ರೇಣುಕಾ, ಮಂಜುನಾಥ್, ಭೈರೇಶ್, ಶಿವರಾಜು, ಭೀಮನಾಯಕ, ಕೆಂಪನಾಯಕ, ರವಿ, ಎಂ.ರಂಗಸ್ವಾಮಿ, ಮಹೇಶ್, ಗುಜ್ಜನಾಯಕ ಇತರರಿದ್ದರು.

ಇಡೀ ಮನುಕುಲಕ್ಕೆ ಬೇಕಾದ ಮಹಾನ್ ಸಂತ ವಾಲ್ಮೀಕಿ

ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್



ತಿ.ನರಸೀಪುರ ಪುರಸಭೆಯಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಅ.7– ಪಟ್ಟಣದ ಪುರಸಭೆ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಾತನಾಡಿ, ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ. ಬದಲಿಗೆ ಇಡೀ ಮನು ಕುಲಕ್ಕೆ ಬೇಕಾದ ಮಹಾನ್ ಸಂತ. ರಾಮಾಯಣ ಮಹಾಕಾವ್ಯದ ಮೂಲಕ ನಾವು ಹೇಗೆ ಮೌಲ್ಯಯುತ ಬದುಕು ಕಟ್ಟಿಕೊಳ್ಳಬೇಕು ಎಂಬುದನ್ನು ವಾಲ್ಮೀಕಿ ತಿಳಿಸಿಕೊಟ್ಟಿದ್ದಾರೆ. ಆ ಮಹಾನ್ ದಾರ್ಶನಿಕರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕಾಗಿದೆ ಎಂದರು. ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಸದಸ್ಯರಾದ ಎಸ್.ಕೆ.ಕಿರಣ್, ಸಿದ್ದು, ರೂಪ ಪರಮೇಶ್, ಜೋಗಿ ನಾಗರಾಜು, ಸಬಿಲ್ ಖಾನ್, ಮುಖ್ಯ ಅಧಿಕಾರಿ ತ್ರಿವೇಣಿ, ಮಾಜಿ ಅಧ್ಯಕ್ಷ ರಾಘವೇಂದ್ರ, ಮುಖಂಡ ಮಾದೇಶ್, ರಾಜು ಹಾಜರಿದ್ದರು.

ಮಹನೀಯರನ್ನು ಜಾತಿ ವ್ಯವಸ್ಥೆಗೆ ಸೀಮಿತಗೊಳಿಸುವುದು ಸರಿಯಲ್ಲ



ಉದ್ದೂರ್ ಕಾವಲ್ ಗ್ರಾಪಂನಲ್ಲಿ ವಾಲ್ಮೀಕಿ ಜಯಂತಿ ನಡೆಯಿತು.

ಹುಣಸೂರು, ಅ.7– ಭಾರತದ ಸಾಮಾಜಿಕ ನೆಲೆಗಟ್ಟಿನ ವ್ಯವಸ್ಥೆಯಲ್ಲಿ ಪ್ರತಿ ಹಂತದಲ್ಲೂ ಜಾತಿ ವ್ಯವಸ್ಥೆ ಇದ್ದರೂ ಮಹಾಪುರುಷರನ್ನು ಜಾತಿ ವ್ಯವಸ್ಥೆಗೆ ಸೀಮಿತಗೊಳಿಸುವುದು ಸರಿಯಲ್ಲ ಎಂದು ಉದ್ದೂರ್ ಕಾವಲ್ ಗ್ರಾಪಂ ಸದಸ್ಯ ಮನುಕುಮಾರ್ ತಿಳಿಸಿದರು.

ತಾಲೂಕಿನ ರತ್ನಪುರಿ ಗ್ರಾಮದ ಉದ್ದೂರ್ ಕಾವಲ್ ಗ್ರಾಪಂನಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಇಡೀ ವಿಶ್ವಕ್ಕೆ ದಾರ್ಶನಿಕರು, ಮಾರ್ಗದರ್ಶಕರನ್ನು ಕೊಡುಗೆ ನೀಡಿದ ರಾಷ್ಟ್ರ ನಮ್ಮದು. ಇಂತಹ ದೇಶದಲ್ಲಿ ಯಾವುದೇ ಆಚರಣೆಗಳು ಒಂದು ವರ್ಗಕ್ಕೆ ಸೀಮಿತಗೊಳ್ಳದೇ ಎಲ್ಲರೂ ಸೇರಿ ಸಾರ್ವತ್ರಿಕವಾಗಿ ಆಚರಿಸಬೇಕು. ಇದರಿಂದ ಸ್ನೇಹ, ಸೌಹಾರ್ದತೆ ಮೂಡಿ ಒಬ್ಬರನ್ನು ಒಬ್ಬರು ಅರಿತು ಬಾಳಲು ಸಾಧ್ಯವಾಗುತ್ತದೆ ಎಂದರು.

ವಾಲ್ಮೀಕಿ ಅವರು ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆ ಒಗ್ಗೂಡಿಸುವ ಸಲುವಾಗಿ ಮಹಾಕಾವ್ಯ ರಾಮಾಯಣವನ್ನು ರಚಿಸಿದರು. ಆದರೆ ರಾಮಾಯಣ ಓದುವ ಪ್ರತಿಯೊಬ್ಬರೂ ಅದನ್ನು ಎಷ್ಟರ ಮಟ್ಟಿಗೆ ಅರ್ಥೈಸಿ ಕೊಂಡಿದ್ದಾರೆ ಎಂಬುದು ಇಂದಿಗೂ ಪ್ರಶ್ನೆಯಾಗಿ ಉಳಿದುಕೊಂಡಿದೆ ಎಂದರು.

ಪಿಡಿಓ ಅರುಣ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಮೀನಾ, ಉಪಾಧ್ಯಕ್ಷೆ ಶಾಂತಿ, ಸದಸ್ಯರಾದ ಗೌರಮ್ಮ, ಗೋವಿಂದಶೆಟ್ಟಿ, ರಾಮಬೋವಿ, ವೀರಭದ್ರ, ಗ್ರಾಮ ಲೆಕ್ಕಿಗ ಕಿರಣ್ ಕುಮಾರ್ ಸೇರಿದಂತೆ ಇತರರಿದ್ದರು.

ವಿಶೇಷಚೇತನರ ಶಾಲೆಯಲ್ಲಿ ವಾಲ್ಮೀಕಿ ಜಯಂತಿ



ಮೈಸೂರು ಶ್ರೀರಾಂಪುರದಲ್ಲಿರುವ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷಚೇತನರ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಸಮಾಜ ಸೇವಕ ಎಸ್.ಶ್ರೀಕಾಂತ್ ಮಕ್ಕಳಿಗೆ ಸಿಹಿ ವಿತರಿಸಿದರು. ಟ್ರಸ್ಟ್ ಅಧ್ಯಕ್ಷ ಮರೀಗೌಡ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

ರಾಮಾಯಣ ದೇಶ, ಭಾಷೆಗೆ ಸೀಮಿತವಲ್ಲ; ಜಾಗತಿಕವಾಗಿ ಆರಾಧನೆ

ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಡಿ.ಬಸವರಾಜು



ಮಹರ್ಷಿ ವಾಲ್ಮೀಕಿ ಭಾವಚಿತ್ರ ಮೆರವಣಿಗೆಗೆ ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಡಿ.ಬಸವರಾಜು ಚಾಲನೆ ನೀಡಿದರು.

ತಿ.ನರಸೀಪುರ, ಅ.7– ಮಹರ್ಷಿ ವಾಲ್ಮೀಕಿ ರಚಿಸಿದ ರಾಮಾಯಣ ಮಹಾಕಾವ್ಯ ಇಡೀ ವಿಶ್ವಕ್ಕೆ ಭಾರತ ನೀಡಿದ ಬಹುದೊಡ್ಡ ಸಾಹಿತ್ಯ ಕೊಡುಗೆಯಾಗಿದೆ. ವಾಲ್ಮೀಕಿ ರಾಮಾಯಣ ದೇಶ, ಭಾಷೆಗೆ ಸೀಮಿತಗೊಳ್ಳದೆ ಜಾಗತಿಕವಾಗಿ ಆರಾಧಿಸಲ್ಪಟ್ಟಿದೆ ಎಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಡಿ.ಬಸವರಾಜು ತಿಳಿಸಿದರು.

ತಾಲೂಕು ಆಡಳಿತ ಮತ್ತು ಪ.ವರ್ಗಗಳ ಕಲ್ಯಾಣ ಇಲಾಖೆ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ನಾಯಕರ ಸಂಘದ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತೋತ್ಸವಕ್ಕೂ ಮುನ್ನಾ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಬಳಿ ಸ್ತಬ್ಧ ಚಿತ್ರಗಳ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಜನ ಸಮುದಾಯದ ಎಲ್ಲಾ ಸಮಸ್ಯೆಗಳು, ಸಂಕಟಗಳು, ಸವಾಲುಗಳಿಗೆ ವಾಲ್ಮೀಕಿ ರಾಮಾಯಣದಲ್ಲಿ ಉತ್ತರ ಸಿಗುತ್ತದೆ. ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳುವುದು ಸೇರಿದಂತೆ ಉತ್ತಮ ಸಮಾಜ ನಿರ್ಮಾಣದ ಮಹತ್ವದ ಸಂಗತಿಗಳನ್ನು ರಾಮಾಯಣ ಮಹಾಕಾವ್ಯದಿಂದ ನಾವು ಕಲಿಯಬಹುದಾಗಿದೆ. ಜಾತಿ, ಧರ್ಮದ ಹೆಸರಿನಲ್ಲಿ ಮನುಷ್ಯ–ಮನುಷ್ಯರ ನಡುವಿನ ಸಂಬಂಧಗಳು ಕುಸಿಯುತ್ತಿರುವ ಪ್ರಸ್ತುತ ದಿನಗಳಲ್ಲಿ ಮಹರ್ಷಿ ವಾಲ್ಮೀಕಿ ಅವರು ರಚಿಸಿದ ಮಹಾಕಾವ್ಯ ದಾರಿದೀಪವಾಗಿ ತೋರುತ್ತದೆ ಎಂದರು.

ಮುಖ್ಯ ಭಾಷಣಕಾರ ಉಪನ್ಯಾಸಕ ಕುಮಾರಸ್ವಾಮಿ ಮಾತನಾಡಿ, ಹಿಂದೂ ಧರ್ಮಕ್ಕೆ ನೀಡಿದ ಅಪ್ರತಿಮ ಕೊಡುಗೆಗಾಗಿ ಮಹರ್ಷಿ ವಾಲ್ಮೀಕಿ ಅವರನ್ನು ಪೂಜಿಸಲಾಗುತ್ತದೆ. ವಾಲ್ಮೀಕಿ ಮಹರ್ಷಿಯವರ ಹೆಸರು ಮೊದಲು ರತ್ನಾಕರ ಎಂದಾಗಿದ್ದು, ವಾಲ್ಮೀಕಿಯವರು ಮಹರ್ಷಿಗಳಾಗಿ ಬದಲಾಗುವುದಕ್ಕೂ ಮುನ್ನ ದರೋಡೆಕೋರರಾಗಿದ್ದರು. ಅವರು ರಸ್ತೆಯಲ್ಲಿ ಸಂಚರಿಸುತ್ತಿದ್ದ ಪ್ರತಿಯೊಬ್ಬರನ್ನು ದರೋಡೆ ಮಾಡುತ್ತಿದ್ದರು. ಒಮ್ಮೆ ಅವರು ದರೋಡೆ ಮಾಡಲು ಹೋಗುತ್ತಿದ್ದಾಗ ಅವರಿಗೆ ನಾರದ ಮಹರ್ಷಿಗಳು ಎದುರಾಗಿ ರಾಮನ ಭಕ್ತಿಯ ಕಡೆಗೆ ಮಾರ್ಗದರ್ಶನ ನೀಡುತ್ತಾರೆ. ಇದರಿಂದಾಗಿ ರತ್ನಾಕರನಾಗಿದ್ದ ವಾಲ್ಮೀಕಿಯವರ ಜೀವನ ಬದಲಾವಣೆ ಪಡೆಯುತ್ತದೆ. ವರ್ಷಗಳ ಕಾಲ ತಪಸ್ಸು ಮಾಡಿದರು. ರಾಮ ನಾಮ ಪಠಣದ ಮೂಲಕ ರತ್ನಾಕರ ಆಧ್ಯಾತ್ಮಿಕ ಜ್ಞಾನೋದಯವನ್ನು ಪಡೆದು ಮಹರ್ಷಿ ವಾಲ್ಮೀಕಿಯಾದರು. ದರೋಡೆಕೋರನಿಂದ ಋಷಿಯಾಗಿ ಅವರ ಪ್ರಯಾಣವು ಪಶ್ಚಾತ್ತಾಪ, ಭಕ್ತಿ ಮತ್ತು ರೂಪಾಂತರದ ಶಕ್ತಿ ಸಂಕೇತಿಸುತ್ತದೆ. ಲಕ್ಷಾಂತರ ಭಕ್ತರಿಗೆ ಸದಾಚಾರದ ಮಾರ್ಗ ಅನುಸರಿಸಲು ಪ್ರೇರೇಪಿಸುತ್ತದೆ ಎಂದರು.

ಗಮನ ಸೆಳೆದ ಮೆರವಣಿಗೆ


ಕಾರ್ಯಕ್ರಮಕ್ಕೆ ಮುನ್ನಾ ವಿವಿಧ ಸ್ತಬ್ಧ ಚಿತ್ರಗಳು ಹಾಗೂ ಮಹರ್ಷಿ ವಾಲ್ಮೀಕಿ ಭಾವಚಿತ್ರ ಮೆರವಣಿಗೆಗೆ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಚಾಲನೆ ನೀಡಿದರು.

ಈ ವೇಳೆ ಮೆರವಣಿಗೆ ವಿಶ್ವಕರ್ಮ ರಸ್ತೆ, ಭಗವಾನ್ ಚಿತ್ರಮಂದಿರ ವೃತ್ತ, ಲಿಂಕ್ ರಸ್ತೆ, ಕಾಲೇಜು ರಸ್ತೆ ಮೂಲಕ ತಾಲೂಕು ಕಚೇರಿ ತಲುಪಿತು. ಮೆರವಣಿಗೆಯಲ್ಲಿ ವಿವಿಧ ಹೂಗಳಿಂದ ಅಲಂಕರಿಸಲಾಗಿದ್ದ ಬೆಳ್ಳಿ ಪಲ್ಲಕ್ಕಿಯಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರವಿಟ್ಟು ವಿವಿಧ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ, ವೀರಭದ್ರ ಕುಣಿತ, ಬೊಂಬೆ ಕುಣಿತ, ಡೊಳ್ಳು, ನಗಾರಿ ಹಾಗೂ ಸ್ತಬ್ಧ ಚಿತ್ರಗಳು ಸಾರ್ವಜನಿಕರ ಗಮನ ಸೆಳೆಯಿತು.

ಈ ವೇಳೆ ಕಾವೇರಿ ಗ್ರಾಮೀಣ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಮಹದೇವಣ್ಣ, ಪೈಲ್ವಾನ್ ಕುಮಾರ, ಸಿದ್ದರಾಜು, ಇಂದ್ರೇಶ್ ಹಾಗೂ ತಲಕಾಡಿನ ರೈತ ಮುಖಂಡ ದಿನೇಶ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್, ಪ.ವರ್ಗಗಳ ಕಲ್ಯಾಣ ಅಧಿಕಾರಿ ಎಂ.ಎನ್.ಕೋಮಲ, ತಾಲೂಕು ನಾಯಕರ ಸಂಘದ ಗೌರವಾಧ್ಯಕ್ಷ ಮಂಜುನಾಥನ್, ಮಾಜಿ ಅಧ್ಯಕ್ಷ ಹೊನ್ನನಾಯಕ, ಪ್ರಧಾನ ಕಾರ್ಯದರ್ಶಿ ನಾಗರಾಜು, ಖಜಾಂಚಿ ಗೋವಿಂದ, ಜಿಪಂ ಮಾಜಿ ಸದಸ್ಯರಾದ ಕೆ.ಸಿ.ಲೋಕೇಶ್, ಸುಧಾಮಣಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ, ಹೊನ್ನಯ್ಯ, ಸೋಮಣ್ಣ ನಾಯಕ, ಕಾಂತರಾಜು, ನಾಗು, ರಾಜೇಶ್, ನಿವೃತ್ತ ಕೃಷಿ ಅಧಿಕಾರಿ ಡಾ.ಮಹದೇವಯ್ಯ, ಸಾಗರ್, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ, ಸೋಸಲೆ ಸುಂದರನಾಯಕ್, ಮೀನುಗಾರರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ತಾಪಂ ಮಾಜಿ ಸದಸ್ಯ ಗಣೇಶ್, ರಾಮಲಿಂಗಯ್ಯ, ಪ್ರಸನ್ನ, ಶಂಕರ್, ಪುರಸಭೆ ಸದಸ್ಯ ಶಿವಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಲೋಕೋಪಯೋಗಿ ಎಇಇ ಸತೀಶ್‌ಚಂದ್ರ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ವಿವಿಧ ಗ್ರಾಮಗಳ ನಾಯಕ ಜನಾಂಗದ ಯಜಮಾನರು, ಮುಖಂಡರು ಹಾಜರಿದ್ದರು.

ಪುಟ್ಟಸ್ವಾಮಿಗೌಡ ನಿಧನ



ಕೆ.ಆರ್.ನಗರ, ಅ.7– ತಾಲೂಕಿನ ಕೆಂಪನಕೊಪ್ಪಲು ಗ್ರಾಮದ ನಿವಾಸಿ ಪುಟ್ಟಸ್ವಾಮಿಗೌಡ(88) ಮಂಗಳವಾರ ನಿಧನರಾದರು. ಮೃತರು ಪುತ್ರ ದೊಡ್ಡೇಕೊಪ್ಪಲು ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯರಾಂ



ಹೆಚ್.ಡಿ.ಕೋಟೆ, ಅ.7– ತಾಲೂಕಿನ ಕಣಿಯನಹುಂಡಿ ಗ್ರಾಮದ ನಿವಾಸಿ ಜಯರಾಂ(48) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಅಶ್ವಿನಿ, ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯುವ ಯತ್ನ ಖಂಡಿಸಿ

ಮೈಸೂರಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ

● ವಕೀಲನ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು, ಅಗ್ನಿಸ್ಪರ್ಶ ● ಈತನ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲು ಆಗ್ರಹ



ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರಾದ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯುವ ಪ್ರಯತ್ನ ಖಂಡಿಸಿ ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಅ. 7(ಎಂಟಿವೈ)– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲನೊಬ್ಬ ಶೂ ಎಸೆಯಲು ಪ್ರಯತ್ನಿಸಿದ ಘಟನೆ ಖಂಡಿಸಿ ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಇಂದು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಶೂ ಎಸೆದ ವಕೀಲ ರಾಕೇಶ್ ಕಿಶೋರ್ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು, ಕೊನೆಗೆ ಸುಟ್ಟು ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಈ ಪ್ರಕರಣದ ಹಿಂದೆ ಸಂಘಿಗಳು ಮತ್ತು ಆರ್‌ಎಸ್‌ಎಸ್ ಷಡ್ಯಂತ್ರ ಇದೆ ಎಂದು ದೂರಿದರು.

ಇದೇ ವೇಳೆ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಗಾಂಧಿ ಕೊಂದ ಗೋಡ್ಸೆ ಸಂತತಿ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಧರ್ಮದ ಅಫೀಮು ತುಂಬಿಕೊಂಡ ವಕೀಲ ರಾಕೇಶ್ ಕಿಶೋರ್ ಎಂಬಾತ ಸನಾತನ ಧರ್ಮಕ್ಕೆ ಅಪಮಾನ ಮಾಡುವುದನ್ನು ಸಹಿಸುವುದಿಲ್ಲ ಎಂದು ಹೇಳಿ ಈ ಕೃತ್ಯ ಎಸಗಿರುವುದು ಸಂವಿಧಾನಕ್ಕೆ ಮಾಡಿದ ಅಪಮಾನ. ರಾಷ್ಟ್ರಪತಿ, ಪ್ರಧಾನಮಂತ್ರಿಗಳಿಗೆ ಮಾಡಿದ ಅವಮಾನ. ಹಾಗಾಗಿ ಆತನ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಇದೇ ಮನುವಾದಿಗಳು ಸಂವಿಧಾನ ಜಾರಿಯಾದಾಗ ಅದನ್ನು ಒಪ್ಪದೇ ಹೋರಾಟ ಮಾಡಿದ್ದರು. ಈ ಸಂವಿಧಾನವನ್ನು ಒಪ್ಪದಿದ್ದವರು ಈ ಷಡ್ಯಂತ್ರ ಮಾಡಿದ್ದಾರೆ. ಇವರ ಷಡ್ಯಂತ್ರದ ವಿರುದ್ಧ ಅಂಬೇಡ್ಕರ್‌ವಾದಿಗಳು ಹೋರಾಟ ಮಾಡಬೇಕು. ಸಂವಿಧಾನದ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿ ಈ ದೇಶದ ಜನರ ಮೇಲಿದೆ. ದೇಶ ಸಂವಿಧಾನದ ಅಡಿಯಲ್ಲಿ ಇದೆ ಹೊರತು ಯಾವುದೇ ಪಕ್ಷದ ಅಡಿಯಲ್ಲಿಲ್ಲ. ದೇಶ ದೊಡ್ಡದೇ ಹೊರತು ಧರ್ಮ ದೊಡ್ಡದಲ್ಲ. ಈ ಕೃತ್ಯ ದಲಿತರ ವಿರುದ್ಧ ನಡೆದಿರುವುದಲ್ಲ, ಈ ದೇಶದ ಸಂವಿಧಾನ, ಅಖಂಡತೆಯ ಮೇಲೆ ನಡೆದಿರುವುದು. ಹಾಗಾಗಿ ಎಲ್ಲರೂ ಒಟ್ಟಾಗಿ ಖಂಡಿಸಬೇಕು ಎಂದು ಹೇಳಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆದಿರುವುದು ಇಡೀ ದೇಶಕ್ಕೆ ಮಾಡಿದ ಅವಮಾನ. ಈ ದೇಶದಲ್ಲಿ ಸಂವಿಧಾನವೇ ಸುಪ್ರೀಂ ಹೊರತು ಸನಾತನವಾದವಲ್ಲ. ಸನಾತನವಾದ ಮತ್ತು ಅಂಬೇಡ್ಕರ್ ವಾದಿಗಳ ನಡುವೆ ಸಂಘರ್ಷ ನಡೆಯಬೇಕು ಎಂಬುದು ನಿಮ್ಮ ಇಚ್ಛೆಯಾಗಿದ್ದರೆ ನಾವು ಸಿದ್ಧರಾಗಿಯೇ ಇದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ನ್ಯಾಯಾಧೀಶರ ಮೇಲೆ ಶೂ ಎಸೆದ ವಕೀಲನ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸಿ ಬಂಧಿಸಬೇಕಿತ್ತು. ಆದರೆ ಆತನನ್ನು ಬಿಟ್ಟು ಕಳುಹಿಸಲಾಗಿದೆ ಎಂದರೆ ಆತನ ಹಿಂದೆ ಕೇಂದ್ರ ಸರ್ಕಾರ ಇದೆ ಎಂಬುದು ಗೊತ್ತಾಗುತ್ತಿದೆ. ತಪ್ಪೇ ಮಾಡದ ಹೋರಾಟಗಾರ ಸೋನಮ್ ವಾಂಗ್ಚುಕ್, ಪತ್ರಕರ್ತ ಉಮರ್ ಕಾಲಿದ್ ಅವರ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ. ಆದರೆ ಇಂತಹ ಒಂದು ಘಟನೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ಕೇಂದ್ರ ಸರ್ಕಾರ ಮೌನ ವಹಿಸಿರುವುದು ಸಂವಿಧಾನಕ್ಕೆ ಮಾಡಿದ ದ್ರೋಹ ಎಂದು ಹೇಳಿದರು.

ಸನಾತನವಾದಕ್ಕೆ ಅಪಮಾನ ಮಾಡಿದರೆ ಸಹಿಸುವುದಿಲ್ಲ ಎಂದು ರಾಕೇಶ್ ಕಿಶೋರ್ ಹೇಳಿದ್ದಾನೆ. ಸನಾತನವಾದ ಈ ದೇಶಕ್ಕೆ ಏನನ್ನು ಕೊಟ್ಟಿದೆ? ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಬಂತೇಜಿ, ಮುಖಂಡರುಗಳಾದ ಅಹಿಂದ ಜವರಪ್ಪ, ಲೇಖಕರಾದ ಸಿದ್ದಸ್ವಾಮಿ, ಸಿ.ಹರಕುಮಾರ್, ಎನ್.ಭಾಸ್ಕರ್, ವಕೀಲ ಕಾಂತರಾಜು, ಮರಿದೇವಯ್ಯ, ಪಲ್ಲವಿ ಬೇಗಂ, ಜೋಗಿ ಮಹೇಶ್, ಅಶೋಕಪುರಂ ರವಿ, ವಕೀಲರಾದ ಉಮೇಶ್, ಪುಟ್ಟಸಿದ್ದೇಗೌಡ, ಆಟೋ ಪುಟ್ಟರಾಜು, ಬಬಿತಾ, ಗೋವಿಂದರಾಜು, ಮಲೆಯೂರು ಸೋಮಯ್ಯ, ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕಾಂತಾರ ಚಾಪ್ಟರ್ 1 ವೀಕ್ಷಣೆ ವೇಳೆ ದೈವದ ಬಗ್ಗೆ ಹುಚ್ಚಾಟ!

ಬೆಂಗಳೂರು ತುಳುಕೂಟದಿಂದ ರಿಷಬ್ ಶೆಟ್ಟಿಗೆ ಪತ್ರ!



ಬೆಂಗಳೂರು, ಅ.7– ಇತ್ತೀಚಿಗೆ ಬಿಡುಗಡೆಯಾದ ರಿಷಬ್ ಶೆಟ್ಟಿ ನಿರ್ದೇಶಿಸಿ ಅಭಿನಯಿಸಿರುವ 'ಕಾಂತಾರ ಚಾಪ್ಟರ್ 1' ಸಿನಿಮಾ ದೇಶಾದ್ಯಂತ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಕರ್ನಾಟಕದಲ್ಲಿ ಕೆಜಿಎಫ್ 2 ದಾಖಲೆಯನ್ನು ಹಿಂದಿಕ್ಕಿ ಮುನ್ನುಗ್ಗುತ್ತಿದೆ. ಆದರೆ ಸಿನಿಮಾ ವೀಕ್ಷಿಸುವ ವೇಳೆ ಕೆಲ ಅಭಿಮಾನಿಗಳ ಅತಿರೇಕದ ವರ್ತನೆ ತುಳುವರ ಕೆಂಗಣ್ಣಿಗೆ ಗುರಿಯಾಗಿದೆ.

ಥಿಯೇಟರ್‌ಗಳಲ್ಲಿ ದೈವದ ವೇಷ ಧರಿಸಿ ಓಡಾಟ, ಚಿತ್ರದಲ್ಲಿ ತೋರಿಸುವ ದೈವದ ವರ್ತನೆಗಳಂತೆ ಚಿತ್ರಮಂದಿರಗಳಲ್ಲಿ ಕಿರುಚಾಡುವುದು ತುಳುವರ ನಂಬಿಕೆಗೆ ಧಕ್ಕೆಯಾಗುತ್ತಿದೆ. ಹೀಗಾಗಿ ಬೆಂಗಳೂರು ತುಳುಕೂಟ ನಟ ರಿಷಬ್ ಶೆಟ್ಟಿಗೆ ಪತ್ರವೊಂದನ್ನು ಕಳುಹಿಸಿದೆ.

ಈ ರೀತಿ ಮಾಡದಂತೆ ಅಭಿಮಾನಿಗಳಿಗೆ ಬುದ್ಧಿ ಹೇಳಿ ಎಂದು ಪತ್ರದಲ್ಲಿ ಉಲ್ಲೇಖಿಸಿದೆ.ಹುಚ್ಚಾಟ ಮಾಡುವವರಿಗೆ ಎಚ್ಚರಿಕೆ ಕೂಡ ನೀಡಿದ್ದಾರೆ.

ಈ ಹಿಂದೆ ಕಾಂತಾರ ಮೊದಲ ಭಾಗ ಬಿಡುಗಡೆಯಾದಾಗಲೂ ಇದೇ ರೀತಿಯ ವರ್ತನೆಗಳು ಕಂಡು ಬಂದಿದ್ದವು. ಆಗಲೂ ತುಳುಕೂಟ ಪೊಲೀಸ್ ಆಯುಕ್ತರಿಗೆ ಮನವಿ ಮಾಡಿ, ಎಲ್ಲೆಂದರಲ್ಲಿ ದೈವದ ವೇಷ ಧರಿಸಿ, ಅದರ ಅನುಕರಣೆ ಮಾಡುತ್ತಿದ್ದವರ ವಿರುದ್ಧ ಕ್ರಮಕ್ಕೆ ಮನವಿ ಮಾಡಿತ್ತು.

ಈಗ ಮತ್ತೆ ಚಾಪ್ಟರ್ 1 ಬಿಡುಗಡೆಯಾಗಿದ್ದು, ಅಂತಹದ್ದೇ ವರ್ತನೆಗಳು ಕಂಡುಬರುತ್ತಿದೆ. ಸದ್ಯ ಈ ಬಗ್ಗೆ ಕಾನೂನು ಸಮರಕ್ಕೆ ಮುಂದಾಗಲು ನಿರ್ಧಾರ ಮಾಡಿರುವ ತುಳುಕೂಟ, ದೈವದ ವೇಷ ಧರಿಸಿ ಹುಚ್ಚಾಟ ಆಡುವವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗುವುದಾಗಿ ಎಚ್ಚರಿಕೆ ನೀಡಿದೆ.

ಒಡಿಶಾ ಬಿಜೆಪಿ ನಾಯಕ ಪಿತವಾಸ್ ಪಾಂಡ ದುಷ್ಕರ್ಮಿಗಳ ಗುಂಡಿಗೆ ಬಲಿ



ಭುವನೇಶ್ವರ್, ಅ.7–ಒಡಿಶಾದ ಬೆರ್ಹಾಂಪುರದಲ್ಲಿ ಕಳೆದ ರಾತ್ರಿ ಬಿಜೆಪಿ ನಾಯಕ ಪಿತವಾಸ್ ಪಾಂಡ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಬೆರ್ಹಾಂಪುರ ಎಸ್ಪಿ ಡಾ. ಸರವಣ ವಿವೇಕ್ ಎಂ ಹೇಳಿದ್ದಾರೆ. ತನಿಖೆ ನಡೆಸಲು ತಂಡಗಳನ್ನು ರಚಿಸಲಾಗಿದೆ ಎಂದು ತಿಳಿಸಿದ್ದಾರೆ. ಬಿಜೆಪಿ ನಾಯಕ ಪಿತವಾಸ್ ಪಾಂಡ ಹಿರಿಯ ವಕೀಲರು ಮತ್ತು ಆರ್‌ಟಿಐ ಕಾರ್ಯಕರ್ತರಾಗಿದ್ದರು.

ನಡೆದ ಘಟನೆಯೇನು: ಕಳೆದ ರಾತ್ರಿ 10 ಗಂಟೆ ಸುಮಾರಿಗೆ ಬೈಕ್ ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಪಾಂಡ ಅವರ ಮನೆಯ ಬಳಿ ಬಂದು ಅವರ ಮೇಲೆ ಗುಂಡು ಹಾರಿಸಿದರು. ತಕ್ಷಣ ಅವರನ್ನು ಬೆರ್ಹಾಂಪುರ್‌ನ ಎಂಕೆಸಿಜಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಅಲ್ಲಿ ವೈದ್ಯರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ದಾಳಿಕೋರರನ್ನು ಗುರುತಿಸಲು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದಾರೆ. ದಾಳಿಯ ಬಗ್ಗೆ ಪ್ರತಿಪಕ್ಷಗಳು ತೀವ್ರ ಖಂಡಿಸಿದ್ದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿದ್ದಾರೆ.

ಕೊಪ್ಪಳದ ಹುಲಿಗೆಮ್ಮ ದೇವಸ್ಥಾನಕ್ಕೆ ಪಾದಯಾತ್ರೆ: ಭಕ್ತರ ಮೇಲೆ ಬಸ್ ಹರಿದು ಮೂವರು ಸಾವು

ಕೊಪ್ಪಳ, ಅ.7– ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮದ ಹುಲಿಗೆಮ್ಮ ದೇವಸ್ಥಾನಕ್ಕೆ ಪಾದಯಾತ್ರೆಗೆ ತೆರಳುತ್ತಿದ್ದ ಭಕ್ತರ ಮೇಲೆ ಖಾಸಗಿ ಸ್ಲೀಪರ್ ಕೋಚ್ ಬಸ್ ಹರಿದು ಮೂವರು ಮೃತಪಟ್ಟ ಹೃದಯವಿದ್ರಾವಕ ಘಟನೆ ಕೊಪ್ಪಳ ಜಿಲ್ಲೆಯ ಕೂಕನಪಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ನಡೆದಿದೆ.

ಅಪಘಾತದಲ್ಲಿ ಅನ್ನಪೂರ್ಣ (40), ಪ್ರಕಾಶ್ (25), ಶರಣಪ್ಪ (19) ಎಂಬ ಮೂವರು ಸ್ಥಳದಲ್ಲೇ ಮೃತ ಪಟ್ಟಿದ್ದು, ಮೃತರು ಗದಗ ಜಿಲ್ಲೆಯ ರೋಣ ತಾಲೂಕಿನ ತಳ್ಳಿಹಾಳ ಗ್ರಾಮದವರಾಗಿದ್ದಾರೆ. ಹುಲಿಗೆಮ್ಮ ದೇವಾಲಯದ ಪಾದಯಾತ್ರೆಗೆ ತೆರಳುತ್ತಿದ್ದರು. ಘಟನೆಯಲ್ಲಿ ನಾಲ್ವರು ಭಕ್ತರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಸಿಂದಗಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಖಾಸಗಿ ಸ್ಲೀಪರ್ ಕೋಚ್ ಬಸ್ ನಿಯಂತ್ರಣ ತಪ್ಪಿ ಭಕ್ತರ ಮೇಲೆ ಹರಿದ ಪರಿಣಾಮ ಈ ದುರಂತ ಸಂಭವಿಸಿದೆ. ಅಪಘಾತದ ವೇಳೆ ಭಕ್ತರು ದೇವಾಲಯದಿಂದ ಕೇವಲ ಮೂರು ಗಂಟೆಗಳ ನಡಿಗೆಯ ದೂರದಲ್ಲಿದ್ದರು.

ಬಸ್ ಚಾಲಕನ ಬಂಧನ: ವಿಷಯ ತಿಳಿಯುತ್ತಿದ್ದಂತೆ ಮುನಿರಾಬಾದ್ ಪೊಲೀಸರು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇದೇ ವೇಳೆ ಖಾಸಗಿ ಬಸ್ ಚಾಲಕನನ್ನ ಪೊಲೀಸರು ಬಂಧಿಸಿದ್ದಾರೆ.

ಮುಂದಿನ ನಾಲ್ಕಾರು ತಿಂಗಳಲ್ಲಿ ಪೆಟ್ರೋಲ್ ಕಾರು ದರದಲ್ಲಿ ಇವಿ ವಾಹನ ಲಭ್ಯ: ನಿತಿನ್ ಗಡ್ಕರಿ



ನವದೆಹಲಿ, ಅ.7– ಮುಂದಿನ ನಾಲ್ಕರಿಂದ ಆರು ತಿಂಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಬೆಲೆ ಪೆಟ್ರೋಲ್–ಡೀಸೆಲ್ ಬೆಲೆಗೆ ಸಮನಾಗಿರುತ್ತದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಎಲೆಕ್ಟ್ರಿಕ್ ವಾಹನಗಳನ್ನು ಬಿಡುಗಡೆ ಮಾಡಿದಾಗ, ಬ್ಯಾಟರಿ ಬೆಲೆ ಪ್ರತಿ ಕಿಲೋ ವ್ಯಾಟ್ ಗಂಟೆಗೆ 150 ಡಾಲರ್ ಆಗಿತ್ತು.

ಇಂದು ಅದು ಪ್ರತಿ ಕಿಲೋವ್ಯಾಟ್ ಗಂಟೆಗೆ 55 ಡಾಲರ್‌ನಿಂದ 65 ಡಾಲರ್‌ಗೆ ಇಳಿಕೆಯಾಗಿದೆ. ಮುಂಬರುವ ನಾಲ್ಕರಿಂದ ಆರು ತಿಂಗಳಲ್ಲಿ, ಎಲೆಕ್ಟ್ರಿಕ್ ಸ್ಕೂಟರ್‌ಗಳು, ಎಲೆಕ್ಟ್ರಿಕ್ ಕಾರುಗಳು ಮತ್ತು ಎಲೆಕ್ಟ್ರಿಕ್ ಬಸ್‌ಗಳು ಪೆಟ್ರೋಲ್–ಡೀಸೆಲ್ ಬೆಲೆಗೆ ಸಮಾನವಾಗುತ್ತವೆ ಎಂದು ನಾನು ಭಾವಿಸುತ್ತೇನೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪಳೆಯುಳಿಕೆ ಇಂಧನಗಳ ಮೇಲೆ ಅವಲಂಬನೆ ಮಾಡುವುದು ಆರ್ಥಿಕತೆ ದೃಷ್ಟಿಯಿಂದ ಹಾನಿಕಾರಕ. ಭಾರತವು ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯು ಆರ್ಥಿಕ ಹೊರೆ ಯಾಗಿದೆ. ಇಂಧನ ಆಮದಿಗೆ ವಾರ್ಷಿಕವಾಗಿ 22 ಲಕ್ಷ ಕೋಟಿ ರೂ. ಖರ್ಚು ಮಾಡಲಾಗುತ್ತಿದೆ.

ಹೀಗಾಗಿ ಎಥೆನಾಲ್, ಸಿಎನ್‌ಜಿ ಅಥವಾ ಐಸೊಬುಟನಾಲ್‌ನಲ್ಲಿ ಚಲಿಸುವ ಎಲೆಕ್ಟ್ರಿಕ್ ಟ್ರಾಕ್ಟರ್‌ಗಳು ಮತ್ತು ಎಂಜಿನ್‌ಗಳನ್ನು ಅಭಿವೃದ್ಧಿಪಡಿಸಲು ಟ್ರಾಕ್ಟರ್ ತಯಾರಕರು ಮತ್ತು ಕೃಷಿ ಸಂಶೋಧಕರಿಗೆ ಸಭೆಯಲ್ಲಿ ಹೇಳಿದ್ದೇನೆ ಎಂದರು.

ಈ ನಾವೀನ್ಯತೆಗಳು ಡೀಸೆಲ್ ಆಮದು ಮತ್ತು ಮಾಲಿನ್ಯವನ್ನು ಕಡಿಮೆ ಮಾಡಲು ಮತ್ತು ಗ್ರಾಮೀಣ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡಲಿದೆ ಎಂದು ತಿಳಿಸಿದರು. ನಾನು ಸಾರಿಗೆ ಸಚಿವನಾಗಿ ಅಧಿಕಾರ ಸ್ವೀಕರಿಸಿದಾಗ, ದೇಶದ ವಾಹನೋದ್ಯಮದ ಗಾತ್ರ 14 ಲಕ್ಷ ಕೋಟಿಯಷ್ಟಿತ್ತು. ಅದು ಈಗ 22 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ಹೇಳಿದ್ದಾರೆ.

ಮೈಸೂರು ವಿವಿಯಲ್ಲಿ ವಾಲ್ಮೀಕಿ ಜಯಂತಿ ಆಚರಣೆ



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಮೈಸೂರು, ಅ.7(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದಲ್ಲಿನ ಶೈಕ್ಷಣಿಕ ಸಭಾಂಗಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಮಹರ್ಷಿ ವಾಲ್ಮೀಕಿ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮಹರ್ಷಿ ವಾಲ್ಮೀಕಿ ರಚಿತ ರಾಮಾಯಣ ಮಹಾಕಾವ್ಯವು ಅಂದಿನ ಕಾಲದಲ್ಲೇ ವೈಜ್ಞಾನಿಕ ಪ್ರಬುದ್ಧತೆ ಸಾಧಿಸಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಪುಷ್ಪಕ ವಿಮಾನದ ತಂತ್ರಜ್ಞಾನ ಅಂದೇ ಇದ್ದುದನ್ನು ವಾಲ್ಮೀಕಿ ಅವರು ದಾಖಲಿಸಿದ್ದಾರೆ. ಯುವ ಜನಾಂಗ ರಾಮಾಯಣ ಮಹಾಕಾವ್ಯವನ್ನು ವಿಭಿನ್ನ ದೃಷ್ಟಿಕೋನಗಳಿಂದ ಓದಬೇಕು ಎಂದು ಸಲಹೆ ನೀಡಿದರು.

ಕುಲಸಚಿವ(ಆಡಳಿತ)ರಾದ ಎಂ.ಕೆ. ಸವಿತಾ ಮಾತನಾಡಿ, ಮಹರ್ಷಿ ವಾಲ್ಮೀಕಿಯವರು ಜಗದ ಕವಿ. ಸದಾ ಚರ್ಚೆಗೆ ಒಳಗಾಗಿರುವ ರಾಮಾಯಣ ಮಹಾಕಾವ್ಯದ ಸೇತುವೆ ಕಟ್ಟಿದ ಘಟನೆಯನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಲು ಇಂದಿಗೂ ಶೋಧನೆ ನಡೆಯುತ್ತಿದೆ ಎಂದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎಸ್.ಕೆ.ಲೋಲಾಕ್ಷಿ ಮಾತನಾಡಿ, ವಾಲ್ಮೀಕಿ ಜಗತ್ತಿನ ಆದಿಕವಿ. ರಾಮಾಯಣ ಆದಿಕಾವ್ಯವಾಗಿದ್ದು, ರಾಮಾಯಣ ಓದಿದರೆ ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಬಹುದಾದ ಹಲವು ಆದರ್ಶನಿಯ ಸಂಗತಿಗಳ ಬಗ್ಗೆ ತಿಳಿಯಲಿದೆ ಎಂದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಪ್ರಾಧ್ಯಾಪಕೇತರ ಸಿಬ್ಬಂದಿ ಹಾಗೂ ಸಂಶೋಧಕರು ಉಪಸ್ಥಿತರಿದ್ದರು.

ವಾಲ್ಮೀಕಿ ಸಮುದಾಯಕ್ಕೆ 2 ಸಚಿವ ಸ್ಥಾನ ನೀಡಲಿ

ಕಿತ್ತೂರು ಕರ್ನಾಟಕಕ್ಕೆ ಪ್ರತ್ಯೇಕ ಅನುದಾನ ಅಗತ್ಯ: ಸತೀಶ್ ಜಾರಕಿಹೊಳಿ



ಬೆಳಗಾವಿ, ಅ.7– ವಾಲ್ಮೀಕಿ ಸಮುದಾಯದ ಮಠಾಧೀಶ ಪ್ರಸನ್ನಾನಂದಜಿ ಸ್ವಾಮೀಜಿ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಂಪುಟದಲ್ಲಿ ಖಾಲಿ ಇರುವ ಎರಡು ಹುದ್ದೆಗಳನ್ನು ವಾಲ್ಮೀಕಿ ಸಮುದಾಯದ ಪ್ರತಿನಿಧಿಗಳಿಗೆ ನೀಡುವಂತೆ ಮನವಿ ಮಾಡುವುದಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡಿದ ಜಾರಕಿಹೊಳಿ, ಈ ಹಿಂದೆಯೂ ಇದೇ ರೀತಿಯ ವಿನಂತಿಯನ್ನು ಮಾಡಿದ್ದೆವು. ಮಂಗಳವಾರ ಬೆಂಗಳೂರಿನಲ್ಲಿ ನಡೆಯಲಿರುವ ವಾಲ್ಮೀಕಿ ಜಯಂತಿ ಆಚರಣೆಯ ಸಂದರ್ಭದಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿಯನ್ನು ಭೇಟಿ ಮಾಡುವುದಾಗಿ ಮನವಿ ಮಾಡುವುದಾಗಿ ತಿಳಿಸಿದರು.

ನಾವು ಕೆಪಿಸಿಸಿ ಅಧ್ಯಕ್ಷರು ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದೆಯೂ ಈ ವಿನಂತಿಯನ್ನು ಮಂಡಿಸುತ್ತೇವೆ ಎಂದು ಅವರು ಹೇಳಿದರು.

ಕಿತ್ತೂರು ಕರ್ನಾಟಕ ಭಾಗಕ್ಕೂ ಅನುದಾನ ನೀಡುವುದು ಅಗತ್ಯವಿದ್ದು, ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಅನುದಾನ ನೀಡಿದ ಮಾದರಿಯಲ್ಲಿ ನಮಗೂ ನೀಡಲು ಮನವಿ ಮಾಡಿದ್ದೇವೆ ಇದಕ್ಕಾಗಿ ಕಿತ್ತೂರು ಕರ್ನಾಟಕದ 34 ಶಾಸಕ, ಸಚಿವರು ಸೇರಿ ಮುಖ್ಯಮಂತ್ರಿ ಬಳಿ ನಿಯೋಗ ಕೊಂಡೊಯ್ದು ಒತ್ತಾಯಿಸಲಾಗುವುದು ಎಂದರು.

ಕಿತ್ತೂರ ಕರ್ನಾಟಕ ಭಾಗವು ಬಹಳಷ್ಟು ಹಿಂದುಳಿದ ಪ್ರದೇಶವಾಗಿದೆ. ಇಲ್ಲಿಯೂ ಅಭಿವೃದ್ಧಿಗೆ ಹಣಕಾಸಿನ ಅಗತ್ಯವಿದೆ. ಹಾಗಾಗಿ ಎಲ್ಲ ಜನಪ್ರತಿನಿಧಿಗಳು ಕುಳಿತು ಚರ್ಚಿಸಿ ಮುಂದಿನ ಹೆಜ್ಜೆ ಇಡುತ್ತೇವೆ ಎಂದರು.

ಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡುವುದು ನಮ್ಮ ಕೈಯಲ್ಲಿ ಇಲ್ಲ. ಆಕಾಂಕ್ಷಿಗಳು ಹೆಚ್ಚಿದ್ದಾರೆ. ಸಹಜವಾಗಿ ಪೈಪೋಟಿ ಇರುತ್ತದೆ. ಅದನ್ನೆಲ್ಲ ಹೈಕಮಾಂಡ್ ನೋಡಿಕೊಳ್ಳುತ್ತದೆ ಎಂದ ಸತೀಶ್ ಜಾರಕಿಹೊಳಿ, ನವೆಂಬರ್ ಕ್ರಾಂತಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದರು.

ಜಾತಿ ಜನಗಣತಿಯ 60 ಪ್ರಶ್ನಾವಳಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಸುಸ್ತಾಗಿ ಸರಳೀಕರಣ ಮಾಡಲು ಹೇಳಿರುವುದಕ್ಕೆ ನನ್ನದೂ ಸಹಮತ ಇದೆ. ಪ್ರಶ್ನೆಗಳನ್ನು ಕಡಿಮೆ ಮಾಡಬೇಕು. ಅಲ್ಲದೆ ಜನರು ತಮಗೆ ಇಷ್ಟ ಇರುವ ಪ್ರಶ್ನೆಗೆ ಮಾತ್ರ ಉತ್ತರಿಸಬಹುದಾಗಿದೆ. ಪ್ರಶ್ನಾವಳಿ ತಯಾರಿಸಿದ್ದು ಆಯೋಗದವರು. ಅದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಅವರು ಸರಕಾರಕ್ಕೆ ಎಲ್ಲವನ್ನೂ ತಿಳಿಸಬೇಕೆಂದಿಲ್ಲ ಎಂದು ಜಾರಕಿಹೊಳಿ ಹೇಳಿದರು.

ಸಿಜೆಐ ಅವರತ್ತ 'ಶೂ' ಎಸೆತ ಪ್ರಕರಣ

ಯಾವುದೇ ಪಶ್ಚಾತ್ತಾಪವಿಲ್ಲ; ದೇವರೇ ಪ್ರಚೋದಿಸಿದ

ವಕೀಲ ರಾಕೇಶ್ ಕಿಶೋರ್ ಪ್ರತಿಕ್ರಿಯೆ



ರಾಕೇಶ್ ಕಿಶೋರ್

ನವದೆಹಲಿ, ಅ.7– ನಾನು ಮಾಡಿದ್ದ ಕಾರ್ಯಕ್ಕೆ ನನಗೆ ಯಾವುದೇ ಪಶ್ಚಾತ್ತಾಪವಿಲ್ಲ. ನಾನು ಮಾಡಿದ್ದು ಸರಿಯಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆದ ವಿಚಾರಣೆಯ ಸಂದರ್ಭದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಬಿ ಆರ್ ಗವಾಯಿ ಅವರ ಮೇಲೆ ಶೂ ಎಸೆದ ವಕೀಲ ರಾಕೇಶ್ ಕಿಶೋರ್ ಹೇಳಿದ್ದಾರೆ.

ದೇಶದ ಸರ್ವೋಚ್ಚ ನ್ಯಾಯಾಲಯ ಸುಪ್ರೀಂಕೋರ್ಟ್‌ನಲ್ಲಿ ಸೋಮವಾರ ಅಚ್ಚರಿಯೊಂದು ನಡೆದಿತ್ತು. ಹಿರಿಯ ವಕೀಲನೊಬ್ಬ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರತ್ತ ಶೂ ಎಸೆಯಲು ಪ್ರಯತ್ನಿಸಿದ್ದು, ನ್ಯಾಯಾಲಯದ ಒಳಗೆ ಕೆಲ ಕ್ಷಣ ತೀವ್ರ ಗೊಂದಲ ಉಂಟಾಗಿತ್ತು.

ಘಟನೆ ಬಳಿಕ ತಾಳ್ಮೆ ವಹಿಸಿ ಮಾತನಾಡಿದ ಸಿಜೆಐ, ಇದರಿಂದ ವಿಚಲಿತರಾಗಬೇಡಿ. ನಾವು ವಿಚಲಿತರಾಗಿಲ್ಲ. ಇಂತಹ ವಿಷಯಗಳು ನನ್ನ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಹೇಳಿದರು.

ಇನ್ನು, ಸಿಜೆಐ ಮೇಲೆ ಶೂ ಎಸೆದ ವಕೀಲ ರಾಕೇಶ್ ಕಿಶೋರ್ ಮಾತನಾಡಿ, ಶೂ ಎಸೆದಿದ್ದಕ್ಕೆ ನನಗೆ ಯಾವುದೇ ಪಶ್ಚಾತ್ತಾಪವಿಲ್ಲ. ನಾನು ಮಾಡಿದ್ದು ಸರಿಯಿದೆ. ದೇವರೇ ನನ್ನನ್ನು ಪ್ರಚೋದಿಸಿದ್ದಾನೆ. ಮುಂದಿನ ಯಾವುದೇ ಪರಿಣಾಮವನ್ನು ಎದುರಿಸಲು ನಾನು ಸಿದ್ಧ. ನಾನು ಜೈಲಿಗೆ ಹೋಗುತ್ತೇನೆ. ಅಲ್ಲಿನ ದೇವರ ಹೆಸರಿನಲ್ಲೇ ಎಲ್ಲವನ್ನೂ ಸಹಿಸುತ್ತೇನೆಂದು ಹೇಳಿದ್ದಾರೆ.

ಮಧ್ಯಪ್ರದೇಶದ ಯುನೆಸ್ಕೋ ವಿಶ್ವ ಪರಂಪರೆಗೆ ಸೇರ್ಪಡೆಯಾಗಿರುವ ಖಜುರಾಹೊ ದೇವಾಲಯ ಸಂಕೀರ್ಣದ ಭಾಗವಾಗಿರುವ ಜವಾರಿ ದೇವಾಲಯದಲ್ಲಿ ಏಳು ಅಡಿ ಎತ್ತರದ ವಿಷ್ಣುವಿನ ವಿಗ್ರಹವನ್ನು ಪುನರ್ನಿರ್ಮಿಸಲು ಮತ್ತು ಮರುಸ್ಥಾಪಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಲಾದ ಅರ್ಜಿಯನ್ನು ಸಿಜೆಐ ಗವಾಯಿ ನೇತೃತ್ವದ ಪೀಠ ವಜಾಗೊಳಿಸಿತ್ತು.

ಈ ಪ್ರಕರಣ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಮೀಕ್ಷೆಯ (ASI) ವ್ಯಾಪ್ತಿಗೆ ಬರುತ್ತದೆಯೇ ಹೊರತು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಏನೇ ಮಾಡುವುದರಿದ್ದರೂ ಎಎಸ್‌ಐ ಅನುಮತಿ ನೀಡಬೇಕಾಗಿದೆ. ಕ್ಷಮಿಸಿ ಎಂದು ತಿಳಿಸಿದ್ದರು.

ಗುಣಮಟ್ಟದ ಸೇವೆಗೆ ಫಾರ್ಮಸಿಸ್ಟ್ ಬದ್ಧರಾಗಿರಬೇಕು

ಸಹಾಯಕ ಔಷಧ ನಿಯಂತ್ರಣಾಧಿಕಾರಿ ವಾಸೀಂ ಉರ್ ರೆಹಮಾನ್ ಶರೀಫ್ ಸಲಹೆ



ಮೈಸೂರಿನ ಔಷಧ ನಿಯಂತ್ರಣ ಇಲಾಖೆಯ ಪ್ರಾದೇಶಿಕ ಕಚೇರಿಯ ಸಭಾಂಗಣದಲ್ಲಿ ನಡೆದ ವಿಶ್ವ ಫಾರ್ಮಸಿಸ್ಟ್ ದಿನಾಚರಣೆ ಕಾರ್ಯಕ್ರಮದಲ್ಲಿ ಫಾರ್ಮಸಿಸ್ಟ್ ಸಿ.ಕೆ.ಅರುಣ್ ಅವರಿಗೆ 'ಉತ್ತಮ ಸರ್ವೋತ್ತಮ ಫಾರ್ಮಸಿಸ್ಟ್ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರು, ಅ.7(ಎಂಟಿವೈ)– ಸಮುದಾಯದ ಆರೋಗ್ಯ ಕಾಪಾಡುವಲ್ಲಿ ಫಾರ್ಮಸಿಸ್ಟ್‌ಗಳ ಪಾತ್ರ ಪ್ರಮುಖವಾಗಿದ್ದು, ಗುಣಮಟ್ಟದ ಸೇವೆ ಒದಗಿಸಲು ಅವರು ಬದ್ಧರಾಗಬೇಕಿದೆ ಎಂದು ಸಹಾಯಕ ಔಷಧ ನಿಯಂತ್ರಣ ಅಧಿಕಾರಿ ವಾಸೀಂ ಉರ್ ರೆಹಮಾನ್ ಶರೀಫ್ ಸಲಹೆ ನೀಡಿದ್ದಾರೆ.

ಮೈಸೂರಿನ ಔಷಧ ನಿಯಂತ್ರಣ ಇಲಾಖೆಯ ಪ್ರಾದೇಶಿಕ ಕಚೇರಿಯ ಸಭಾಂಗಣದಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಇಲಾಖೆ ಆಯೋಜಿಸಿದ್ದ ವಿಶ್ವ ಫಾರ್ಮಸಿಸ್ಟ್ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಬಾರಿಯ ವಿಶ್ವ ಫಾರ್ಮಸಿಸ್ಟ್ ದಿನಾಚರಣೆಯನ್ನು 'ಥಿಂಕ್ ಹೆಲ್ತ್ ಥಿಂಕ್ ಫಾರ್ಮಸಿಸ್ಟ್' ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಸಮುದಾಯದ ಆರೋಗ್ಯ ಕಾಪಾಡುವಲ್ಲಿ ಫಾರ್ಮಸಿಸ್ಟ್‌ಗಳ ಪಾತ್ರ ಮಹತ್ವದ್ದಾಗಿದೆ ಅಲ್ಲದೆ, ರೋಗಿಗಳಿಗೆ ಸಮಾಲೋಚನೆ ಹಾಗೂ ಸೂಕ್ತ ಮಾರ್ಗದರ್ಶನ ನೀಡುವುದು ಫಾರ್ಮಸಿಸ್ಟ್‌ಗಳ ಕರ್ತವ್ಯವಾಗಿದೆ. ಔಷದ ವ್ಯಾಪಾರ ಕ್ಷೇತ್ರವು ಸೇವಾ ಕ್ಷೇತ್ರವಾಗಿದ್ದು, ಸ್ವಯಂ ಪ್ರೇರಣೆಯಿಂದ ಗುಣಮಟ್ಟದ ಸೇವೆಯನ್ನು ಮಾಡುವುದಕ್ಕೆ ಆದ್ಯತೆಯನ್ನು ನೀಡಬೇಕು ಎಂದರು.

ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಎಂ.ರಾಜು ಮಾತನಾಡಿ, ಸರ್ಕಾರ ಫಾರ್ಮಸಿಸ್ಟ್‌ಗಳ ಸೇವೆ ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಸಂತೋಷಕರ ಹಾಗೂ ಸ್ಫೂರ್ತಿದಾಯಕವಾಗಿದೆ. ಫಾರ್ಮಸಿ ಕ್ಷೇತ್ರದ ಪಾವಿತ್ರ್ಯತೆಯನ್ನು ಕಾಪಾಡುವುದು ನಮ್ಮೆಲ್ಲರ ಹೊಣೆ ಎಂದು ಅಭಿಪ್ರಾಯಪಟ್ಟರು.

ಸಹಾಯಕ ಔಷದ ನಿಯಂತ್ರಣ ಅಧಿಕಾರಿ ಆಶಾಲತಾ ಮಾತನಾಡಿ, ಔಷಧಿ ವ್ಯಾಪಾರಿಗಳು ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಆಕ್ಟ್ ಕಾನೂನು ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದರ ಜೊತೆಗೆ ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವುದರಲ್ಲಿ ಸರ್ಕಾರದ ಜೊತೆ ಕೈಜೋಡಿಸಿ ಆರೋಗ್ಯಕರ ಸಮಾಜದ ನಿರ್ಮಾಣದ ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಅಂಕಿತ ಹಾಗೂ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಅಧಿಕಾರಿ ಡಾ. ಎ.ಎನ್.ಕಾಂತರಾಜು ಮಾತನಾಡಿ, ಫಾರ್ಮಸಿಸ್ಟ್‌ಗಳು ಔಷಧಿ ವಿತರಣೆಯಲ್ಲಿ ಹೆಚ್ಚಿನ ಜಾಗರೂಕತೆ ವಹಿಸಬೇಕು. ಜೊತೆಗೆ ಕೌಶಲ್ಯತೆ ಹಾಗೂ ವೃತ್ತಿಪರತೆಯನ್ನು ಹೊಂದಬೇಕು ಎಂದರು.

ಇದೇ ವೇಳೆ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ, ನಮ್ರತಾ ಮೆಡಿಕಲ್ಸ್ ಮಾಲೀಕ ಹಾಗೂ ಫಾರ್ಮಸಿಸ್ಟ್ ಸಿ.ಕೆ.ಅರುಣ್ ಅವರಿಗೆ 'ಉತ್ತಮ ಸರ್ವೋತ್ತಮ ಫಾರ್ಮಸಿಸ್ಟ್ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಕಾರ್ಯಾಧ್ಯಕ್ಷ ಎಸ್.ದೇವರಾಜ್ ಎಸ್, ಸರ್ಕಾರಿ ಫಾರ್ಮಸಿಸ್ಟ್ ಉಮೇಶ್, ಫಾರ್ಮಸಿಸ್ಟ್‌ಗಳಾದ ಮನ್ಸೂರ್ ಅಹಮದ್ ಖಾನ್, ಉಮೇಶ್, ಚಂದ್ರಶೇಖರ್, ಅರವಿಂದ್ ಇನ್ನಿತರರು ಉಪಸ್ಥಿತರಿದ್ದರು.

ಗ್ರಾಹಕ ಸ್ನೇಹಿ ಉತ್ಪನ್ನಗಳಿಗೆ ಇತ್ತೀಚೆಗೆ ಬೇಡಿಕೆ ಹೆಚ್ಚಳ

ಸಿಐಐ ರಾಜ್ಯ ಕೌನ್ಸಿಲ್ ಅಧ್ಯಕ್ಷ ರಬೀಂದ್ರ ಶ್ರೀಕಂಠನ್ ಅಭಿಮತ



ಸಿಐಐ ಕರ್ನಾಟಕ ಸ್ಟೇಟ್ ಕೌನ್ಸಿಲ್ ಅಧ್ಯಕ್ಷ ರಬೀಂದ್ರ ಶ್ರೀಕಂಠನ್ ಮಾತನಾಡುತ್ತಿರುವುದು.

ಮೈಸೂರು, ಅ.7(ಎಂಕೆ)– ಮೈಸೂರು ಮತ್ತು ಬೆಂಗಳೂರು ಭಾಗದಲ್ಲಿ ಸುಧಾರಿತ ಉತ್ಪಾದನೆಗೆ(ಅಡ್ವಾನ್ಸ್ ಮ್ಯಾನಿಫ್ಯಾಕ್ಚರಿಂಗ್) ಬೇಡಿಕೆ ಹೆಚ್ಚಾಗಿದ್ದು, ಬಂಡವಾಳವೂ ಹರಿದು ಬರುತ್ತಿದೆ. ಹಾಗಾಗಿ ಕೈಗಾರಿಕಾ ಕ್ಷೇತ್ರದ ಎಲ್ಲರನ್ನೂ ಒಳಗೊಂಡು ಸಂಘಟಿತ ಪ್ರಯತ್ನ ನಡೆಸಬೇಕಿದೆ ಎಂದು ಸಿಐಐ ಕರ್ನಾಟಕ ಸ್ಟೇಟ್ ಕೌನ್ಸಿಲ್ ಅಧ್ಯಕ್ಷ ರಬೀಂದ್ರ ಶ್ರೀಕಂಠನ್ ತಿಳಿಸಿದರು.

ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಭಾರತೀಯ ಕೈಗಾರಿಕೆಗಳ ಒಕ್ಕೂಟ(ಸಿಐಐ)ದ ಮೈಸೂರು ವಲಯದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಉತ್ಪಾದನೆ ಮತ್ತು ತಂತ್ರಜ್ಞಾನ ಸಮ್ಮೇಳನದಲ್ಲಿ 'ತಂತ್ರಜ್ಞಾನ, ಆಟೋಮೇಷನ್ ಮತ್ತು ಗುಣಮಟ್ಟದೊಂದಿಗೆ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಕಾರ್ಯಕ್ಷಮತೆ' ಕುರಿತು ಮಾತನಾಡಿದ ಅವರು, ಇತ್ತೀಚೆಗೆ ಗ್ರಾಹಕ ಸ್ನೇಹಿ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದನ್ನು ಅರಿತಿರುವ ಬಂಡವಾಳಶಾಹಿಗಳು ಮೈಸೂರು ಮತ್ತು ಬೆಂಗಳೂರು ಭಾಗದಲ್ಲಿ ಹೂಡಿಕೆ ಮಾಡಲು ಬಯಸುತ್ತಿದ್ದಾರೆ ಎಂದರು.

ಸುಧಾರಿತ ಉತ್ಪನ್ನಗಳ ತಯಾರಿಕೆ ಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ಬಳಕೆ ಮಾಡಲಾಗುತ್ತಿದೆ. ಇದರಿಂದ ಉತ್ಪನ್ನಗಳಿಗೆ ಮತ್ತಷ್ಟು ಮೆರಗು ದೊರೆಯುವುದಲ್ಲದೇ ತಾಂತ್ರಿಕವಾಗಿ ಇಂಜಿನಿಯರಿಂಗ್ ಕೆಲಸಗಳು ಸರಾಗವಾಗಿ ನಡೆಯುತ್ತಿವೆ. ಮೈಸೂರು, ಧಾರವಾಡ, ಹುಬ್ಬಳ್ಳಿ, ಬೆಳಗಾವಿ ಭಾಗದಲ್ಲಿ ಚಿಪ್ ತಯಾರಿಕೆ, ಎಲೆಕ್ಟ್ರಾನಿಕ್ ವಸ್ತುಗಳು, ಡಿಫೆನ್ಸ್ ಟೆಕ್ನಾಲಜಿ ಸೇರಿದಂತೆ ಇನ್ನಿತರೆ ಸುಧಾರಿತ ಉತ್ಪನ್ನಗಳ ತಯಾರಿಕೆಯಲ್ಲಿ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಸೋಲಾರ್‌ನಲ್ಲಿ 2ನೇ ಸ್ಥಾನ: ಭಾರತ ಸೋಲಾರ್ ಮಾರ್ಕೆಟಿಂಗ್‌ನಲ್ಲಿ 2ನೇ ಸ್ಥಾನ ಪಡೆದಿದೆ. ವಿಶ್ವಕ್ಕೆ ಬೇಕಾಗುವ ಶೇ.20 ರಷ್ಟು ಚಿಪ್‌ಗಳನ್ನು ಬೆಂಗಳೂರಿನಲ್ಲಿ ತಯಾರಿಸಲಾಗುತ್ತದೆ. ಆತಿಥೋದ್ಯಮ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮತ್ತಷ್ಟು ಸುಧಾರಣೆ ಮಾಡಿಕೊಂಡು ಜಾಗತಿಕವಾಗಿ ಸ್ಪರ್ಧೆ ನೀಡಲು ಸಾಧ್ಯವಿದೆ ಎಂದು ತಿಳಿಸಿದರು.

ಭಾರತ ಮುಂಚೂಣಿಯಲ್ಲಿದೆ: ಸಿಐಐ ಕರ್ನಾಟಕ ಸ್ಟೇಟ್ ಕೌನ್ಸಿಲ್‌ನ ನಿರ್ಗಮಿತ ಅಧ್ಯಕ್ಷ ವಿಜಯಕೃಷ್ಣನ್ ವೆಂಕಟೇಶನ್ ಮಾತನಾಡಿ, ಉತ್ಪಾದನಾ ಕ್ಷೇತ್ರದಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಸ್ಪರ್ಧೆ ಮುನ್ನಡೆಸಲು ಅಡ್ವಾನ್ಸ್ ಮ್ಯಾನಿಫ್ಯಾಕ್ಚರಿಂಗ್ ಸೆಕ್ಟರ್‌ಗೆ ಒತ್ತು ನೀಡಬೇಕಿದೆ. ಅಲ್ಲದೇ ಉತ್ಪಾದನಾ ಕ್ಷೇತ್ರದಲ್ಲಿ ನಮ್ಮ ಮೈಂಡ್ ಸೆಟ್ ಬದಲಾಯಿಸಿಕೊಂಡು ಹೊಸ ತಂತ್ರಜ್ಞಾನ, ಸಂಶೋಧನೆ, ಗುಣಮಟ್ಟ, ಹೊಸತನಕ್ಕೆ ತೆರೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಸಿಐಐ ಮೈಸೂರು ವಲಯದ ಮಾಜಿ ಅಧ್ಯಕ್ಷ ವಿ.ಈಶ್ವರ್ ರಾವ್, ಉದ್ಯಮಿ ಪವನ್ ರಂಗ, ಸಿಐಐ ಮೈಸೂರು ವಲಯದ ಅಧ್ಯಕ್ಷ ನಾಗರಾಜ್ ಗರ್ಗೇಶ್ವರಿ, ಉಪಾಧ್ಯಕ್ಷ ಉತ್ಸವ್ ಅಗರ್ವಾಲ್, ಸಂಚಾಲಕ ಕಿರಣ್ ರಂಗ ಮತ್ತಿತರು ಉಪಸ್ಥಿತರಿದ್ದರು.

ಕುರುಬರ ಎಸ್‌ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದೆ ಬಿಜೆಪಿ ಸರ್ಕಾರ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ಒಂದು ವೇಳೆ ಕುರುಬರ ಎಸ್‌ಟಿಗೆ ಸೇರಿಸಿದರೆ ಆ ವರ್ಗದ ಮೀಸಲಾತಿ ಹೆಚ್ಚಳವಾಗಬೇಕು
- ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಸಿಗಲು ಉಗ್ರಪ್ಪ ಕಾರಣ
- ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ



ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ವಿತರಿಸಿದರು.

ಬೆಂಗಳೂರು, ಅ.7(ಕೆಎಂಶಿ)–ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ ಈ ವರ್ಗದ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದು ಬಸವರಾಜ ಬೊಮ್ಮಾಯಿ ಸರ್ಕಾರ. ಶಿಫಾರಸ್ಸಿನ ಬಗ್ಗೆ ಕೇಂದ್ರ ಸರ್ಕಾರ ಕೆಲವು ಸ್ಪಷ್ಟನೆ ಕೇಳಿದೆ ಅದು ನಮ್ಮ ಮುಂದೆ ಇದೆ ಎಂದರು.

ಅಧಿಕಾರದಲ್ಲಿದ್ದಾಗ ನಿಮ್ಮ ಪರವಾಗಿ ಕೆಲಸ ಮಾಡಿ, ನಿಮ್ಮ ಸಮುದಾಯದ ಬದುಕಿನ ಅವಕಾಶಗಳನ್ನು ಹೆಚ್ಚಿಸಿದವರ ಪರವಾಗಿ ನೀವು ಗಟ್ಟಿಯಾಗಿ ನಿಲ್ಲಬೇಕು ಎಂದು ವಾಲ್ಮೀಕಿ ಸಮುದಾಯಕ್ಕೆ ಕರೆ ನೀಡಿದರು. ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಜನಸಂಖ್ಯೆ ಪ್ರಮಾಣದಷ್ಟೇ ಅಭಿವೃದ್ಧಿಗೆ ಬಜೆಟ್‌ನಲ್ಲೂ ಹಣ ಮೀಸಲಿಡಲು ಕಾಯ್ದೆ ಮಾಡಿದ್ದು ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರ, ಈ ಸಮುದಾಯಗಳಿಗೆ ಹೋಬಳಿಗೊಂದರಂತೆ ವಸತಿ ಶಾಲೆ, ಮೊರಾರ್ಜಿ ಶಾಲೆ ಮಾಡಿದ್ದು ನಾವು.

ಅಧಿಕಾರದಲ್ಲಿದ್ದಾಗ ಯಾರು ನಿಮ್ಮ ಪರವಾಗಿ ಇದ್ದಾರೋ ಅವರ ಪರವಾಗಿ ವಾಲ್ಮೀಕಿ ಸಮುದಾಯ ನಿಲ್ಲಬೇಕು ಎಂದರು. ವಾಲ್ಮೀಕಿ ಮತ್ತು ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ರಾಮಕೃಷ್ಣ ಹೆಗಡೆ ಅವರಿಗೆ ನಾನು ಮತ್ತು ಉಗ್ರಪ್ಪ ಮನವಿ ಮಾಡಿದ್ದೆವು. ಹೆಗಡೆ ನಮ್ಮ ಮನವಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿದರೂ ಸೇರಿಸಲು ಆಗಿರಲಿಲ್ಲ. ಚಂದ್ರಶೇಖರ್ ಪ್ರಧಾನಿಯಾಗಿದ್ದಾಗ ದೇವೇಗೌಡರ ಮೂಲಕ ಒಪ್ಪಿಸಿ ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರು. ವಾಲ್ಮೀಕಿ, ಬೇಡ ಮತ್ತು ನಾಯಕ ಸಮುದಾಯಕ್ಕೆ ಮೀಸಲಾತಿ ದೊರಕಲು ಉಗ್ರಪ್ಪನವರೇ ಕಾರಣ ಎಂದರು.

ಈಗ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಹೋರಾಟ ಮಾಡಿದವರು ನಾವಲ್ಲ. ಬಿಜೆಪಿಯ ಈಶ್ವರಪ್ಪ ಹೋರಾಟ ಮಾಡಿದರು. ಬಸವರಾಜ ಬೊಮ್ಮಾಯಿ ಅವರು ಈಶ್ವರಪ್ಪ ಮನವಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಜೆ.ಹೆಚ್. ಪಟೇಲರು ಮುಖ್ಯಮಂತ್ರಿ ಆಗಿದ್ದಾಗ ಬೆಸ್ತರು ಸೇರಿ ಹಲವು ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಹೋಗಿದೆ. ಇವತ್ತಿನವರೆಗೂ ಇದು ಸಾಧ್ಯವಾಗಿಲ್ಲ ಎಂದರು.

ವಾಲ್ಮೀಕಿ ವಿಶ್ವಮಾನವ: ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ವಾಲ್ಮೀಕಿ ಸಮುದಾಯದ ವಾಲ್ಮೀಕಿ ವಿಶ್ವಮಾನವ ರಾಗಿ ಶ್ರೇಷ್ಠ ರಾಮಾಯಣ ಮಹಾಕಾವ್ಯ ರಚಿಸಿದರು. ಸಮುದಾಯದ ಪ್ರತಿಯೊಬ್ಬರೂ ಶಿಕ್ಷಣವನ್ನು ಆದ್ಯತೆಯಾಗಿ ಪರಿಗಣಿಸಬೇಕು ಎಂದರು.

ಸಮುದಾಯಕ್ಕೆ ಬೇಕಾದ ಹಕ್ಕು, ಅವಕಾಶಗಳನ್ನು ಸಂಘಟನೆ, ಹೋರಾಟದ ಮೂಲಕ ಪಡೆದುಕೊಳ್ಳುವುದು ತಪ್ಪಲ್ಲ. ಹೋರಾಟ ಮಾಡಲೇಬೇಕು. ಇದನ್ನೇ ಅಂಬೇಡ್ಕರ್, ಬುದ್ಧ, ಬಸವಣ್ಣ ಹೇಳಿದ್ದಾರೆ. ವಾಲ್ಮೀಕಿ ಮತ್ತು ರಾಮಾಯಣವನ್ನು ಪಠ್ಯದಲ್ಲಿ ಸೇರಿಸಬೇಕು ಎನ್ನುವ ಉಗ್ರಪ್ಪ ಬೇಡಿಕೆ ಬಗ್ಗೆಯೂ ಸಕಾರಾತ್ಮಕವಾಗಿ ಪರಿಗಣಿಸಲಾಗುವುದು ಎಂದರು.

ಸಿದ್ದರಾಮಯ್ಯನವರೇ ನಮ್ಮ ತಟ್ಟೆಯ ಅನ್ನ ಕಿತ್ತುಕೊಳ್ಳೋಕೆ ಹೋಗಬೇಡಿ: ಉಗ್ರಪ್ಪ

ನಾವು ಯಾರ ತಟ್ಟೆಯನ್ನೂ ಕಿತ್ತುಕೊಳ್ಳಲ್ಲ: ಸಿದ್ದರಾಮಯ್ಯ ಸ್ಪಷ್ಟನೆ

ಕುರುಬರನ್ನು ಎಸ್‌ಟಿಗೆ ಸೇರಿಸುವುದಕ್ಕೆ ಉಗ್ರಪ್ಪ ತೀವ್ರ ವಿರೋಧ

ಬೆಂಗಳೂರು, ಅ.7– ನಮ್ಮ ತಟ್ಟೆಗೆ ಕೈ ಹಾಕಿದರೆ ಹೋರಾಟ ಮಾಡುತ್ತೇವೆ ಎನ್ನುವ ಮೂಲಕ ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎದುರಲ್ಲೇ ಆವೇಶದಿಂದ ಮಾತನಾಡಿದ್ದಾರೆ. ಸಿದ್ದರಾಮಯ್ಯನವರೇ ನಮ್ಮ ತಟ್ಟೆಯನ್ನು ಕಿತ್ತುಕೊಳ್ಳೋಕೆ ಹೋಗಬೇಡಿ. ನಮ್ಮ ಜೊತೆ ಸಹಪಂಥಿಯಲ್ಲಿ ಕೂರಬೇಕಾದರೆ ಕುಲಶಾಸ್ತ್ರೀಯ ಅಧ್ಯಯನ ಮಾಡಿಸಿ. ಇದಾಗದೆ ಕುರುಬರನ್ನು ಎಸ್‌ಟಿಗೆ ಸೇರಿಸಿದರೆ ಸುಮ್ಮನೆ ಇರುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಎಸ್‌ಟಿ ಮೀಸಲಾತಿಯನ್ನು 14 ಪರ್ಸೆಂಟ್ ಮಾಡಿದರೆ ನಮಗೇನು ಅಭ್ಯಂತರವಿಲ್ಲ. ನಮಗೂ ರಾಜಕೀಯ ಮೀಸಲಾತಿ ಬೇಕು. ಸಿದ್ದರಾಮಯ್ಯನವರೇ ನಿಮಗೆ ಕೈ ಮುಗಿತ್ತೀನಿ, ಎಷ್ಟು ವರ್ಷ ಆದರೂ ನೀವು ಮಾಜಿ ಆಗಲೇಬೇಕು. ನಮ್ಮ ತಟ್ಟೆಗೆ ಕೈ ಹಾಕಿದರೆ, ಜನರ ಜೊತೆಯಲ್ಲಿ ನಿಂತು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಸಿಎಂ ಸ್ಪಷ್ಟನೆ: ಉಗ್ರಪ್ಪ ಅವರಿಗೆ ಸೌಮ್ಯವಾಗಿಯೇ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾವು ಯಾರ ತಟ್ಟೆಯನ್ನೂ ಕಿತ್ತುಕೊಳ್ಳಲ್ಲ. ಕುರುಬರನ್ನು ಪರಿಶಿಷ್ಟ ಜಾತಿ(ಎಸ್‌ಟಿ) ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದು ಬಿಜೆಪಿಯ ಬೊಮ್ಮಾಯಿ ಸರ್ಕಾರ. ಆ ಶಿಫಾರಸ್ಸಿನ ಬಗ್ಗೆ ಕೆಲವು ಸ್ಪಷ್ಟನೆಗಳನ್ನು ಕೇಂದ್ರ ಸರ್ಕಾರ ಕೇಳಿದ್ದು, ಅದಷ್ಟೇ ನಮ್ಮೆದುರಿಗಿದೆ. ಒಂದು ವೇಳೆ ಕುರುಬರನ್ನು ಎಸ್‌ಟಿಗೆ ಸೇರಿಸುವುದಾದರೆ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು ಎನ್ನುವುದಕ್ಕೆ ನನ್ನ ಬೆಂಬಲ, ಸಹ ಮತವೂ ಇದೆ ಎಂದು ಸ್ಪಷ್ಟಪಡಿಸಿದರು.

ಸಿಎಂ ಹುದ್ದೆ ಹೇಳಿಕೆ ಗೊಂದಲ ನಿವಾರಣೆಗೆ ಹೈಕಮಾಂಡ್ ಒತ್ತಾಯಿಸಿದ ಪರಮೇಶ್ವರ್

ಬೆಂಗಳೂರು, ಅ.7– ಸಿಎಂ ಸ್ಥಾನ ಕುರಿತ ಹೇಳಿಕೆಗಳಿಂದ ಗೊಂದಲ ಆಗ್ತಿರುವುದನ್ನು ಹೈಕಮಾಂಡ್ ಬ್ರೇಕ್ ಹಾಕಬೇಕು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಒತ್ತಾಯಿಸಿದರು.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ಗೊಂದಲ ಬಗೆಹರಿಸಬೇಕೆಂಬ ಸತೀಶ್ ಜಾರಕಿಹೊಳಿ ಅವರು ಹೇಳಿರುವುದು ಸರಿ ಇದೆ. ನಿತ್ಯ ಒಬ್ಬೊಬ್ಬರು ಒಂದೊಂದು ಹೇಳಿಕೆ ಕೊಡುತ್ತಿದ್ದಾರೆ. ಇದನ್ನು ಬಗೆಹರಿಸಬೇಕು. ಇದನ್ನು ಬಗೆಹರಿಸುವ ಕೆಲಸ ಹೈಕಮಾಂಡ್ ಮಾಡುತ್ತದೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ. ಯಾವ ಸಂದರ್ಭದಲ್ಲಿ ಯಾವ ಔಷಧ ಕೊಡಬೇಕು ಅಂತ ಅದಕ್ಕೆ ಗೊತ್ತಿದೆ. ಆ ಔಷಧ ಹೈಕಮಾಂಡ್ ಕೊಡುತ್ತೆ. ಗೊಂದಲಗಳನ್ನು ಬಗೆಹರಿಸಬೇಕು ಅಂತ ನಾನೂ ಹೈಕಮಾಂಡ್‌ಗೆ ಒತ್ತಾಯಿಸುತ್ತೇನೆ ಎಂದಿದ್ದಾರೆ.

ಬಿಹಾರ ಚುನಾವಣೆ ಬಳಿಕ ಕಾಂಗ್ರೆಸ್‌ನಲ್ಲಿ ಬದಲಾವಣೆಗಳಾಗಲಿವೆ ಎಂಬ ವಿಚಾರವಾಗಿ, ಬದಲಾವಣೆಗಳನ್ನು ಮಾಡಲು ಚುನಾವಣೆಯೇ ಆಗಬೇಕು ಅಂತೇನಿಲ್ಲ. ಬದಲಾವಣೆ ಮಾಡುವುದಿದ್ದರೆ ಹೈಕಮಾಂಡ್‌ನವರು ಮಾಡ್ತಾರೆ. ಸಿಎಂಗೆ ಆಗಲೀ, ಡಿಸಿಎಂಗೆ ಆಗಲೀ, ಎಲ್ಲರಿಗೂ ಜವಾಬ್ದಾರಿ ಇದೆ. ಒಂದು ಕಡೆ ಪ್ರಾಹಿ, ಆ ಕಡೆ ಗಮನ ಕೊಡಬೇಕು. ಸಮಸ್ಯೆಗಳನ್ನು ಬಗೆಹರಿಸುತ್ತ ನಾವು ಹೋಗಬೇಕು. ಎಲ್ಲವನ್ನೂ ಹೈಕಮಾಂಡ್ ಗಮನಿಸುತ್ತಿದೆ. ಆದರೆ ನಮ್ಮ ಆದ್ಯತೆ ಏನು ಅಂತ ನೋಡಬೇಕು ಎಂದರು. ಪೊಲೀಸ್ ಅಧಿಕಾರಿಗಳ ವರ್ಗಾವಣೆ ವಿಚಾರ ಹೈಕಮಾಂಡ್ ಗಮನಕ್ಕೆ ಹೋಗಿಲ್ಲ ಶಾಸಕರು, ಮಂತ್ರಿಗಳ ಭಿನ್ನಾಭಿಪ್ರಾಯದಿಂದ ಗೃಹ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾವಣೆಯಲ್ಲಿ ಗೊಂದಲ ಆಗಿದೆ ಅನ್ನೋದನ್ನು ಅಲ್ಲಗಳೆದ ಅವರು, ನಮ್ಮ ಇಲಾಖೆಯಲ್ಲಿ ವರ್ಗಾವಣೆಗೆ ಅಂತ ನಿಗದಿತ ಸಮಯ ಇಲ್ಲ. 365 ದಿವಸವೂ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ ಆಗುತ್ತಿರುತ್ತೆ. ಯಾಕೆಂದರೆ ಎಲ್ಲೋ ಖಾಲಿ ಇರುತ್ತೆ ಅದನ್ನ ತುಂಬಬೇಕು. ಯಾರೋ ಅಮಾನತು ಆಗ್ತಾರೆ ಆ ಸ್ಥಾನ ತುಂಬಬೇಕು. ನಿವೃತ್ತಿ ಆಗ್ತಾರೆ ಅದನ್ನ ತುಂಬಬೇಕು. ಹೊಸ ನೇಮಕಾತಿ ಆಗುತ್ತೆ ಅವರಿಗೆ ಪೋಸ್ಟಿಂಗ್ ನೀಡಬೇಕು. ಪೊಲೀಸ್ ಇಲಾಖೆಯಲ್ಲಿ ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್ ಇದೆ ಅಲ್ಲಿ ವರ್ಗಾವಣೆ ಮಾಡುವ ಬಗ್ಗೆ ತೀರ್ಮಾನ ಮಾಡಲಾಗುತ್ತದೆ. ಸಬ್ ಇನ್ಸ್‌ಪೆಕ್ಟರ್, ಪಿಸಿಗಳ ವರ್ಗಾವಣೆ ಆಯಾ ಐಜಿಗಳು ತೀರ್ಮಾನ ಮಾಡುತ್ತಾರೆ. ನಿನ್ನೆ ಸಹ ಇನ್ಸ್‌ಪೆಕ್ಟರ್, ಡಿವೈಎಸ್ಪಿಗಳನ್ನು ವರ್ಗಾವಣೆ ಮಾಡಿದ್ದೀವಿ. ಇದಾವುದೂ ಹೈಕಮಾಂಡ್ ಗಮನಕ್ಕೆ ಹೋಗಲ್ಲ ಎಂದಿದ್ದಾರೆ.

ಮತದಾರ ಪಟ್ಟಿ ಪರಿಷ್ಕರಣೆ: ಬಿಜೆಪಿ ತಯಾರಿ

ಬೆಂಗಳೂರು, ಅ.7– ದೇಶಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ನಡೆಸಲು ಚುನಾವಣಾ ಆಯೋಗ ನಿರ್ಧರಿಸಿದ್ದು, ಈ ನಡುವಲ್ಲೇ ರಾಜ್ಯದಲ್ಲೂ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆಗಾಗಿ ರಾಜ್ಯ ಬಿಜೆಪಿ ನಾಯಕರು ಸಿದ್ಧತೆ ಆರಂಭಿಸಿದ್ದಾರೆ.

ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಾಗಾರವನ್ನು ರಾಜ್ಯ ಬಿಜೆಪಿ ಬೆಂಗಳೂರಿನಲ್ಲಿ ನಡೆಸಿದ್ದು, ಈ ಕಾರ್ಯಾಗಾರದಲ್ಲಿ ಶಾಸಕರು, ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ರಾಜ್ಯಾದ್ಯಂತದ ಇತರರು ಸೇರಿದಂತೆ 200 ಕ್ಕೂ ಹೆಚ್ಚು ನಾಯಕರು ಭಾಗವಹಿಸಿದ್ದರು.

ಭಾರತೀಯ ಜನತಾ ಪಕ್ಷ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಬಿಜೆಪಿ ರಾಷ್ಟ್ರೀಯ ಶಿಸ್ತು ಸಮಿತಿ ಅಧ್ಯಕ್ಷ ಓಂ ಪಾಠಕ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಭಾರತೀಯ ಚುನಾವಣಾ ಆಯೋಗ ದೇಶಾದ್ಯಂತ ಕೈಗೊಳ್ಳಲಿರುವ ಮತದಾರರ ಪಟ್ಟಿಯ ಎಸ್‌ಐಆರ್ ಬಗ್ಗೆ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ಹೇಳಿದರು.

ಬಿಹಾರದಲ್ಲಿ ಎಸ್‌ಐಆರ್ ಪೂರ್ಣಗೊಂಡಿದ್ದು, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಕರ್ನಾಟಕದಲ್ಲೂ ಘೋಷಣೆಯಾಗಲಿದೆ. ಹೀಗಾಗಿ ಬಿಜೆಪಿ ಸಿದ್ಧತೆ ನಡೆಸುತ್ತಿದೆ ಎಂದು ತಿಳಿಸಿದರು. ಇದೇ ವೇಳೆ ಕಾಂಗ್ರೆಸ್ ಮತ್ತು ಇಂಡಿಯಾ ಬಣದ ಇತರೆ ಪಕ್ಷಗಳನ್ನು ಟೀಕಿಸಿದ ಅವರು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ ಬಗ್ಗೆ ಕೆಲವರು ತಪ್ಪು ಕಲ್ಪನೆಗಳ ಸೃಷ್ಟಿಸಲು ಯತ್ನಿಸುತ್ತಿದ್ದಾರೆಂದು ಆರೋಪಿಸಿದರು.

ಮೈಸೂರು ಪೇಟ ತಯಾರಕ ನಂದನ್ ಸಿಂಗ್‌ಗೆ ಸನ್ಮಾನ



ಮೈಸೂರು ಪೇಟ ತಯಾರಕ ನಂದನ್‌ಸಿಂಗ್ ಅವರನ್ನು ಕುಟುಂಬ ಸಮೇತ ಮಂಗಳವಾರ ಅಭಿನಂದಿಸಲಾಯಿತು.

ಮೈಸೂರು, ಅ.7– ಮೈಸೂರಿನ ಪಾರಂಪರಿಕ 'ಮೈಸೂರು ಪೇಟ' ತಯಾರಕರಲ್ಲಿ ಪ್ರಮುಖರು, ಜೊತೆಗೆ ಅನೇಕ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಗಣ್ಯರಿಗೆ ಪೇಟಗಳನ್ನು ಒದಗಿಸುತ್ತಾ ಬಂದಿರುವ ನಂದನ್ ಸಿಂಗ್ ಅವರನ್ನು ಅವರ ಮನೆಯಲ್ಲಿಯೇ ಸನ್ಮಾನಿಸಲಾಯಿತು.

ದೀಪ್ತಿ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಲೇಖಕ ಕಾಳಿಹುಂಡಿ ಶಿವಕುಮಾರ್, ಮೈಸೂರು ಆಕಾಶವಾಣಿಯ ಕೇಳುಗರ ಬಳಗ ಸಮುದ್ಯತಾದ ಅಧ್ಯಕ್ಷ ಕಣ್ಣೂರು ವಿ ಗೋವಿಂದಾಚಾರಿ, ನಂದನ್ ಸಿಂಗ್ ಅವರ ತಾಯಿ ಸರೋಜಾ ಬಾಯಿ, ಪತ್ನಿ ಛಾಯಾ ಬಾಯಿ, ಮಕ್ಕಳಾದ ಲಿಖಿತ ಮತ್ತು ಸ್ಮಿತಾ ಹಾಜರಿದ್ದರು.

ಕರ್ನಾಟಕ ಅಂಡರ್–19 ತಂಡದ ನಾಯಕನಾಗಿ ರಾಹುಲ್ ದ್ರಾವಿಡ್ ಕಿರಿಯ ಪುತ್ರ ಅನ್ವಯ್ ಆಯ್ಕೆ



ಬೆಂಗಳೂರು, ಅ.7– ಹಿರಿಯ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರ ಕಿರಿಯ ಪುತ್ರ ಅನ್ವಯ್ ದ್ರಾವಿಡ್ ಕರ್ನಾಟಕ ಅಂಡರ್–19 ತಂಡದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಅಕ್ಟೋಬರ್ 9 ರಿಂದ 17 ರವರೆಗೆ ಡೆಹ್ರಾಡೂನ್‌ನಲ್ಲಿ ನಡೆಯಲಿರುವ ವಿನೂ ಮಂಕಡ್ ಟೂರ್ನಿಗಾಗಿ ಕರ್ನಾಟಕ ತಂಡವನ್ನು ಪ್ರಕಟಿಸಲಾಗಿದ್ದು, ಈ ತಂಡದ ನಾಯಕರಾಗಿ ಅನ್ವಯ್ ದ್ರಾವಿಡ್ ತಂಡ ಮುನ್ನಡೆಸಲಿದ್ದಾರೆ.

ವಿಶೇಷ ಎಂದರೆ ಅನ್ವಯ್ ದ್ರಾವಿಡ್ ವಿಕೆಟ್ ಕೀಪರ್ ಬ್ಯಾಟರ್. ಹೀಗಾಗಿ ಈ ಟೂರ್ನಿಯಲ್ಲಿ ಅವರು ಕೀಪಿಂಗ್ ಜವಾಬ್ದಾರಿಯೊಂದಿಗೆ ನಾಯಕನಾಗಲಿದ್ದಾರೆ. ಭಾನುವಾರವಷ್ಟೇ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಿಂದ ಅತ್ಯುತ್ತಮ ಕಿರಿಯ ಬ್ಯಾಟರ್ ಪ್ರಶಸ್ತಿ ಪಡೆದಿದ್ದ ಅನ್ವಯ್‌ಗೆ ಇದೀಗ ನಾಯಕತ್ವ ಒಲಿದಿದೆ.

ಈಗಾಗಲೇ ಶಾಂತ ಸ್ವಭಾವದಿಂದ ಗಮನ ಸೆಳೆದಿರುವ ಅನ್ವಯ್ ವಿನೂ ಮಂಕಡ್ ಟೂರ್ನಿಯಲ್ಲಿ ತಂಡವನ್ನು ಯಶಸ್ವಿಯಾಗಿ ಮುನ್ನಡೆಸಿದರೆ, ಕೆಲ ವರ್ಷಗಳ ಕಾಲ ಅವರನ್ನೇ ನಾಯಕನ್ನಾಗಿ ಮುಂದುವರೆಸುವ ಸಾಧ್ಯತೆಯಿದೆ.

ಕರ್ನಾಟಕ ಅಂಡರ್–19 ತಂಡ: ಅನ್ವಯ್ ದ್ರಾವಿಡ್ (ನಾಯಕ, ವಿಕೆಟ್ ಕೀಪರ್), ನಿತೀಶ್ ಆರ್ಯ, ಆದರ್ಶ್ ಡಿ ಅರಸ್, ಎಸ್ ಮಣಿಕಾಂತ್ (ಉಪನಾಯಕ), ಪ್ರಣೀತ್ ಶೆಟ್ಟಿ, ವಾಸವ್ ವೆಂಕಟೇಶ್, ಅಕ್ಷತ್ ಪ್ರಭಾಕರ್, ಸಿ. ವೈಭವ್, ಕುಲದೀಪ್ ಸಿಂಗ್ ಪುರೋಹಿತ್, ರತನ್ ಬಿ.ಆರ್., ವೈಭವ್ ಶರ್ಮಾ, ಕೆ.ಎ. ತೇಜಸ್, ಅಥರ್ವ್ ಮಾಳವಿಯಾ, ಸನ್ನಿ ಕಾಂಚಿ, ರೆಹಾನ್ ಮೊಹಮ್ಮದ್ (ವಿಕೆಟ್ ಕೀಪರ್).